ಜನಶಕ್ತಿ


ಕನ್ನಡ ವಾರಪತ್ರಿಕೆ

ಸ್ವಾತಂತ್ರ್ಯ

ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆ

2008











ಹೆಣ್ಣು - ತಾಯಿಯಾಗಿ ಬೇಕು, ಪತ್ನಿಯಾಗಿ ಬೇಕು, ಸಹೋದರಿಯಾಗಿ ಬೇಕು, ಮಗಳಾಗಿ ಬೇಡವೇ ?



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಹೆಣ್ಣಿನ ಅಳಿವು-ಸೃಷ್ಟಿಯ ಅಂತ್ಯ
ಭ್ರೂಣಲಿಂಗ ಪತ್ತೆಯನ್ನು ತಡೆಯಲು ನೆರವಾಗಿರಿ

ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಪುರುಷ-ಮಹಿಳೆಯರ ಅನುಪಾತದಲ್ಲಿ ಕಂಡುಬಂದಿರುವ ಅಸಮತೋಲನ ಆತಂಕಕಾರಿಯಾಗಿದೆ. ಈ ರೀತಿ ಮಹಿಳೆಯರ ಪ್ರಮಾಣವು ಗಣನೀಯ ಇಳಿಮುಖಕ್ಕೆ ಕಾರಣವಾಗಿರುವುದು ಭ್ರೂಣಲಿಂಗ ಪತ್ತೆ ಹಾಗೂ ತದನಂತರ ಮಾಡುವ ಹೆಣ್ಣು ಭ್ರೂಣದ ಹತ್ಯೆ ಎಂಬುದು ಬೆಳಕಿಗೆ ಬಂದಿರುತ್ತದೆ.



ಶ್ರೀ ಬಿ. ಶ್ರೀರಾಮುಲು
ಸನ್ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಇದಕ್ಕೆ ಕಡಿವಾಣ ಹಾಕಲು, ಭ್ರೂಣಲಿಂಗ ಪತ್ತೆ ನಿಷೇಧ ಕಾಯಿದೆಯನ್ನು 1994ರಲ್ಲಿ ಜಾರಿಗೆ ತರಲಾಗಿದೆ

ಹೆಣ್ಣು ಮಕ್ಕಳ ಸಂಖ್ಯೆಯಲ್ಲಿ ಇಳಿಮುಖದ ದುಷ್ಪರಿಣಾಮಗಳು

- ಮಹಿಳೆಯರ ಮೇಲಿನ ಅತ್ಯಾಚಾರ ಹೆಚ್ಚಾಗುತ್ತದೆ.
- ಕುಟುಂಬ ವ್ಯವಸ್ಥೆ ಹದಗೆಡುತ್ತದೆ.
- ಮಕ್ಕಳ ಬೆಳವಣಿಗೆ ಕುಂಠಿತವಾಗುತ್ತದೆ.
- ವಿವಾಹ ವಿಚ್ಛೇದನಗಳು ಹೆಚ್ಚಾಗುತ್ತವೆ.
- ಗಂಡು ಮಕ್ಕಳಿಗೆ ವಧುಗಳ ಕೊರತೆ ಉಂಟಾಗುತ್ತದೆ.
- ಲೈಂಗಿಕ ರೋಗಗಳು ಹೆಚ್ಚಾಗುತ್ತವೆ.
- ಸಾಮಾಜಿಕ ಅಭದ್ರತೆಯಿಂದ ಅಪರಾಧಿಗಳಾಗುತ್ತಾರೆ.

ಭ್ರೂಣಲಿಂಗ ಪತ್ತೆಗೆ ಶಿಕ್ಷೆ

- ಭ್ರೂಣಲಿಂಗ ಪತ್ತೆ ಹಚ್ಚುವುದು ಅಪರಾಧ.
- ಕಾಯ್ದೆಯನ್ನು ಉಲ್ಲಂಘಿಸಿ ಭ್ರೂಣಲಿಂಗ ಪತ್ತೆ ಮಾಡಿದ್ದು ತಿಳಿದು ಬಂದಲ್ಲಿ, 5 ವರ್ಷ ಜೈಲು ಶಿಕ್ಷೆ ಹಾಗೂ ರೂ. 5000 /- ದಿಂದ ರೂ 1 ಲಕ್ಷದವರೆಗೆ ದಂಡ ವಿಧಿಸಲಾಗುತ್ತದೆ.
- ಕುಟುಂಬದ ಯಾವುದೇ ಸದಸ್ಯರಾಗಲಿ, ಭ್ರೂಣ ಲಿಂಗ ಪತ್ತೆಗೆ ಒತ್ತಾಯಿಸಿದಲ್ಲಿ ಅವರೂ ಕೂಡ ಶಿಕ್ಷೆಗೆ ಅರ್ಹರಾಗುತ್ತಾರೆ.

ಎಂ. ಮದನ್ ಗೋಪಾಲ್, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪಿ. ಎನ್. ಶ್ರೀನಿವಾಸಾಚಾರಿ, ಭಾ.ಆ.ಸೇ.
ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ನಿಲಯ ಮಿತಾಶ್, ಭಾ.ಆ.ಸೇ.
ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ

ಡಾ. ಉಷಾ ಡಿ ವಾಸುಂಕರ್
ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಪ್ರಕಟಣೆ :
2005 - 2012
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆನಂದ್‌ರಾವ್ ವೃತ್ತ, ಬೆಂಗಳೂರು - 560 009

ಹೆಣ್ಣು ಮಗುವನ್ನು ರಕ್ಷಿಸಿ !

ದುಡಿವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರ ಪತ್ರಿಕೆ

No.KARKAN/2006/17926



ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆ - 2008

ಬೆಲೆ ರೂ: 10/-

ಜನಶಕ್ತಿ ಕನ್ನಡ ವಾರ ಪತ್ರಿಕೆ

ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು- 560 027
E-mail : js_weekly@yahoo.com
web : www.janashakthi.org

ಮುದ್ರಣ :
ಕ್ರಿಯಾಪ್ರಕಾಶನ ಪ್ರೈ.ಲಿ.
ನಂ.12, 18ನೇ ಅಡ್ಡರಸ್ತೆ,
ಸಂಪಂಗಿರಾಮನಗರ,
ಬೆಂಗಳೂರು- 560 027

ಒಳಪುಟಗಳಲ್ಲಿ.....

ಕೃತಜ್ಞತೆಗಳು

- ಲೇಖಕರಿಗೆ
- ಜಾಹಿರಾತುದಾರರಿಗೆ
- 'ಬರ್ಕ್‌ವೈಟ್ ಕಂಡ ಭಾರತ' ಕೃತಿಯ ಲೇಖಕಿ ಬರ್ಕ್‌ವೈಟ್, ಅನುವಾದಕರಾದ ಡಾ॥ ಕೆ.ಆರ್. ಸಂಧ್ಯಾರೆಡ್ಡಿ ಮತ್ತು ಪುಸ್ತಕ ಪ್ರಕಟಿಸಿದ ಕನ್ನಡ ಪುಸ್ತಕ ಪ್ರಾಧಿಕಾರದವರಿಗೆ
- ಕ್ರಿಯಾದ ಸಂಗಾತಿ ಚಂದ್ರುರವರಿಗೆ
- ಮುಖಪುಟ ರಚಿಸಿದ ರಾಮುರವರಿಗೆ
- ಅಕ್ಷರ ಜೋಡಿಸಿದ ರೇಖಾ, ಮುದ್ರಣ ಘಟಕದ ಕೆಲಸಗಾರರು ಹಾಗೂ ಸಹಕರಿಸಿದ ಎಲ್ಲರಿಗೂ

ಮುದ್ರಕರು : ವಿ.ಜೆ.ಕೆ.ನಾಯರ್
ಸಂಪಾದಕರು : ಎಸ್.ವೈ.ಗುರುಶಾಂತ್

ಮೊದಲ ಮಾತು..

ಆತ್ಮೀಯರೇ,

ದೇಶ ಸ್ವಾತಂತ್ರ್ಯಗಳಿಸಿ ಆರು ದಶಕಗಳು ಉರುಳಿ ಇದೀಗ 61ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದ್ದೇವೆ. ಸುದೀರ್ಘ ಸ್ವಾತಂತ್ರ್ಯ ಚಳುವಳಿಗೆ ತಮ್ಮ ಸಮಸ್ತವನ್ನು ಸಮರ್ಪಿಸಿದ ಹೋರಾಟಗಾರರಷ್ಟೋ. ತಮ್ಮ ಪ್ರಾಣವನ್ನೇ ಬಲಿದಾನಗೈದ ಹುತಾತ್ಮರೆಷ್ಟೋ.


ಲಕ್ಷ ಲಕ್ಷ ಜನರ ಕಠಿಣ ಹೋರಾಟ, ತ್ಯಾಗದ ಫಲವಾಗಿ ದೇಶ ರಾಜಕೀಯ ಸ್ವಾತಂತ್ರ್ಯವನ್ನೇನೋ ಗಳಿಸಿತು. ಆದರೆ ಸ್ವಾತಂತ್ರ್ಯ ಹೋರಾಟಗಾರರ ಮಹಾನ್ ಆಶೋತ್ತರಗಳು, ಕನಸುಗಳು ಈಡೇರಿದವೇ? ಸ್ವತಂತ್ರ ಭಾರತ ಸಾಧಿಸಿದ್ದೇನು? ಸ್ವಾತಂತ್ರ್ಯವು ಕೋಟಿ ಕೋಟಿ ಕಾರ್ಮಿಕರು, ರೈತರು, ಕೂಲಿಕಾರರು, ದುಡಿಯುವ ಜನರು, ದಲಿತರು, ಹಿಂದುಳಿದವರು, ಮಹಿಳೆಯರು, ಇವರ ಬದುಕಿನಲ್ಲಿ ತಂದ ಬದಲಾವಣೆ ಏನು? ಇಂತಹ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾದ ಅಗತ್ಯವಿದೆ. ಇಂತಹ ಪ್ರಶ್ನೆಗಳನ್ನು ಕೇಳಿಕೊಂಡು, ಸ್ವಾತಂತ್ರ್ಯ ಹೋರಾಟವನ್ನು, ಭಾರತ ಗಳಿಸಿದ ಸ್ವಾತಂತ್ರ್ಯದ ಸ್ವರೂಪವನ್ನು, ಜನರ ಬದುಕನ್ನು ಕುರಿತು ಚಿಂತಿಸಿದ, ಹಾಗೂ ಭಾರತ ದೇಶವು ಪ್ರಸ್ತುತ ಎದುರಿಸುತ್ತಿರುವ ಗಂಭೀರ ಸವಾಲುಗಳ ಕುರಿತು ಯೋಚಿಸಿದ ಚಿಂತಕರ, ಬರಹಗಾರರ ಬರಹಗಳು ಈ ಸಂಚಿಕೆಯಲ್ಲಿವೆ.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹರಿಕಿಶನ್‌ಸಿಂಗ್ ಸುರ್ಜಿತ್ ಅವರ ಸ್ವಾತಂತ್ರ್ಯ ಹೋರಾಟದ ಅವಲೋಕನ–ಅದರ ಐತಿಹಾಸಿಕ ಮೈಲುಗಲ್ಲುಗಳು ಇಲ್ಲಿ ಪ್ರಖರ ವಿಮರ್ಶಾತ್ಮಕ ದೃಷ್ಟಿಯೊಂದಿಗೆ ದಾಖಲಾಗಿದೆ. ಖ್ಯಾತ ಪತ್ರಕರ್ತೆ 'ಬರ್ಕ್‌ವೈಟ್' ಕಂಡಂತೆ ಭಾರತದ ವಿಭಜನೆಯ ಧಾರುಣ ಚಿತ್ರ, ಸ್ವಾತಂತ್ರ್ಯ ಚಳುವಳಿಯಲ್ಲಿ ದುಡಿಯುವ ವರ್ಗ ವಹಿಸಿದ ಅಮೋಘ ಪಾತ್ರ, ಕಾರ್ಮಿಕರ ದೃಷ್ಟಿಯಲ್ಲಿ ಭಾರತಗಳಿಸಿದ ಸ್ವಾತಂತ್ರ್ಯದ ಅರ್ಥ, ಪ್ರಸ್ತುತ ಭಾರತ ಎದುರಿಸುತ್ತಿರುವ ಕೋಮುವಾದ, ಭಯೋತ್ಪಾದನೆಯ ಗಂಭೀರ ಸಮಸ್ಯೆಗಳು, ಭಾರತ ಅಮೇರಿಕಾ ಅಣು ಒಪ್ಪಂದದಂತಹ ಬೆಳವಣಿಗೆಯಿಂದಾಗಿ ದೇಶದ ಸಾರ್ವಭೌಮತೆಗೆ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಬಂದಿರುವ ಗಂಭೀರ ಬೆದರಿಕೆ ಈ ಎಲ್ಲವುಗಳ ಕುರಿತು ಖ್ಯಾತ ಲೇಖಕರ ಬರಹಗಳನ್ನು ಸಂಚಿಕೆ ಒಳಗೊಂಡಿದೆ.

ಸ್ವಾತಂತ್ರ್ಯೋತ್ಸವದ ಸಂದರ್ಭಕ್ಕೆ ಇದೊಂದು ಅರ್ಥಪೂರ್ಣ ಸಂಚಿಕೆಯ ಎಂದು ನಾವು ಭಾವಿಸಿದ್ದೇವೆ.ಓದುಗರು ಇಲ್ಲಿನ ವಿಶ್ಲೇಷಣೆ, ಮಾಹಿತಿಗಳ ಪ್ರಯೋಜನ ಪಡೆದಲ್ಲಿ ಪತ್ರಿಕೆಯ ಶ್ರಮ ಸಾರ್ಥಕವಾಗಲಿದೆ.

ಸಂಪಾದಕ

ಆಗಸ್ಟ್ 15 : ಆತ್ಮಾವಲೋಕನ ದಿನ




ಸ್ವಾತಂತ್ರ್ಯ ದಿನಾಚರಣೆಯಂದು ದೆಹಲಿಯ ಕೆಂಪು ಕೋಟೆಯ ಮೇಲಿ ನಿಂದ ಪ್ರಧಾನಿಯವರು ಭಾಷಣ ಮಾಡುವುದು ನಡೆದುಬಂದಿರುವ ರೂಢಿ, ಆದರೆ ಸ್ವಾತಂತ್ರ್ಯ ಸಂಗ್ರಾಮದದಲ್ಲಿ ಈ ನೆಲ ಹಲವು ಮಹಾನ್ ಘಟನೆಗಳ ಸ್ಫೂರ್ತಿಯ ನೆಲೆಯಾಗಿತ್ತೆಂಬುದು ಬಹಳಷ್ಟು ಜನರಿಗೆ ಗೊತ್ತೇ ಇಲ್ಲ, ಸ್ವಾತಂತ್ರ್ಯ ಪಡೆದ ಬ್ರಿಟಿಷ್ ವಸಾಹತುಶಾಹಿಗಳಿಂದ ಭಾರತ ಹೇಗೆ ಸ್ವಾತಂತ್ರ್ಯ ಪಡೆಯಿತು? ಆಧುನಿಕ ಭಾರತ ಸಾಗಿಬಂದ ಹಾದಿ – ಮತ್ತು ಸವಾಲಿನ ಸಂದರ್ಭಗಳನ್ನು ಕೂಲಂಕುಶವಾಗಿ ಅವಲೋಕಿಸಿದ್ದಾರೆ ಹರ್‌ಕಿಶನ್‌ಸಿಂಗ್ ಸುರ್ಜಿತ್‌ರವರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಸುರ್ಜೀತ್‌ರವರು ತಮ್ಮ ಬದುಕಿನ ಕೊನೆಯ ಹಂತದಲ್ಲಿ ಬರೆದ ಅಮೂಲ್ಯ ಲೇಖನವಿದು.

ಹರಿಕಿಶನ್‌ಸಿಂಗ್ ಸುರ್ಜಿತ್

ಈ ಕೆಂಪುಕೋಟೆ ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಪಡೆದಿದೆ. ಯಾಕೆಂದರೆ ಕೊನೆಯ ಮೊಗಲ ಬಾದಶಹ ಬಹದೂರ್ ಶಹಾ ಜಫರ್ ಇಲ್ಲಿಂದಲೇ ಮೇ 11, 1857 ರಂದು ಸಿಪಾಯಿಗಳನ್ನುದ್ದೇಶಿಸಿ ಮಾತನಾಡಿ ಮೊದಲ ಸ್ವಾತಂತ್ರ್ಯ ಯುದ್ಧಕ್ಕೆ ಪ್ರೇರಣೆ ನೀಡಿದ. ನಂತರ 1945 ರಲ್ಲಿ ಇಲ್ಲೇ ಅಝಾದ್ ಹಿಂದ್ ಫೌಜಿನ (ಐಎನ್‌ಎ) ಮೂವರು ಸೇನಾನಿಗಳು (ಸೆಹಗಲ್, ಶಾಹನವಾಜ್ ಮತ್ತು ಥಿಲ್ಲೋಂ) ವಿಚಾರಣೆಯನ್ನು ಬ್ರಿಟಿಷರು ನಡೆಸಿದರು. ಈ ವಿಚಾರಣೆ ಇಡೀ ದೇಶದಲ್ಲಿ ವಿದ್ಯುತ್ ಸಂಚಾರ ತಂದಿತು. ಪ್ರತಿದಿನ ಸಾವಿರ ಸಾವಿರ ಸಂಖ್ಯೆಯಲ್ಲಿ ಜನ ಕೆಂಪುಕೋಟೆಯ ಮೈದಾನದಲ್ಲಿ ಸೇರಿ ಐಎನ್‌ಎ ವೀರರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಕ್ರೋಧಭರಿತ ಘೋಷಣೆಗಳನ್ನು ಹಾಕಿದರು. ಜನರ ಒತ್ತಡ ಪ್ರಮಾಣ ಎಷ್ಟಿತ್ತೆಂದರೆ ನೆಹರೂ ದೀರ್ಘಕಾಲದ ನಂತರ ವಕೀಲರ ಕೋಟು ಧರಿಸಿ ಅವರ ರಕ್ಷಣೆಗಿಳಿದರು. ಇದು ಬ್ರಿಟಿಷ್ ಆಳ್ವಿಕೆಯನ್ನು ಇನ್ನು ಮುಂದೆ ಸಹಿಸಲು ಭಾರತೀಯ ಜನಸಮೂಹಗಳು ಸಿದ್ಧರಿರಲಿಲ್ಲ ಎಂಬುದರ ಸಂಕೇತವಾಗಿತ್ತು. ಹೌದು, ಅವರು ಅಂತಿಮವಾಗಿ ಬ್ರಿಟಿಷರು ಐಎನ್‌ಎ ವೀರರನ್ನು ಬಿಡುಗಡೆ ಮಾಡುವಂತೆ ಮಾಡಿಯೇ ಬಿಟ್ಟರು.

ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬಲಿದಾನ



ಅಷ್ಟೇ ಅಲ್ಲ, ಈ ಐಎನ್‌ಎ ವೀರರಲ್ಲಿ ಒಬ್ಬರು ಹಿಂದೂ, ಇನ್ನೊಬ್ಬರು ಮುಸ್ಲಿಂ ಹಾಗೂ ಮೂರನೇಯವರು ಸಿಖ್ಖರಾಗಿದ್ದು ಭಾರತದ ನಿಜವಾದ ಚೈತನ್ಯದ ಒಂದು ಮಹತ್ವದ ಸಂಕೇತವಲ್ಲದೆ ಮತ್ತೇನೂ ಇಲ್ಲ. ಅದೊಂದು ಆನಂದವುಂು ಆಕಸ್ಮಿಕವಷ್ಟೇ ಆಗಿದ್ದರೂ, ಖಂಡಿತಾ ಅದು ವೈವಿಧ್ಯತೆಯಲ್ಲಿನ ನಮ್ಮ ಮೂಲಭೂತ ಐಕ್ಯತೆಯನ್ನು ಎತ್ತಿ ಹಿಡಿಯಲು ಜನತೆಗೆ ಕುಮ್ಮಕ್ಕು ನೀಡಿತು. ಇದೇ ರೀತಿಯ ವೈವಿಧ್ಯತೆಯಲ್ಲಿನ ಐಕ್ಯತೆಯಲ್ಲಿನ ಇನ್ನೊಂದು ಘಟನೆಯೆಂದರೆ ಇದಾದ ಸ್ವಲ್ಪ ದಿನಗಳಲ್ಲೇ ನಡೆದ ನಾವಿಕ ಬಂಡಾಯ. ಈ ಬಂಡಾಯ ಬ್ರಿಟಿಷರಿಗೆ ತಮ್ಮ ಕೊನೆಯ ದಿನಗಳು ಸಮೀಪವಾಗಿದೆ ಎಂಬುದು ಮನದಟ್ಟು ಮಾಡಿಸಿತು.

ಮೈಲಿಗಲ್ಲು

ಆಗಸ್ಟ್ 1947 ರಲ್ಲಿ ಭಾರತದ ಸ್ವಾತಂತ್ರ್ಯ

ಇತಿಹಾಸದ ಒಂದು ಪ್ರಮುಖ ಮೈಲಿಗಲ್ಲಾಯಿತು. ಎರಡನೇ ಮಹಾಯುದ್ಧ ಫ್ಯಾಸಿಸಂ ಬೆದರಿಕೆಯನ್ನು ಧ್ವಂಸ ಮಾಡಿತಲ್ಲದೆ, ಹಳೆಯ ಸಾಮ್ರಾಜ್ಯಶಾಹಿ ಯನ್ನು ಎಷ್ಟು ದುರ್ಬಲ ಗೊಳಿಸಿತೆಂದರೆ ಅವುಗಳು ತಮ್ಮ ವಸಾಹತುಗಳನ್ನು ಉಳಿಸಿಕೊಳ್ಳುವ ಸ್ಥಿತಿಯಲ್ಲಿ ರಲಿಲ್ಲ. ಹೀಗೆ ಅವರು ವಸಾಹುತಗಳಲ್ಲೇ ಅತಿ ದೊಡ್ಡದಾದ ಭಾರತವನ್ನು ಬಿಟ್ಟುಹೋಗ ಬೇಕಾಯಿತು. ಇದು ಒಂದು ಸರಣಿ ಪ್ರಕ್ರಿಯೆಯನ್ನೇ ಆರಂಭಿಸಿತು. ಹಲವಾರು ದೇಶಗಳು ಸಾಮ್ರಾಜ್ಯಶಾಹಿಯ ಸಂಕೋಲೆಗಳನ್ನು ಮುರಿದವು.

ಜಗತ್ತಿನ ಸ್ವಾತಂತ್ರ್ಯ ಹೋರಾಟದ ಮೇಲೆ ಗಾಢ ಪ್ರಭಾವ ಬೀರಿದ ರಷ್ಯಾದ ಅಕ್ಟೋಬರ್ ಕ್ರಾಂತಿ



ಭಾರತದ ಬೆಂಬಲ ಕೂಡಾ ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾ ಆಂದೋಲನಗಳಲ್ಲಿ ದೊಡ್ಡ ಪಾತ್ರ ವಹಿಸಿತು. ಜನಾಂಗದ್ವೇಷಿ ದಕ್ಷಿಣ ಆಫ್ರಿಕಾದ ಬಹಿಷ್ಕಾರಕ್ಕೆ ಹಿಂಜರಿಯುತ್ತಿದ್ದ ಸಾಮ್ರಾಜ್ಯಶಾಹಿ ದೇಶಗಳನ್ನು ಅದಕ್ಕೊಪ್ಪುವಂತೆ ಮಾಡುವಲ್ಲಿ ನಮ್ಮ ಪಾತ್ರ ಎಲ್ಲರಿಗೂ ತಿಳಿದಿದೆ. ನಿಜ ಸಂಗತಿಯೆಂದರೆ ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ನಮ್ಮ ಬೆಂಬಲ ಒಂದು ಗುಲಾಮ ಸ್ಥಿತಿಗೆ ತಳ್ಳಲ್ಪಟ್ಟಿದ ದೇಶ ಬೇರೆ ಯಾವ ದೇಶವೂ ಇಂತಹ ಸಂಕೋಲೆಯಲ್ಲಿರಬಾರದು ಎಂಬ ನೋವಿನ ಆಶಯವನ್ನು ಬಿಂಬಿಸಿತ್ತು.

ಸ್ವತಂತ್ರ ಭಾರತದ ಆಳರಸರಿಗೆ ಯುದ್ಧಾನಂತರದ ಸನ್ನಿವೇಶದಲ್ಲಿ ಅಮೆರಿಕದ ಆಶಯಗಳ ಬಗ್ಗೆ ಬಹಳ ಭ್ರಮೆಗಳಿದ್ದರೂ, ಘಟಾನುಕ್ರಮ ಸುರುಳಿ ಬಿಚ್ಚಲಾರಂಭಿಸಿದಂತೆ ಒಂದು ಸ್ವಾವಲಂಬೀ ಬೆಳವಣಿಗೆಯ ದಾರಿಯನ್ನು ಅನುಸರಿಸಬೇಕಾದ ಅಗತ್ಯದ ಬಗ್ಗೆ ಮನವರಿಕೆಯಾಯಿತು. ಅವರು ಹಿಡಿದ ದಾರಿ ಬೆಳವಣಿಗೆಯ ಬಂಡವಾಳಶಾಹಿ ದಾರಿಯಾಗಿದ್ದರೂ ಅದು ಬ್ಲಾಕ್‌ಮೇಲ್ ಮಾಡುವ ಸಾಮ್ರಾಜ್ಯಶಾಹಿ ಪ್ರಯತ್ನಗಳ ವಿರುದ್ಧ ಹೊಸದಾಗಿ ಸ್ವತಂತ್ರಗೊಂಡ ದೇಶಗಳನ್ನು ತಮ್ಮ ಹಿತಾಸಕ್ತಿಗಳನ್ನು ಎತ್ತಿ ಹಿಡಿಯಲು ಅವರನ್ನೆಲ್ಲಾ ಅಣಿನೆರೆಸಲು ಕ್ರಮಗಳನ್ನು ಕೈಗೊಳ್ಳುವಂತೆ ಮಾಡಿತು. ಹೀಗೆ ಭಾರತ ಮತ್ತು ಪಂಚಶೀಲವನ್ನು ಸಾರಿದ ಚೀಣಾ ಜನತಾ ಗಣತಂತ್ರವೂ ಸೇರಿದಂತೆ ಏಶ್ಯದ ಹೊಸದಾಗಿ ಸ್ವಾತಂತ್ರ್ಯ ಗೊಂಡ ದೇಶಗಳು ಬಾಂಡುಂಗ್ (ಇಂಡೋನೇಶ್ಯಾ)ನಲ್ಲಿ ಜೊತೆಗೂಡಿದವು. ನಂತರ ವಿಶ್ವದ ಇಪ್ಪತ್ತೈದಕ್ಕೂ ಹೆಚ್ಚು ದೇಶಗಳು ಬೆಲ್ಗ್ರೇಡ್ ನಲ್ಲಿ ಸಭೆ ಸೇರಿದವು. ಅಲ್ಲಿ ಅಲಿಪ್ತ ಆಂದೋಲನ ಜನ್ಮ ತಾಳಿತು. ಇದೊಂದು ಶಕ್ತಿಯಾಗಿ ಮೂಡಿ ಬಂತು. ಭಾರತ ಇದನ್ನೂ ಬೆಸೆಯವಲ್ಲಿ ಮತ್ತು ಬಲಪಡಿಸುವಲ್ಲಿ ಸಾಕಷ್ಟು ಮಹತ್ವದ ಪಾತ್ರ ವಹಿಸಿತು.

ಅಕ್ಟೋಬರ್ ಕ್ರಾಂತಿಯ ಪ್ರಭಾವ

ನಮ್ಮ ಸ್ವಾತಂತ್ರ್ಯ ಹೋರಾಟದ ಇನ್ನೊಂದು ಅಷ್ಟೇ ಮಹತ್ವದ ಅಂಶವೂ ಇದೆ. ರಶ್ಯಾದ ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರಭಾವ ದಿಂದಾಗಿ ಭಾರತ ಸ್ವತಂತ್ರವಾದ ನಂತರ ಯಾವ ದಿಕ್ಕು ಹಿಡಿಯುಬೇಕು ಎಂಬುದರ ಒಂದು ಸ್ಪಷ್ಟ ಪರಿಕಲ್ಪನೆಯನ್ನು ನಮ್ಮ ವಿಮೋಚನಾ ಆಂದೋಲನ ಪಡೆಯಿತು. ಇದರರ್ಥ ಇದರ ಮೊದಲಿನ ಸ್ವಾತಂತ್ರ್ಯ ಹೋರಾಟಗಾರರಿಗೆ ಆರ್ಥಿಕ ತತ್ವಗಳ ಅರಿವಿರಲಿಲ್ಲ ಎಂದೇನಲ್ಲ. 1857 ರಷ್ಟು ಹಿಂದೆಯೇ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷ್ ಆಳ್ವಿಕೆಯಡಿ ಭಾರತೀಯ ರೈತರ, ಕುಶಲಕರ್ಮಿಗಳ ಹಾಗೂ ನಗರಗಳ ಜನಗಳು ಕೂಡಾ ವಿನಾಶಕ್ಕೊಳ್ಳುತ್ತಿರುವುದರ ಬಗ್ಗೆ ಆತಂಕಿತರಾಗಿದ್ದರು. ಈ ಪ್ರಕ್ರಿಯೆಯನ್ನೇ ನಂತರ ದಾದಾಭಾಯಿ ನವರೋಜಿ 'ಬ್ರಿಟಿಷರಿಗೆ ತಕ್ಕುದಲ್ಲದ' ನಡೆ ಎಂದರು. ಈ ವಿಭಾಗಗಳತ್ತ ಗಮನ ಹರಿಸುವಂತೆ ಹೇಳಿದರು. ಆದರೂ ಒಟ್ಟಾರೆಯಾಗಿ **ಆಗ ಸ್ವಾತಂತ್ರ್ಯ ಹೋರಾಟಗಾರರ ಆರ್ಥಿಕ ಕಣ್ಣೋಟ ಸೀಮಿತವಾಗಿತ್ತು, ಅಸ್ಪಷ್ಟವಾಗಿತ್ತು ಹಾಗೂ ಸ್ವಲ್ಪಮಟ್ಟಿಗೆ ಪುನರುತ್ಥಾನವಾದಿಯಾಗಿತ್ತು. ಬ್ರಿಟಿಷರನ್ನು ಹೊರದಬ್ಬುವುದೇ ಅವರ ಪ್ರಧಾನ ಉದ್ದೇಶವಾಗಿತ್ತು. ಆಮೇಲೆ ಏನು ಎಂಬ ಬಗ್ಗೆ ಅವರು ಅಷ್ಟಾಗಿ ಗಮನ ನೀಡಲಿಲ್ಲ.**

ಆದರೆ ಅಕ್ಟೋಬರ್ ಕ್ರಾಂತಿಯ ಪ್ರಭಾವ ಆರ್ಥಿಕ ಕಣ್ಣೋಟವನ್ನು, ರಾಜಕೀಯ ಕಣ್ಣೋಟವನ್ನು

ಮೂಲಭೂತವಾಗಿ ಬದಲಿಸಿತು. ರಾಜಕೀಯವಾಗಿ ನಮಗೆ ಬ್ರಿಟಿಷ್ ಸಾಮ್ರಾಜ್ಯದೊಳಗೆ ಒಂದು ಡೊಮಿನಿಯನ್ ಅಂದರೆ ಸ್ವಯಮಾಡಳಿತದ ಸ್ಥಾನ ಕೊಟ್ಟರೆ ಸಾಲದು, ಭಾರತಕ್ಕೆ ಬೇಕಾಗಿರುವುದು ಸಂಪೂರ್ಣ ಸ್ವಾತಂತ್ರ್ಯ ಎಂಬುದು ಮನದಟ್ಟಾಯಿತು. 1921 ರಲ್ಲಿ ಅಂದರೆ ಅಕ್ಟೋಬರ್ ಕ್ರಾಂತಿ(1917) ನಡೆದ ಕೂಡಲೇ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ಮೌಲಾನಾ ಹಸ್ರತ್ ಮೆಹಾನಿ ಪೂರ್ಣಸ್ವಾತಂತ್ರ್ಯದ ಠರಾವನ್ನು ಮಂಡಿಸಿದರು. ಆಗ ಈ ನಿರ್ಣಯ ಬಿದ್ದು ಹೋದರೂ ಪ್ರತಿವರ್ಷವೂ ಅದು ಮುಖ್ಯವಾಗಿ ಆಗಷ್ಟೇ ಹುಟ್ಟಿ ಬರುತ್ತಿದ್ದ ಕಮ್ಯುನಿಸ್ಟ್ ಗುಂಪುಗಳ ಪ್ರಯತ್ನಗಳಿಂದಾಗಿ ಮತ್ತೆ-ಮತ್ತೆ ಮಂಡಿಸಲ್ಪಡುತ್ತಿತ್ತು. ಕೊನೆಗೂ ಕಾಂಗ್ರೆಸ್ 1929 ರ ಅಧಿವೇಶನದಲ್ಲಿ ಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಅಂಗೀರಿಸಿತು.

ಆರ್ಥಿಕ ವಿಚಾರಗಳ ಮೇಲೂ ಅಕ್ಟೋಬರ್ ಕ್ರಾಂತಿಯ ಪ್ರಭಾವ ಅಷ್ಟೇ ತೀವ್ರವಾಗಿತ್ತು. ಕಮ್ಯುನಿಸ್ಟರು, ಕಾಂಗ್ರೆಸ್, ಸಮಾಜವಾದಿಗಳು, ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳು, ಅಷ್ಟೇ ಅಲ್ಲ ಸ್ಥಳೀಯ ಮಟ್ಟದ ಗುಂಪುಗಳೂ ಭಾರತದ ಭವಿಷ್ಯ ಸಮಾಜವಾದದಲ್ಲೇ ಇದೆ ಎಂದು ಜೋರಾಗಿ ಪ್ರತಿಪಾದಿಸಲಾರಂಭಿಸಿದರು. ಸೋವಿಯತ್ ಒಕ್ಕೂಟದಿಂದ ರವೀಂದ್ರನಾಥ ಟಾಗೋರರ ಪತ್ರಗಳು, ಆ ದೇಶದ ಬಗ್ಗೆ ನೆಹರೂ ಮತ್ತು ಇತರರ ಲೇಖನಗಳು 1789 ರಲ್ಲಿ ಮಹಾನ್ ಫ್ರೆಂಚ್ ಕ್ರಾಂತಿ ಎತ್ತಿದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಘೋಷಣೆಗಳನ್ನು ಸೋವಿಯತ್ ಒಕ್ಕೂಟದಲ್ಲಿ ಹೇಗೆ ಸಾಕಾರಗೊಳಿಸಲಾಗುತ್ತಿದೆ ಎಂಬ ಅರಿವು ಜನಗಳಲ್ಲಿ ಮೂಡಿಸಿದವು. ಕೇವಲ ರಾಜಕೀಯ ಸ್ವಾತಂತ್ರ್ಯವಷ್ಟೇ ಸಾಲದು, ಭಾರತದ ಪುನರುಜ್ಜೀವನಕ್ಕೆ ಆರ್ಥಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯವೂ ಬೇಕು ಎಂಬ ವಿಚಾರ ಈಗ ಮೂಡಿಬಂತು.

ಉಳಿದು ಹೋದ ಆಶಯ

ಸಮಾನತೆಯ ಆಕಾಂಕ್ಷೆ ಬಹಳ ಹಳೆಯದಾದರೂ ಅದು ಕ್ರಾಂತಿಯ ನಂತರ ಹಿಂದೆಂದೂ ಕಾಣದ ಬಲ ಪಡೆಯಿತು. ಅಷ್ಟೇ ಅಲ್ಲ ಆಧ್ಯಾತ್ಮಿಕ ರಂಗದಲ್ಲಿ ಸಮಾನತೆಯನ್ನು ಹುಡುಕುವ ಬದಲು ಆರ್ಥಿಕ ಮತ್ತು ರಾಜಕೀಯದ ಐಹಿಕ ವಲಯಗಳಲ್ಲೂ ಈ ಹುಡುಕಾಟ ಆರಂಭವಾಯಿತು.

ಇವೆಲ್ಲವುಗಳಿಂದಾಗಿ ಸ್ವತಃ ಕಾಂಗ್ರೆಸ್ ಕ್ರಮೇಣ ತೀವ್ರಗಾಮಿಯಾಗಲಾರಂಭಿಸಿತು. ಅದೀಗ ಕೆಲವೇ ಮೇಲ್ವರ್ಗದ ಜನಗಳಿಗೆ ಸೀಮಿತಗೊಳ್ಳದೆ ಜನಸಮೂಹಗಳನ್ನು ದೊಡ್ಡ ಸಂಖ್ಯೆಯಲ್ಲಿ ಸೆಳೆಯಲಾರಂಭಿಸಿತು. 1930 ರ ದಶಕದ ಕೊನೆಯಲ್ಲಿ ಹಾಗೂ 1940 ರ ದಶಕದ ಆರಂಭದಲ್ಲಿ ಸಿದ್ಧಪಡಿಸಿದ ಹಲವಾರು ಯೋಜನೆಗಳು, ನೆಹರೂರವರ ಅಧ್ಯಕ್ಷತೆಯಲ್ಲಿನ ಸಮಿತಿ ತಯಾರಿಸಿದ ಅಧಿಕೃತ ಕಾಂಗ್ರೆಸ್ ಯೋಜನೆ ಇವೆಲ್ಲವೂ ಸೋವಿಯತ್ ಯೋಜನಾ ಪ್ರಕ್ರಿಯೆಯ ಭಾರಿ ಯಶಸ್ಸಿನಿಂದ ನೇರ ಪ್ರಭಾವ ಪಡೆದವುಗಳು. ಇಡೀ ಯುರೋಪು ಹಿಟ್ಲರನ ಧಾಳಿಯೆದುರು ತತ್ತರಿಸಿ ಮಣ್ಣು ಮುಕ್ಕುತ್ತಿದ್ದಾಗ ಸೋವಿಯತ್ ಒಕ್ಕೂಟ ನಾಝೀ ಮಿಂಚಿನ ಧಾಳಿಗಳನ್ನು ಎದುರಿಸಿ ನಿಂತಿತು. ಅವರ ಯುದ್ಧ ಯಂತ್ರವನ್ನು ಧ್ವಂಸಗೊಳಿಸಿತು. ಆಗ ಎಲ್ಲೆಡೆಗೂ ಕೇಳಿಬಂದ ಪ್ರಶ್ನೆ - ಆಹಾರವಾಗಲೀ, ಬಟ್ಟೆ, ವಸತಿ, ಉದ್ದಿಮೆ, ಶಿಕ್ಷಣ, ಆರೋಗ್ಯ, ಸರಾಸರಿ ನಿರೀಕ್ಷಿತ ಆಯಸ್ಸು ಅಥವಾ ಇನ್ಯಾವುದೇ ರಂಗದಲ್ಲಾಗಲೀ ಪ್ರಗತಿಯಾಗಿದೆಯೆಂಬುದನ್ನು ನಿರಾಕರಿಸಲಾಗದು. ಆದರೂ ನಮ್ಮ ಪ್ರಾಕೃತಿಕ ಮತ್ತು ಮಾನವ ಸಂಪನ್ಮೂಲಗಳನ್ನು ನೋಡಿದಾಗ ನಾವು ಸಾಧಿಸಬಹುದಾದ್ದನ್ನು ಸಾಧಿಸಿಲ್ಲ ಎಂದೇ ಹೇಳಬೇಕಾಗುತ್ತದೆ. ನಾವು ಆಗಸ್ಟ್ 15, 1947 ರಂದು ಸ್ವಾತಂತ್ರ್ಯ ಗಳಿಸಿದರೆ ಚೀಣಾ ಎರಡು ವರ್ಷಗಳ ನಂತರ ಅಕ್ಟೋಬರ್ 1, 1949 ರಂದು ವಿಮೋಚನೆ ಪಡೆಯಿತು. ಆದರೂ ಚೀಣಾ ಈಗ ನಮ್ಮನ್ನು ದಾಟಿ ಹೋಗಿದೆ. ಈ ಬಗ್ಗೆ ವಿವರಕ್ಕೆ ಹೋಗುವ ಅಗತ್ಯವಿಲ್ಲ. ಈ ಬಗ್ಗೆ ವಿವರಿಸಲು ಹಲವು ಸಂಪುಟಗಳೇ ಬೇಕಾಗುತ್ತವೆ. ಇಷ್ಟು ವರ್ಷಗಳ ಸ್ವಾತಂತ್ರ್ಯದ ನಂತರವೂ ನಾವು ನಮ್ಮ ಜನಗಳ ಮೂಲಭೂತ ಕನಿಷ್ಟ ಅಗತ್ಯಗಳನ್ನು ಕೂಡಾ ಈಡೇರಿಸಲು ಅಸಮರ್ಥರಾಗಿದ್ದೇವೆ. ಅವರು ಬಡತನ, ಹಸಿವು, ಅನಕ್ಷರತೆಯಿಂದ ನರಳುತ್ತಿದ್ದಾರೆ. ಮೂಲಭೂತ ಕನಿಷ್ಟ ಅಗತ್ಯಗಳನ್ನು ಪೂರೈಸಿದ್ದರೆ ಅವರು ಪವಾಡಗಳನ್ನೇ ಮಾಡುತ್ತಿದ್ದರು.

ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದರೆ ಜಿಡಿಪಿ ಬೆಳವಣಿಗೆ, ರಫ್ತು ಆದಾಯ, ವಿದೇಶಿ ನೇರ ಹೂಡಿಕೆ ಮತ್ತು ಶೇರು ಮಾರುಕಟ್ಟೆ ವ್ಯವಹಾರಗಳೆಲ್ಲಾ ಅಸಂಬದ್ಧವಾಗಿ ಬಿಡುತ್ತವೆ. ಸರ್ವತೋಮುಖ ಅಭಿವೃದ್ಧಿ ಕುರಿತ ಜನರ ಆಕಾಂಕ್ಷೆಗಳು, ರಾಷ್ಟ್ರೀಯ ಸಂಪತ್ತಿನ ನ್ಯಾಯಪೂರ್ಣ ವಿತರಣೆಯ ತುಡಿತ ಈಗಲೂ ಈಡೇರದೇ ಉಳಿದಿವೆ.

ಕಾರಣಗಳೇನು?

ಇದಕ್ಕೆ ಕಾರಣವನ್ನು ಎರಡು ಹಂತಗಳಲ್ಲಿ ಗ್ರಹಿಸಬಹುದು. ಮೊದಲನೆಯದಾಗಿ, ದೇಶವನ್ನು ಆಳುವವರು ಆರಿಸಿದ ಅಭಿವೃದ್ಧಿಯ ದಾರಿಯೆಂದರೆ ಬಂಡವಾಳಶಾಹಿ ದಾರಿ. ಅದು ತನ್ನದೇ ಆದ ಮಿತಿಗಳನ್ನು ಹೊಂದಿದ್ದರಿಂದಾಗಿ ಬೇಗನೇ ಅದರ ದಿವಾಳಿಕೋರತನ ಪ್ರದರ್ಶನಗೊಂಡಿತು. ದೇಶದ ದೊಡ್ಡ ಭಾಗದಲ್ಲಿ ಇನ್ನೂ ಪಾಳೆಯಗಾರಿ, ಅರೆ-ಪಾಳೆಯಗಾರಿ ಉತ್ಪಾದನಾ ಸಂಬಂಧಗಳು ಇನ್ನೂ ಇರುವಾಗಲೇ ಅತ್ತ ಸಾಮ್ರಾಜ್ಯಶಾಹಿ ಬಂಡವಾಳಕ್ಕೆ ನಮ್ಮ ಆರ್ಥಿಕದಲ್ಲಿ ಮತ್ತು ನಮ್ಮ ಸಂಸ್ಕೃತಿ ಹಾಗೂ ಮೌಲ್ಯ ವ್ಯವಸ್ಥೆಯಲ್ಲಿಯೂ ತೂರಿಕೊಳ್ಳಲು ಅವಕಾಶ ನೀಡಲಾಯಿತು. ಈ ಅಭಿವೃದ್ಧಿ ದಾರಿ ನಮ್ಮ ಜನಗಳ ಜ್ವಲಂತ ಪ್ರಶ್ನೆಗಳನ್ನು ಪರಿಹರಿಸಲು ಅಸಮರ್ಥವಾಗಿದೆ ಎಂಬುದು ಸ್ಪಷ್ಟ.

ಬದಲಾದ ಸನ್ನಿವೇಶ

ಎರಡನೆಯದಾಗಿ, ಮೇಲಿನ ಪರಿಸ್ಥಿತಿಯ ಪರಿಣಾಮವಾಗಿ ಕಳೆದ 13 ವರ್ಷಗಳಲ್ಲಿ ಜನಗಳ ಜೀವನಮಟ್ಟದ ಮೇಲೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ(ಎಲ್‌ಪಿಜಿ) ನೀತಿಗಳ ರೂಪದಲ್ಲಿ ಹೊಸ ಪ್ರಹಾರಗಳು ಕಂಡುಬಂದಿವೆ. ಸಾಮ್ರಾಜ್ಯಶಾಹಿಗಳು ಸದಾ ವಿಶ್ವದ ಮೇಲೆ ಯಜಮಾನಿಕೆ ನಡೆಸುವ ಅವಕಾಶಗಳ ಹುಡುಕಾಟದಲ್ಲಿದ್ದರು. ಸೋವಿಯತ್ ಒಕ್ಕೂಟದ ಅಂತ್ಯ ಹಾಗೂ ಪೂರ್ವ ಯುರೋಪಿನಲ್ಲಿನ ಹಿನ್ನಡೆಗಳು ಅವರಿಗೆ ಆ ಅವಕಾಶಗಳನ್ನು ಒದಗಿಸಿದವು. ಸಾಮ್ರಾಜ್ಯಶಾಹಿಗಳ ವಾಹನಗಳಾದ ಬಹುರಾಷ್ಟ್ರೀಯ ಕಂಪನಿಗಳು ಜನರನ್ನು ಸುಲಿದು ಸೂಪರ್ ಲಾಭಗಳನ್ನು ಗಳಿಸಹೊರಟಿವೆ.

ಹೀಗೆ ಇದೀಗ ವಿಶ್ವಬಂಡವಾಳಶಾಹಿಯ ಇತಿಹಾಸದಲ್ಲಿ ಬದಲಾದ ಸನ್ನಿವೇಶ. ಬಂಡವಾಳಶಾಹಿ ಈಗಲೂ ಸಾಮ್ರಾಜ್ಯಶಾಹಿ ಘಟ್ಟದಲ್ಲಿದ್ದರೂ, ಇದೀಗ ಸಾಮ್ರಾಜ್ಯಶಾಹಿ ಜಾಗತೀಕರಣದ ಯುಗ.

ಭಾರತದಲ್ಲಿ ಈ ವಿಷಯದಲ್ಲಿ ಮೇ 1998 ರಿಂದ ಮೇ 2004 ರವರೆಗಿನ ಆರು ವರ್ಷಗಳ ಅವಧಿಯಂತೂ ನಾಚಿಕೆಗೇಡಿನ ಅವಧಿ. ಅದು ಒಂದು ಪ್ರತಿಗಾಮಿ ಪಕ್ಷ, ಅದರಲ್ಲೂ ಒಂದು ಫ್ಯಾಸಿಸ್ಟ್ ಸಿದ್ಧಾಂತದ ಪಕ್ಷ ಅಧಿಕಾರಕ್ಕೆ ಬಂದು ಮೊದಲ ದಿನದಿಂದಲೇ ಅತ್ಯಂತ ವಿನಾಶಕಾರಿ ನೀತಿಗಳನ್ನು ಅನುಸರಿಸಿದ ಅವಧಿ. ಉದಾಹರಣೆಗೆ ಅಧಿಕಾರಕ್ಕೆ ಬಂದ ಕೂಡಲೇ ಅದು ಪರಮಾಣು ಶಸ್ತ್ರಾಸ್ತ್ರಗಳನ್ನು ಮಾಡ ಹೊರಟು ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿಯನ್ನು ಹೊಸ ಹಂತಕ್ಕೇರಿಸಿತು. ಹಲವು ರಾಜ್ಯಗಳಲ್ಲಿ ಕ್ರಿಶ್ಚಿಯನ್ನರ ಮೇಲೆ ಭೀಕರ ಧಾಳಿಗಳಿಗೆ, ಗುಜರಾತಿನಲ್ಲಿ ಮುಸ್ಲಿಮರ ಸಾಮೂಹಿಕ ಹತ್ಯಾಕಾಂಡಕ್ಕೆ ಅದು ಪೋಷಣೆಯಿತ್ತಿತು. ಬಿಜೆಪಿಯ ಕೋಮುವಾದಿ ಪ್ರಯತ್ನಗಳು ಪಠ್ಯಪುಸ್ತಕಗಳನ್ನು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಕೇಸರೀಕರಣಗೊಳಿಸಿ ತನ್ನ ಮತಾಂಧ ಉದ್ದೇಶ ಸಾಧನೆಗೆ ತುಫಾಕಿ ಗುಂಡುಗಳಾಗುವ ಒಂದು ತಲೆಮಾರನ್ನೇ ಸೃಷ್ಟಿಸಲು ಮುಂದಾಯಿತು. ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯಾತೀತ ಹಂದರಕ್ಕೇ ಹಾನಿಯುಂಟು ಮಾಡಲು ಹಲವು ರೀತಿಯಲ್ಲಿ ಪ್ರಯತ್ನಿಸಿತು. ಅದಕ್ಕಾಗಿ ಒಂದು ಆಯೋಗವನ್ನೇ ನೇಮಿಸಿತು. ಬಿಜೆಪಿ ಒಂದು ಅಮೆರಿಕಾ ಪರ ಪಕ್ಷವಾಗಿರುವುದರಿಂದ ಅದರ ಆಡಳಿತ ನಮ್ಮ ವಿದೇಶಾಂಗ ನೀತಿಯ ಮೂಲತತ್ವಗಳನ್ನೇ ಕಳಚಿ ಹಾಕಿತು. ಪ್ಯಾಲೆಸ್ಟೀನಿಯನ್ನರ ತಾಯ್ನಾಡಿನ ಹೋರಾಟಕ್ಕೆ ಬೆಂಬಲ ನಿಲ್ಲಿಸಿತು. ಎಸ್‌ಎಡಿಆರ್‌ಗೆ ಮಾನ್ಯತೆಯನ್ನು ಹಿಂತೆಗೆದುಕೊಂಡಿತು. ಮತ್ತು ಅಲಿಪ್ತ ಆಂದೋಲನದಲ್ಲಿ ಮರು ಚೈತನ್ಯ ತುಂಬಲು ಕಿರುಬೆರಳನ್ನು ಎತ್ತಲು ನಿರಾಕರಿಸಿತು.

ಆರ್ಥಿಕ ವಿಷಯಗಳಲ್ಲಿ ಬಿಜೆಪಿ ಆಳ್ವಿಕೆ-13 ವರ್ಷಗಳ ಹಿಂದೆ ರಾವ್ ಸರ್ಕಾರದ ಆರಂಭಿಸಿದ ಎಲ್‌ಪಿಜಿ ನೀತಿಗಳನ್ನು ಪ್ರತೀಕಾರ ತೀರಿಸುವ ರೀತಿಯಲ್ಲಿ ಅನುಸರಿಸಿತು - ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಪುಡಿಕಾಸಿಗೆ ಮಾರಲಾಯಿತು. ಅನಗತ್ಯ ಆಮದುಗಳನ್ನು ಉದಾರೀಕರಿಸಲಾಯಿತು. ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮದೇಶವನ್ನು ಲೂಟಿ ಮಾಡಲು ಇನ್ನಷ್ಟು ಸ್ವಾತಂತ್ರ್ಯ ನೀಡಲಾಯಿತು. ಇದು ನಮ್ಮ ಜನಗಳ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿತು. ಈ ನೀತಿಗಳಿಂದಾಗಿ ಕಳೆದ ಆರುವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚು ರೈತರು ಆಂಧ್ರಪ್ರದೇಶ ಮತ್ತಿತರ ಕಡೆಗಳಲ್ಲಿ ಆತ್ಮಹತ್ಯೆ ಮಾಡಿಕೊಂಡರು.

ಒಟ್ಟಾರೆಯಾಗಿ ನಮ್ಮ ಸ್ವಾತಂತ್ರ್ಯ ಹೋರಾಟದ ಸಕಾರಾತ್ಮಕ ಪರಂಪರೆಗಳೆಲ್ಲಾ ಕಳೆದ ಆರು ವರ್ಷಗಳ ಹಿನ್ನೆಡೆ ಹೊಂದಿದವು.

ಇಂತಹ ಒಂದು ಸನ್ನಿವೇಶದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಈಗ ಹೊರಗಿನಿಂದ ಎಡಪಕ್ಷಗಳ ನಿರ್ಣಾಯಕ ಬೆಂಬಲದೊಂದಿಗೆ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಿತು.

ಇಂದಿನ ಪರಿಸ್ಥಿತಿ ಹೇಗಿದೆಯೆಂದರೆ ಒಂದೆಡೆ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಯುಪಿಎ ಸರ್ಕಾರ ಕೆಲವು ಜನಪರ ಕ್ರಮಗಳ ಭರವಸೆ ನೀಡಿದೆ. ಇನ್ನೊಂದೆಡೆ ಅದು ಪಾಳೆಯಗಾರಿ ಗುತ್ತೇದಾರಿಗಳು, ಸಾಮ್ರಾಜ್ಯಶಾಹಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳ ಒತ್ತಡ ಒಳಗಾಗಿದೆ.

ಇದರ ಪರಿಣಾಮವೇನಾಗಬಹುದು? ಇದಕ್ಕೆ ಉತ್ತರ ಪಡೆಯಲು ಇತಿಹಾಸ ನಮಗೆ ಮಾರ್ಗದರ್ಶನ ನೀಡಬಲ್ಲದು. ಉದಾಹರಣೆಗೆ ಇಟಲಿ ಮತ್ತು ಜರ್ಮನಿಯಲ್ಲಿ ಜನಗಳಲ್ಲಿನ ಸಾರ್ವತ್ರಿಕ ಅಸಂತೃಪ್ತಿಯ ಸನ್ನಿವೇಶದ ಲಾಭ ಪಡೆದೇ ಮುಸೋಲಿನಿ ಮತ್ತು ಹಿಟ್ಲರ್ ತಂತಮ್ಮ ದೇಶಗಳಲ್ಲಿ ತಮ್ಮ ಫ್ಯಾಸಿಸ್ಟ್ ಆಳ್ವಿಕೆಗಳನ್ನು ಹೇರಿದರು. ಅಷ್ಟು ದೂರವೇಕೆ ಹೋಗಬೇಕು? ಭಾರತದಲ್ಲಿಯೂ ಬಿಜೆಪಿಯು ಜನರ ಅಸಂತೃಪ್ತಿಯನ್ನು ಉಲ್ಬಣಗೊಳಿಸುವಲ್ಲಿ ನರಸಿಂಹರಾವ್ ಸರ್ಕಾರ ವಹಿಸಿದ ಪಾತ್ರ, ನಂತರ ಜನಗಳನ್ನು ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಸಂಯುಕ್ತ ರಂಗ ಸರ್ಕಾರದ ಆಳ್ವಿಕೆಯ ವಿಫಲತೆ ಇವುಗಳನ್ನೇ ತನ್ನಬಂಡವಾಳವಾಗಿ ಮಾಡಿಕೊಂಡಿತು. ಅದರ ದುಷ್ಪರಿಣಾಮಗಳು ಈಗ ಎಲ್ಲರ ಮುಂದಿದೆ. ಆದ್ದರಿಂದ ತಾವು ಸದಾಕಾಲ ಆನಂದದಿಂದ ಆಳ್ವಿಕೆ ನಡೆಸುತ್ತೇವೆ ಎಂದುಕಾಂಗ್ರೆಸ್ ಮಂದಿ ನಂಬಿದ್ದರೆ ಅವರುಬೇಗನೆ ಎಚ್ಚೆತ್ತುಕೊಳ್ಳುವುದು ಒಳ್ಳೆಯದು. ಯಾವುದೇ ಜನ-ವಿರೋಧಿ ನೀತಿಯನ್ನು ಅನುಸರಿಸಿದರೂ ನಮ್ಮಲ್ಲೇ ಬೆಳೆದಿರುವ ಫ್ಯಾಸಿಸ್ಟ್‌ಗಳ ಮುಖದಲ್ಲಿ ನಗು ಮೂಡುತ್ತದೆ.

ಈ ಆಗಸ್ಟ್ 15 ನಮಗೆ ಮತ್ತು ಕಾಂಗ್ರೆಸ್ಸಿಗರಿಗೆ ನಮ್ಮ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ನೆನಪಿಸಿಕೊಳ್ಳಲು ಮತ್ತು ನಮ್ಮ ಜನ ನಮ್ಮಿಂದ ಏನು ನಿರೀಕ್ಷಿಸುತ್ತಾರೆ ಎಂಬುದನ್ನು ಸ್ವಲ್ಪ ಕಲಿಯಲು ಒಂದು ಒಳ್ಳೆಯ ಅವಕಾಶ ನೀಡಿದೆ ○

ಒಂದು ಜಾತ್ಯತೀತ ವ್ಯವಸ್ಥೆ

ಭಾರತದ ಸ್ವಾತಂತ್ರ್ಯ ದೊಡನೆಯೇದೇಶದ ರಕ್ತರಂಜಿತ ವಿಭಜನೆಯೂ ನಡೆಯಿತೆಂಬುದು ಒಂದು ದುರಂತ ಎಂಬುದೂ ನಮಗೆ ತಿಳಿದಿದೆ. ಸಾಮ್ರಾಜ್ಯಶಾಹಿಗಳ ಪಿತೂರಿ ನಿರ್ಮಿಸಿದ ಪರಿಸ್ಥಿತಿಯಲ್ಲಿ ಎರಡೂ ಕಡೆ ಲಕ್ಷಾಂತರ ಜನ ಮನೆ-ಮಾರು ಬಿಟ್ಟು ಹೋಗಬೇಕಾಯಿತು. ಅಷ್ಟೇ ಅಲ್ಲ, ಭಾರತದ ವಿಭಜನೆಯೊಂದಿಗೆ ಉಂಟಾದ ಕೋಮು ದಂಗೆಗಳಲ್ಲಿ ಹಲವಾರು ಜನರನ್ನು ನಿಷ್ಕರುಣೆಯಿಂದ ಕೊಚ್ಚಿಹಾಕ ಲಾಯಿತು. ಕೋಟ್ಯಾಂತರ ರೂಪಾಯಿ ಮೌಲ್ಯದ ಆಸ್ತಿಗಳಿಗೆ ಬೆಂಕಿ ಹಚ್ಚಲಾಯಿತು. ಹೆಣ್ಣು ಮಕ್ಕಳು, ಮಹಿಳೆಯರನ್ನು ಅಪಹರಿಸಿ ಅತ್ಯಾಚಾರವೆಸಗಲಾಯಿತು. ಆದರೆ ಇವೆಲ್ಲಾ ಭಾರತದಲ್ಲಿ ಒಂದು ಜಾತ್ಯತೀತ ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂಬ ಜನಗಳ ನಿರ್ಧಾರನ್ನು ಇನ್ನಷ್ಟು ಬಲಗೊಳಿಸಿತಷ್ಟೇ. ಇದು ನಮ್ಮ ಸ್ವಾತಂತ್ರ್ಯ ಹೋರಾಟದ ಸಹಜ ಫಲಶೃತಿಯೇ ಆಗಿತ್ತು. ಏಕೆಂದರೆ ನಮ್ಮ ಸ್ವಾತಂತ್ರ್ಯ ಹೋರಾಟ ಸ್ವತಂತ್ರ ಭಾರತದಲ್ಲಿ ಒಂದು ಜಾತ್ಯತೀತ ವ್ಯವಸ್ಥೆಯನ್ನಲ್ಲದೆ ಬೇರೇನೂ ಸಾಧ್ಯವಿಲ್ಲ ಎಂದು ಸದಾ ಕಂಡರಿಸಿತ್ತು.

ಜಾತ್ಯಾತೀತತೆಯ ತತ್ವ ಎಷ್ಟು ಬಲಿಷ್ಠವಾಗಿ ತ್ತೆಂದರೆ ಸ್ವಾತಂತ್ರ್ಯದ ಮುನ್ನವೇ 1930 ರ ದಶಕ ದಲ್ಲಿಯೇ ಕಾಂಗ್ರೆಸ್ (ಆಗ ನಿಜವಾಗಿ ಅದು ಒಂದು ವೇದಿಕೆಯಾಗಿತ್ತು, ಪಕ್ಷವಾಗಿರಲಿಲ್ಲ) ಹಿಂದೂ ಮಹಾಸಭಾ ಮತ್ತು ಇತರ ಕೋಮುವಾದಿ ಗುಂಪುಗಳಿಗೆ ಸದಸ್ಯತ್ವ ಕೊಡುವುದಿಲ್ಲ ಎಂದು ನಿರ್ಧರಿಸಿತ್ತು.

ಕೆಲವು ಇತಿಹಾಸಕಾರರು ದೇಶವನ್ನು ರಾಜಕೀಯವಾಗಿ ಏಕೀಕರಿಸಿದ್ದು ಬ್ರಿಟಿಷರೇ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇಲ್ಲಿ ನೆನಪಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ ಭಾರತ ಬ್ರಿಟಿಷರು ಬರುವುದಕ್ಕಿಂತ ಮೊದಲೇ ಹಲವು ಸಾಮ್ರಾಜ್ಯಗಳನ್ನು ಕಂಡಿತು - ಮೌರ್ಯರು, ತುಘಲಕ್‌ಗಳು, ಮೊಗಲರು ಇತ್ಯಾದಿ. ಅವರ ಜತೆ-ಜತೆಗೇ ಸಾಂಸ್ಕೃತಿಕ ಸಮ್ಮಿಲಗಳು ನಡೆಯುತ್ತಾ ಬಂದವು. ಆದರೂ ಮೇಲೆ ಹೇಳಿದ ಇತಿಹಾಸಕಾರರ ಅಭಿಪ್ರಾಯವನ್ನು ಒಪ್ಪಿ ಕೊಂಡರೂ ಬ್ರಿಟಿಷ್ ಆಳ್ವಿಕೆ ಐಕ್ಯತೆಯ ಹಂದರವನ್ನಷ್ಟೇ ನಿರ್ಮಿಸಿತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಅದಕ್ಕೆ ರಕ್ತ-ಮಾಂಸ ತುಂಬಿ ಜೀವ ಕೊಟ್ಟದ್ದು ನಮ್ಮ ಸ್ವಾತಂತ್ರ್ಯ ಹೋರಾಟವೇ. ಶತಮಾನಗಳಿಂದ ಈ ದೇಶದಲ್ಲಿ ಬೆಳೆದು ಬಂದ ಸಮ್ಮಿಶ್ರ ಮೌಲ್ಯಗಳು ಭಾರತದ ಸಂವಿಧಾನದಲ್ಲಿ ಮೈದಾಳಿ ನಿಂತಿವೆ. ■

ಎರಡು ದೇಶಗಳ ಜನನ

ಮಾರ್ಗರೇಟ್ ಬರ್ಕ್‌ವೈಟ್

'ಬರ್ಕ್‌ವೈಟ್ ಕಂಡ ಭಾರತ' ಇದು ಮಾರ್ಗರೆಟ್ ಬರ್ಕ್‌ವೈಟ್ ಎಂಬ ಪತ್ರಕರ್ತೆ ರಚಿಸಿದ ಒಂದು ಅಪರೂಪದ ಕೃತಿ. ಆಕೆ ಅಮೇರಿಕಾದ ಪ್ರಸಿದ್ಧ ಮಾಸ ಪತ್ರಿಕೆ 'ಲೈಫ್' ಗೆ ಛಾಯಾಚಿತ್ರ ಪತ್ರಕರ್ತೆ. 1946 ಹಾಗೂ 48 ರ ನಡುವೆ ಭಾರತ ಸ್ವಾತಂತ್ರ್ಯ ಪಡೆಯುತ್ತಿದ್ದ, ಭಾರತ–ಪಾಕಿಸ್ತಾನಗಳ ವಿಭಜನೆಯಾಗುತ್ತಿದ್ದ ಸಂದರ್ಭದಲ್ಲಿ ಭಾರತದಾದ್ಯಂತ ಪ್ರವಾಸ ಮಾಡಿದ ಲೇಖಕಿ. ಅನೇಕ ಘಟನೆಗಳನ್ನು ಕಣ್ಣಾರೆ ಕಂಡು, ಕಂಡದ್ದನ್ನು ವಸ್ತುನಿಷ್ಠ ದೃಷ್ಟಿಯಿಂದ ವಿವರಿಸಿದ್ದಾರೆ. ಅವರ ಒಳನೋಟಗಳು ವಿಶಿಷ್ಟವಾಗಿವೆ. ಅಚ್ಚರಿ ಹುಟ್ಟಿಸುವಂತಿವೆ. ಕನ್ನಡದ ಪ್ರಸಿದ್ಧ ಸಾಹಿತಿ ಲಂಕೇಶ್‌ರವರು ಇದನ್ನು ಓದಿ, ಮೆಚ್ಚಿ ಕನ್ನಡಕ್ಕೆ ತರಬೇಕೆಂದು ಬಯಸಿ ಪ್ರಸಿದ್ಧ ಲೇಖಕಿ, ಜಾನಪದ ತಜ್ಞೆ ಡಾ. ಕೆ.ಆರ್.ಸಂಧ್ಯಾರೆಡ್ಡಿಯವರನ್ನು ಅನುವಾದಿಸಬೇಕೆಂದು ಕೇಳಿಕೊಂಡಿದ್ದರು. ಉತ್ತಮವಾಗಿ ಅನುವಾದಿಸಲ್ಪಟ್ಟ ಈ ಪುಸ್ತಕವನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊರತಂದಿದೆ. ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳೂ ಅವಶ್ಯವಾಗಿ ಓದಬೇಕಾದ ಪುಸ್ತಕ. ಆ ಪುಸ್ತಕದಿಂದ ಆಯ್ದ ಕೆಲವು ಭಾಗಗಳು ಇಲ್ಲಿವೆ. 'ಎರಡು ದೇಶಗಳ ಜನನ' ದಲ್ಲಿ ಭಾರತ–ಪಾಕಿಸ್ತಾನಗಳ ಯಾತನಾಮಯ ವಿಭಜನೆಯ ಚಿತ್ರ, 'ದೆಹಲಿ ಗಿರಣಿ ಕಾರ್ಮಿಕರು' ದಲ್ಲಿ ದೇಶಗಳಿಸಿದ ಸ್ವಾತಂತ್ರ್ಯದ ಸ್ವರೂಪ ಕಾರ್ಮಿಕರ ಪಾಲಿಗೆ ಯಾವ ರೀತಿ ಇತ್ತು ಎಂಬ ಚಿತ್ರಣ ನೀಡಲಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದರ ಜೊತೆ ಜೊತೆಗೇ, ದೇಶಗಳ ಇತಿಹಾಸದಲ್ಲಿ ಅತ್ಯಂತ ಅಪರೂಪದ ಘಟನೆಯೊಂದನ್ನು ನೋಡುವ ಅವಕಾಶ ಜಗತ್ತಿಗೆ ಸಿಕ್ಕಿತು. ಅಂದರೆ ಒಂದು ದೇಶಕ್ಕಾಗಿ ಹೋರಾಟ ನಡೆದು ಎರಡು ದೇಶಗಳು ಒಟ್ಟಿಗೇ ಜನ್ಮತಾಳಿದ್ದವು. ಈ ಜನನ ಅತ್ಯಂತ ನೋವು ಪ್ರಯಾಸಗಳಿಂದ ಕೂಡಿತ್ತು.



ಭಾರತ ಮತ್ತು ಪಾಕಿಸ್ತಾನ ಎಂಬ ಈ ಎರಡೂ ದೇಶಗಳ ಐತಿಹಾಸಿಕ ಆರಂಭದ ದಿನಗಳನ್ನು ನೋಡುವ ಮತ್ತು ದಾಖಲಿಸುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಅದೃಷ್ಟ 1947ರ ಶರತ್ಕಾಲದಲ್ಲಿ ಉತ್ತರ ಭಾರತದ ಪಂಜಾಬ್ ಪ್ರದೇಶಕ್ಕೆ ನಾನು ಹೋದೆ. ಹೊಸದಾಗಿ ಹುಟ್ಟುವ ಈ ಸಾರ್ವಭೌಮ ರಾಷ್ಟ್ರಗಳ ಫೋಟೋ ತೆಗೆಯುವುದು ನನ್ನ ಉದ್ದೇಶ. ಈ ದೇಶಗಳ ನಡುವೆ ಅಪಾರ ಜನಸಮೂಹ ವಿನಿಮಯದ ಕೆಲಸನಡೆಯುತ್ತಿತ್ತು. ಪಾಕಿಸ್ತಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ನಮ್ಮ ಆಕ್ಸ್‌ಫರ್ಡ್ ರಸ್ತೆಯ ಚಾರಿಂಗ್ ಕ್ರಾಸನ್ನು ನೆನಪಿಸುವಂತಿದ್ದವು. ಆದರೆ ಇಲ್ಲಿ ಎರಡೂ ದಿಕ್ಕುಗಳಲ್ಲಿ ಮೋಟಾರು ಕಾರುಗಳಿಗೆ ಬದಲಾಗಿ ಎತ್ತಿನ ಗಾಡಿಗಳು, ಹೆಂಗಸರನ್ನು ಹೊತ್ತು ಸಾಗುತ್ತಿದ್ದ ಕತ್ತೆಗಳು, ಚಿಕ್ಕಮಕ್ಕಳನ್ನು, ಕೈಲಾಗದ ಮುದುಕರನ್ನು ಹೆಗಲ ಮೇಲೆ ಹೊತ್ತಿದ್ದ ಪುರುಷರ ಸಾಲುಸಾಲುಗಳು ಕಾಣುತ್ತಿದ್ದವು.

ಎಷ್ಟೋ ಗರ್ಭಿಣಿಯರಿಗೆ ರಸ್ತೆಯಲ್ಲೇ ಹೆರಿಗೆಯಾಯಿತು. ರಸ್ತೆಯಲ್ಲಿ ನಡೆಯುತ್ತಲೇ ಬಳಲಿಕೆಯಿಂದ ಕುಸಿದು ಬಿದ್ದು ಜನ ಸಾಯುತ್ತಿದ್ದರು. ಕೆಲವರು ಕಾಲರಾದಿಂದ ಸತ್ತರು. ಆದರೆ ಇದಕ್ಕೂ ಹೆಚ್ಚಿನ ಮಂದಿ ಇನ್ನು ನಮ್ಮಿಂದ ಸಾಧ್ಯವಿಲ್ಲ ಎಂದು ರಸ್ತೆಯಲ್ಲೇ ಕುಳಿತುಬಿಟ್ಟಿದ್ದರು. ಕೆಲವು ಮಕ್ಕಳು ಸಾವನ್ನು ಎದುರುನೋಡುತ್ತ ಹೀಗೆ ಕುಸಿದು ಕುಳಿತ ತಂದೆತಾಯಿಗಳ, ಅಜ್ಜಂದಿರ ಕೈಹಿಡಿದು ಮುಂದಕ್ಕೆ ಕರೆದೊಯ್ಯುವಂತೆ ಎಳೆಯುತ್ತಿದ್ದವು. ಆದರೆ ಅವರು ಇನ್ನು ಮೇಲೇಳುವುದಿಲ್ಲ ಎಂದು ಅವರಿಗೆ ಗೊತ್ತಿರಲಿಲ್ಲ. ಪಾಕಿಸ್ತಾನ ಎಂದರೆ ಪರಿಶುದ್ಧರ ಭೂಮಿ ಎಂದರ್ಥ. ಆದರೆ ಅನೇಕ ಪರಿಶುದ್ಧರು ಆ ಭೂಮಿಯನ್ನು ತಲುಪಲೇ ಇಲ್ಲ. ಅವರು ಹೊರಟಿದ್ದ ಕನಸಿನ ನಾಡಿನ ದಾರಿಯ ಉದ್ದಕ್ಕೂ ಗೋರಿಗಳ ಸಾಲಿತ್ತು.

ಎತ್ತುಗಳ ತುಳಿತದಿಂದ ಎದ್ದ ಧೂಳು ಇಡೀ ರಸ್ತೆ ಉದ್ದಕ್ಕೂ ಮೋಡದಂತೆ ಮೇಲೆದ್ದಿತ್ತು. ಕತ್ತಲಾಗುತ್ತಿದ್ದಂತೆ ಜನ ರಸ್ತೆಯ ಬದಿಯಲ್ಲೆ

ತಂಗುತ್ತಿದ್ದರು. ಅಲ್ಲೆ ಚಿಕ್ಕದಾಗಿ ಬೆಂಕಿ ಹಾಕಿಕೊಂಡು ಚಪಾತಿಗಳನ್ನು ಬೇಯಿಸುತ್ತಿದ್ದರು. ಮೇಲೆ ಕವಿದಿದ್ದ ಧೂಳಿನೊಂದಿಗೆ ಈ ಬೆಂಕಿಯ ಬೆಳಕೂ ಸೇರಿ ಬೆಂಕಿಯ ಮೋಡವೊಂದು ಅವರೆಲ್ಲರನ್ನೂ ಆವರಿಸಿದಂತೆ ಕಾಣುತ್ತಿತ್ತು.



ಈ ದೇಶಗಳ ಎರಡೂ ಕಡೆಯ ಗಡಿಗಳಿಂದ ಬರುವ ಬೃಹತ್ ಜನಪ್ರವಾಹ ಬೈಬಲ್ ಕಾಲದ ವಾತಾವರಣವೊಂದನ್ನು ನೆನಪಿಗೆ ತರುತ್ತಿತ್ತು. ಹಳೆಯ ಒಡಂಬಡಿಕೆಯ ಕಾಲದಲ್ಲಿ ನಡೆದ ಇಸ್ರೇಲಿಗಳ ವಲಸೆ ಬಹುಶಃ ಇದೇ ರೀತಿ ಇದ್ದಿರಬೇಕು. ಇಸ್ರೇಲಿನ ಜನಸಂಖ್ಯೆ ಎಂಟು ಲಕ್ಷ. ಗ್ರಂಥದಲ್ಲಿ ಪುರುಷರ ಸಂಖ್ಯೆಯನ್ನು ಮಾತ್ರ ಗಣನಗೆ ತೆಗೆದುಕೊಂಡು ಎಂಟು ಲಕ್ಷ ಎಂದು ಹೇಳಿದೆ. ಹೆಂಗಸರೂ ಹಾಗೂ ಮಕ್ಕಳ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಈ ಸಂಖ್ಯೆ ಖಂಡಿತ ಅದರ ಮೂರುಪಟ್ಟು ಅಥವಾ ನಾಲ್ಕುಪಟ್ಟು ಹೆಚ್ಚಾಗುತ್ತದೆ. ಇಷ್ಟಿದ್ದರೂ ಸಹ ಭಾರತದ ವಿಭಜನೆಯ ಸಂದರ್ಭದಲ್ಲಿ ನಡೆಯುತ್ತಿದ್ದ ಮುಸ್ಲಿಂ,ಸಿಖ್,ಹಿಂದೂಗಳ ಈ ವಲಸೆಯ ಎದುರು ಎಕ್ಸೊಡಸ್‌ನಲ್ಲಿ ತಿಳಿಸಿದ ಜನವಲಸೆ ಏನೇನೂ ಅಲ್ಲ. **ನಾನು ಫೋಟೋ ತೆಗೆಯುತ್ತಿದ್ದ ಸಂದರ್ಭದಲ್ಲಿ ಸುಮಾರು ಐದು ದಶಲಕ್ಷ ಮಂದಿ ರಸ್ತೆಗಳಲ್ಲಿ ಇದ್ದರು. ಇನ್ನೂ ಅನೇಕ ಲಕ್ಷಮಂದಿ ಇವರೊಂದಿಗೆ ಸೇರಿಕೊಳ್ಳಲಿದ್ದರು. ಇದು ಲಕ್ಷಾಂತರ ನತದೃಷ್ಟ ಜನಕ್ಕೆ ಸ್ವಾತಂತ್ರ್ಯದಿಂದ ಸಿಕ್ಕ ಮೊದಲ ಕಹಿಫಲ.**

ಭಾರತದ ಸ್ವಾತಂತ್ರ್ಯಕ್ಕಾಗಿ ಸುದೀರ್ಘ ಕಾಲದಿಂದ ನಡೆದ ಹೋರಾಟದ ಕೊನೆಯ ಘಟ್ಟದಲ್ಲಿ ಈ ಎರಡು ದೇಶಗಳ ಸಿದ್ಧಾಂತ ಹುಟ್ಟಿಕೊಂಡಿತ್ತು. ಭಾರತದ ಎಲ್ಲ ಧರ್ಮಗಳವರೂ ಒಗ್ಗಟ್ಟಿನಿಂದಲೆ ಹೋರಾಡುತ್ತ ಬಂದಿದ್ದರು. ಅಂತಿಮ ಘಟ್ಟದಲ್ಲಿ ವಿಭಜನೆಗಾಗಿ ಪಟ್ಟು ಹಿಡಿಯಲಾಯಿತು. ಇನ್ನೇನ್ನೂ ಉದ್ದೇಶಗಳನ್ನು ಹೊಂದಿದ್ದ ನಾಯಕರು ಅವಸರವಸರವಾಗಿ ಭೂಪಟದ ಮೇಲೆ ವಿಭಜನೆಯ ಗೆರೆಗಳನ್ನು ಎಳೆದಿದ್ದರು. ಜನರ ಅಗತ್ಯತೆಗೆಳಿಗೂ ಇವರ ಉದ್ದೇಶಗಳಿಗೂ ತಾಳೆಯೇ ಇರಲಿಲ್ಲ. ಇವರು ಮಾಡಿದ ಕೆಲಸದಿಂದ ಜನಸಾಮಾನ್ಯರ ಬದುಕು ಅನಿರೀಕ್ಷಿತವಾಗಿ ತೀವ್ರತರವಾದ ಬದಲಾವಣೆಗೆ ತುತ್ತಾಗಿತ್ತು. ವಾಸ್ತವವಾಗಿ ಹಿಂದೂ ವ್ಯಾಪಾರಿಗಳು ಮತ್ತು ಕಾರ್ಖಾನೆ ಕಾರ್ಮಿಕರ ಸಮಸ್ಯೆಗಳಿಗೂ ಮುಸ್ಲಿಂ ವ್ಯಾಪಾರಿಗಳಿಗೂ, ಹಾಗೂ ಗಿರಿಣಿ ಕಾರ್ಮಿಕರ ಸಮಸ್ಯೆಗಳಿಗೂ ಯಾವ ವ್ಯತ್ಯಾಸವೂ ಇರಲಿಲ್ಲ. ಭಾರತದ ಯಾವ ಕಡೆಯ ಜನರೇ ಆಗಲಿ ಅವರಿಗೆ ಬೇಕಾಗಿದ್ದುದು ಜೀವನಮಟ್ಟದ ಸುಧಾರಣೆ, ಕೈಗಾರಿಕಾ ಅಭಿವೃದ್ಧಿ, ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳು... ಸ್ವಾತಂತ್ರ್ಯ ಬಂದರೆ ಸಾಕು ತಮ್ಮ ಬದುಕು ಎಲ್ಲ ವಿಧದಲ್ಲಿಯೂ ಶ್ರೀಮಂತವಾಗಿಬಿಡುತ್ತದೆ, ಸುಧಾರಿಸುತ್ತದೆ ಎಂದು ಜನ ನಂಬಿದ್ದರು.ಆದರೆ ಭಾರತದ ವಿಭಜನೆ ಈ ಕನಸಿಗೆ ತಡೆ ಹಾಕಿತು. ಪ್ರಗತಿಯನ್ನು ಮುಂದೂಡಿತು. ಯಾಕೆಂದರೆ ಇದು ಆರ್ಥಿಕವಾಗಿ ಅನುಕೂಲಕಾರಿಯಲ್ಲದ ಹಾಗೂ ಅವಾಸ್ತವಿಕವಾದ ವಿಭಜನೆಯಾಗಿತ್ತು. ಆದರೂ ಈ ವಿಭಜನೆಯ ಗೆರೆ ಎಳೆದಾಗ ಈ ಅವಾಸ್ತವಿಕತೆಯನ್ನು ವಾಸ್ತವಗೊಳಿಸಲು ಜನರೇ ಮುಂದಾಗಿದ್ದರು.

ಗಡಿರೇಖೆಯುದ್ದಕ್ಕೂ ಇವರ ಪ್ರವಾಹ ಇಮ್ಮುಖವಾಗಿ ಹರಿದಿತ್ತು. ಹಿಂದೂಗಳು ಮತ್ತು ಸಿಖ್ಖರು ಭಾರತದ ಒಕ್ಕೂಟದ ಕಡೆಗೆ ಬಂದರು. ಮುಸ್ಲಿಮರು ತಮ್ಮ ಹೊಸ ನಾಡಿನ ಕಡೆಗೆ ಹೊರಟರು. ಅದು ತಮ್ಮ ಕನಸಿನ ನಾಡಾಗುತ್ತದೆ ಎಂದು ಅವರು ನಿರೀಕ್ಷಿಸಿದ್ದರು. ಅವರಿಗೆ ಒಳಗೊಳಗೇ ಭಯ ತುಂಬಿತ್ತು. ತಮ್ಮ ನಾಯಕ ಎಂಥವನೋ ಎಂಬ ಸಂದೇಹ ಕಾಡಿತ್ತು. ಅವರ ನಿರೀಕ್ಷೆಯು ತೂಗುಯ್ಯಾಲೆಯಾಡುತ್ತಿತ್ತು. ಭೂಪಟದ ಮೇಲೆ ಸುಮ್ಮನೆ ಎಳೆದ ಗೆರೆಯಲ್ಲಿ ಈಗ ಜನ ಮೂಡತೊಡಗಿದ್ದರು. ತಾವೇ ಬೇರೆ ಅವರೆ ಬೇರೆ ಎಂಬ ಮತವಿರೋಧ ಸ್ಪಷ್ಟವಾಗಿ ಒಡೆದು ಕಾಣುತ್ತಿತ್ತು. **ಒಟ್ಟಿನಲ್ಲಿ ಇದು ಮಕ್ಕಳಾಟವಾಗಿರಲಿಲ್ಲ. ಮಾನವ ಸಂಕಷ್ಟಗಳ ಮೇಲೆ ಮಹಾಪ್ರಯೋಗವನ್ನು ನಡೆಸಿದ ಹಾಗಿತ್ತು. ಕೇವಲ ಪೆನ್ನುಗಳಿಂದ ಹಾಕಿದ ಗೆರೆಗಳು, ಮೊದಲೇ ಬವಣೆ ಪಡುತ್ತಿದ್ದ ಜನರ ಸಂಕಷ್ಟಗಳನ್ನು ಇನ್ನಷ್ಟು ಹೆಚ್ಚಿಸಿದ್ದವು.** ಇದು ಸಾಲದಂತೆ 1900ರಿಂದೀಚಿನ ಎಲ್ಲ ವರ್ಷಗಳಿಗಿಂತ ಈ ವರ್ಷ ಉತ್ತರಭಾರತ ಭಾರಿ ಪ್ರವಾಹದ ವಿಕೋಪಕ್ಕೆ ತುತ್ತಾಗಿತ್ತು. ಪಂಚನದಿಗಳ ನಾಡು ಎಂದು ಹೆಸರಾದ ಪಂಜಾಬಿನಲ್ಲಿ

ಐದು ನದಿಗಳೂ ಈ ಸಲ ದಡ ಮೀರಿ ಹರಿದಿದ್ದವು. ಕಾಲುವೆ ರೂಪದಲ್ಲಿ ನಿರ್ಮಿಸಲಾಗಿದ್ದ ಎಲ್ಲ ಮಣ್ಣಿನ ತಡೆಗೋಡೆಗಳೂ ಪ್ರವಾಹದ ಹಾವಳಿಯಲ್ಲಿ ಧೂಳಿಪಟವಾಗಿದ್ದವು. ಪ್ರವಾಹದ ನೀರು ಹೊಲಗಳ ಮೇಲೆ ಉಕ್ಕಿ ಹರಿದಿತ್ತು. ನಿರಾಶ್ರಿತ ವಲಸೆಗಾರರು ಪ್ರವಾಹದ ನಡುವೆ ಸಿಕ್ಕಿ ಬಿದ್ದಿದ್ದರು. ಸ್ವತಃ ನಾವೇ ಒಂದು ಸಲ ಉಕ್ಕಿ ಹರಿಯಿತ್ತಿದ್ದ ರಾವಿ ನದಿಯ ಪ್ರಹವಾದಲ್ಲಿ ಸಿಕ್ಕಿ ಬಿದ್ದೆವು. ಮೊದಲೇ ಎಚ್ಚರಿಕೆ ಸಿಕ್ಕಿದ್ದರಿಂದ ಅದರಿಂದ ಪಾರಾಗಲು ಸಾಧ್ಯವಾಯಿತು. ಆದರೆ ನನಗಿದ್ದಂತಹ ಸೌಲಭ್ಯಗಳು ಸಹಸ್ರಾರು ಮಂದಿ ರೈತರ ಪಾಲಿಗೆ ಇರಲಿಲ್ಲ. ಅವರಿಗೆ ಮೊದಲೇ ಎಚ್ಚರಿಕೆ ಕೊಡಲು ಯಾರೂ ಇರಲಿಲ್ಲ. ಜೀಪಿನಂತಹ ಅನುಕೂಲ ಅವರಿಗೆ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಬಿಯಾಸ್ ನದಿ ಬಹಳಷ್ಟು ಜನರನ್ನು ಬಲಿ ತೆಗೆದುಕೊಂಡಿತು. ನದಿ ಮತ್ತು ರೈಲ್ವೆ ದಿಬ್ಬದ ಮಧ್ಯದಲ್ಲಿದ್ದ ಒಂದು ಸ್ಥಳದಲ್ಲಿ ಸುಮಾರು ನಾಲ್ಕು ಸಾವಿರ ಮುಸ್ಲಿಮರು ಒಂದು ರಾತ್ರಿ ಬಿಡಾರ ಹೂಡಿದ್ದರು. ಮಾರನೇ ಬೆಳಿಗ್ಗೆ ಅದರಲ್ಲಿ ಬದುಕುಳಿದವರು ಒಂದು ಸಾವಿರ ಮಂದಿ ಮಾತ್ರ. ಆ ಪ್ರದೇಶ ರಣರಂಗದಂತಾಗಿತ್ತು. ಎಲ್ಲೆಲ್ಲೂ ಮಗುಚಿಕೊಂಡಿದ್ದ ಎತ್ತಿನಗಾಡಿಗಳು. ತೇಲಾಡುತ್ತಿದ್ದ ಪಾತ್ರೆ ಸಾಮಾನುಗಳು, ಕೆಸರು ಮಣ್ಣಿನಲ್ಲಿ ಸಿಕ್ಕಿಕೊಂಡಿದ್ದ ವ್ಯವಸಾಯದ ಉಪಕರಣಗಳು. ಇದಾದ ಕೆಲವು ದಿನಗಳ ನಂತರ ಈ ಪ್ರವಾಹದಿಂದ ಬದುಕುಳಿದವರು ಒಂದು ಬಿಡಾರ ಪ್ರದೇಶವನ್ನು ನೋಡುವ ಅವಕಾಶ ನನಗೆ ಸಿಕ್ಕಿತು. ಅಲ್ಲಿ ರಾತ್ರಿ ತಂಗಲು ಅವರು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಒಬ್ಬಾತ ರಸ್ತೆ ಬದಿಯಲ್ಲಿ ಗೋರಿ ತೋಡುತ್ತಿದ್ದ. ಆತನ ಹೆಸರು ರಸಿಕ್. ಆತ ಮೂಲತಃ ಜಲಂಧರ್‌ನವನು. ಅಲ್ಲಿ ಆತನಿಗೂ ಆತನ ಸೋದರಿಗೂ ಸೇರಿದಂತೆ ಹತ್ತು ಎಕರೆಗಳಷ್ಟು ಕಿತ್ತಳೆ ಹಣ್ಣಿನ ತೋಪಿತ್ತು. ಈತನ ಎರಡು ವರ್ಷದ ಮಗ ಈ ಮಧ್ಯಾಹ್ನ ಸತ್ತಿದ್ದ. ಅವನಿಗಾಗಿ ಈ ಗೋರಿ. ತನ್ನ ಮಗನನ್ನು ಹೂಳುವುದಕ್ಕೆ ಸೂಕ್ತ ಸ್ಥಳ ಸಿಗುವವರೆಗೆ ಆತ ಎಷ್ಟೋ ದೂರದಿಂದ ಮಗನ ಹೆಣವನ್ನು ಹೊತ್ತುಕೊಂಡೇ ನಡೆದಿದ್ದ. ಇದಕ್ಕೆ ಎರಡು ದಿನಗಳ ಹಿಂದಿನ ರಾತ್ರಿ ಅವರೆಲ್ಲ ರಾತ್ರಿ ತಂಗಲು ಎಂದಿಗಿಂತ ಹೆಚ್ಚು ಪ್ರಶಸ್ತ ಸ್ಥಳ ಸಿಕ್ಕಿದೆ ಎಂಬ ಸಂತೋಷದಿಂದ ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದರು. ಪಾಕಿಸ್ತಾನದ ಗಡಿ ಕೇವಲ 50 ಮೈಲುಗಳಷ್ಟು ದೂರವಿತ್ತು. ಮಧ್ಯರಾತ್ರಿ ಜನರ ಗದ್ದಲದಿಂದ ರಸಿಕ್‌ಗೆ ಎಚ್ಚರವಾಯಿತು. ಎದ್ದನೋಡಿದ. ನೀರಿನ ಮಟ್ಟ ಭರದಿಂದ ಮೇಲೇರುತ್ತಿತ್ತು. ರಸಿಕ್ ಮತ್ತು ಅವನ ಕುಟುಂಬದ ಜನರೆಲ್ಲ ಎತ್ತಿನ ಗಾಡಿಯ ಮೇಲೇರಿದರು. ನೀರು ಗಾಡಿಯ ಚಕ್ರಗಳ ಗುಂಭದವರೆಗೆ ಏರಿತು. ನಂತರ ಗಾಡಿಯ ಮೇಲೆ ನಿಂತಿದ್ದವರ ಮೊಣಕಾಲುಮಟ್ಟ ನೀರು ಏರಿತು. ಎರಡು ರಾತ್ರಿ ಎರಡು ಹಗಲು ಅವರು ಪ್ರವಾಹದ ಮಧ್ಯೆ ಗಾಡಿಯ ಮೇಲೆ ಅನ್ನ ನೀರಿಲ್ಲದೆ ನಿಂತಿದ್ದರು. ಅವರ ಜೊತೆಗೆ ಬರುತ್ತಿದ್ದ ಅನೇಕರು ಅವರ ಕಣ್ಣೆದುರೇ ನೀರಿನಲ್ಲಿ ಕೊಚ್ಚಿಕೊಂಡು ಹೋಗುತ್ತಿದ್ದರು. ಈ ಪ್ರಯಾಣ ಮುಗಿದ ನಂತರ ಮತ್ತೆ ಬದುಕನ್ನು ಆರಂಭಿಸುವುದಕ್ಕಾಗಿ ಅವರಿಗೆ ಅತ್ಯಗತ್ಯವಾಗಿ ಬೇಕಾಗಿದ್ದ ಜಾನುವಾರುಗಳು ನೀರಿನಲ್ಲಿ ಮುಳುಗಿದ್ದವು. ನೀರಿನ ಮಟ್ಟ ಕೆಳಗಿಳಿದಾಗ ರಸಿಕ್ ಕುಟುಂಬ ಕೆಳಗಿಳಿದು ಪ್ರಯಾಣ ಮುದುವರೆಸಿತು. ಆದರೆ ಈ ಆಯಾಸ ಬಳಲಿಕೆಯನ್ನು ತಾಳಿಕೊಳ್ಳಲಾರದ ಅವನ ಮಗ ಮಧ್ಯಾಹ್ನ ಸತ್ತು ಹೋದ.

ವಲಸೆ ಹೋಗುತ್ತಿದ್ದ ಜನರನ್ನು ಈ ಪ್ರವಾಹ ಮತ್ತು ಹಸಿವಿಗಿಂತ ಹೆಚ್ಚು ಭೀಕರವಾಗಿ ಕಾಡಿದ್ದು ವಿರೋಧಿ ಮತದವರ ಧಾಳಿಯ ಭೀತಿ. ರಸ್ತೆಯಲ್ಲಿ ವಲಸೆಗಾರರ ಮೇಲೆ ಯಾವಾಗ ಬೇಕಾದರೂ ಧಾಳಿ ನಡೆಯಬಹುದಿತ್ತು. ದೇಶವನ್ನು ಎರಡು ಹೋಳು ಮಾಡಿದ್ದ ರಾಜಕೀಯ ಒತ್ತಡಗಳು ಎಷ್ಟರಮಟ್ಟಿಗೆ ಮತೀಯ ದ್ವೇಷವನ್ನು ಕೆರಳಿಸಿದ್ದವೆಂದರೆ ಜನರ ಆಲೋಚನಾ ವಿಧಾನವೇ ಬದಲಾಗಿತ್ತು. ತಮ್ಮ ಧರ್ಮಕ್ಕೆ ಸೇರಿಲ್ಲದ ಯಾವುದೇ ಜನರೂ ಲೂಟಿ, ಸುಲಿಗೆ ಕೊಲೆಗೆ ಬಲಿಯಾತ್ತಿದ್ದರು. ರಸ್ತೆಯ ಪ್ರಯಾಣಕ್ಕಿಂತ ರೈಲು ಪ್ರಯಾಣ ಇನ್ನಷ್ಟು ಅಪಾಯಕಾರಿಯಾಗಿತ್ತು. ನಿರಾಶ್ರಿತರನ್ನು ತುಂಬಿಕೊಂಡ ರೈಲು ಗಾಡಿ ಹಳಿ ಬದಲಾಯಿಸುವಾಗ ಮತ್ತು ಬೇರೆ ಡಬ್ಬಿಗಳನ್ನು ಜೋಡಿಸಲೆಂದು ನಿಲ್ಲಿಸಿದ ಸಂದರ್ಭದಲ್ಲಿ ಅವುಗಳ ಮೇಲೆ ಸುಲಭವಾಗಿ ಆಕ್ರಮಣ ನಡೆಯುತ್ತಿತ್ತು. ಅಮೃತಸರದಲ್ಲಿದ್ದ ರೈಲ್ವೆ ನಿಲ್ದಾಣವಂತೂ ಮುಸ್ಲಿಮರಿಗೆ ನಡುಕ ಹುಟ್ಟಿಸುವ ತಾಣವಾಗಿತ್ತು. ಅಮೃತಸರ ಸಿಖ್ಖರ ಪವಿತ್ರ ಯಾತ್ರಾಸ್ಥಳ. ಆದ್ದರಿಂದ ಅದು ಉಗ್ರಮತೀಯರ ಕೇಂದ್ರ ಸ್ಥಾನ. ಪಾಕಿಸ್ತಾನವನ್ನು ಪ್ರವೇಶಿಸುವ ಮೊದಲು ರೈಲು ಹಾದು ಹೋಗಬೇಕಿದ್ದ ಕೊನೆಯ ದೊಡ್ಡ ಜಂಕ್ಷನ್ ಇದು. ಹೀಗೆ ಧಾಳಿಗೆ ತುತ್ತಾಗಿ ಧ್ವಂಸವಾಗಿದ್ದ ರೈಲು ನಿಲ್ದಾಣವನ್ನು ನಾನು ನೋಡಿದೆ. ಅಲ್ಲಿ ಸಾವಿರಾರು ಮುಸ್ಲಿಂ ನಿರಾಶ್ರಿತರು ಪ್ರಾಣ ಕಳೆದುಕೊಂಡಿದ್ದರು. ಉದ್ದುದ್ದ ಗಡ್ಡಗಳನ್ನು ಬಿಟ್ಟುಕೊಂಡು ಗಾಢ ನೀಲಿಯ ಪೇಟ ಕಟ್ಟಿದ್ದ ಉಗ್ರ ಅಕಾಲಿಪಂಥದ ಸಿಖ್ಖರು ಪ್ಲಾಟ್‌ಫಾರಂನ ಉದ್ದಕ್ಕೂ ಕಾಲಿನ ಮೇಲೆ ಕಾಲು ಹಾಕಿಕೊಂಡು ಕುಳಿತ್ತಿದ್ದರು.

ಅವರೆಲ್ಲಾ ಒಳ್ಳೆಯ ಅನುಕೂಲಸ್ಥರಂತೆಯೇ ಕಾಣುತ್ತಿದ್ದರು. ಈ ದೇಶಭಕ್ತರು ಮೊಳಕಾಲುಗಳ ನಡುವೆ ಉದ್ದನೆಯ ಬಾಗಿದ್ದ ಕತ್ತಿಗಳನ್ನಿಟ್ಟುಕೊಂಡು ಮುಂದಿನ ರೈಲು ಬರುವುದನ್ನೆ ತಣ್ಣಗೆ ನಿರೀಕ್ಷಿಸುತ್ತಿದ್ದವರು. ಆದರೆ ಮುಸ್ಲಿಮರು ಮಾತ್ರವೇ ಹೀಗೆ ಬಲಿಯಾಗುತ್ತಿದ್ದರೆಂದಲ್ಲ. ಪಾಕಿಸ್ತಾನದ ಗಡಿಯಿಂದ ಭಾರತವನ್ನು ಪ್ರವೇಶಿಸುವುದಕ್ಕೆ ಮೊದಲು ಸಿಗುತ್ತಿದ್ದ ಕೊನೆಯ ಜಂಕ್ಷನ್ ಲಾಹೋರ್. ಅದನ್ನು ದಾಟಿ ಬರುವಾಗ ಸಿಖ್ಖರು ಇಂಥದೇ ಬರ್ಬರ ಧಾಳಿಗೆ ತುತ್ತಾಗುತ್ತಿದ್ದರು. ಪಾಕಿಸ್ತಾನದ ಹೆದ್ದಾರಿಗಳಲ್ಲಿ ಬರುತ್ತಿದ್ದ ಹಿಂದೂ ಸಿಖ್ ನಿರಾಶ್ರಿತರನ್ನು ಕಂಡರೆ ಮುಸ್ಲಿಮರ ಕೋಪ ಕೆರಳುತ್ತಿತ್ತು.

ಲೈಫ್‌ಗಾಗಿ ನಾನು ಈ `Great Migration' ಫೋಟೋ ಸರಣಿ ಸಿದ್ಧ ಪಡಿಸುತ್ತಿದ್ದೆ. ನನ್ನ ಜೊತೆಗೆ ಲೀ ಎಟಿಂಗ್‌ಟನ್ ಪ್ರಿಜೆಲ್ ಇದ್ದಳು. ನಾನು ತೆಗೆಯುವ ಚಿತ್ರಗಳಿಗೆ ಶೀರ್ಷಿಕೆ ರಚಿಸುವುದು ಆಕೆಯ ಕೆಲಸ. ಹೀಗೆ ನಾವು ನಮಗೆ ಬೇಕಾದ ಸಾಮಗ್ರಿ ಸಂಗ್ರಹಿಸುತ್ತ ಪಂಜಾಬಿನ ಸುಮಾರು ನಾನೂರು ಮೈಲು ಉದ್ದಗಲಗಳಲ್ಲಿ ಸಂಚರಿಸಿದ್ದೆವು. ಈ ಕೆಲಸ ಹೆಂಗಸರಿಗೆ ಅಸಾಧ್ಯ ಎಂದು ನಮಗೆ ಎಚ್ಚರಿಕೆ ಕೊಟ್ಟಿದ್ದರು. ಒಂದು ಕಡೆಯಿಂದ ಇನ್ನೊಂದು ಕಡೆಗೆ ವಾಹನ ವ್ಯವಸ್ಥೆ ಸಿಗುವುದು ಕಷ್ಟವಾಗುತ್ತದೆ ಎಂದಿದ್ದರು. ಧಾಳಿಕೋರರು ಹೆಂಗಸರನ್ನು ಅಪಹರಿಸಿದ ಭಯಂಕರ ಘಟನೆಗಳು ವರದಿಯಾಗಿದ್ದವು. ಈ ಅಪಹರಣ ವರದಿಗಳ ಬಗ್ಗೆ ನಾನಾಗಲೀ, ಲೀ ಅಗಲೀ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಆದರೆ ಪ್ರತಿದಿನದ ನಮ್ಮ ಪ್ರಯಾಣಕ್ಕೆ ಸರಿಯಾದ ಡ್ರೈವರ್‌ನನ್ನು ಹೊಂದಿಸಿಕೊಳ್ಳುವುದು ನಮಗೆ ನಿರಂತರ ಸಮಸ್ಯೆಯಾಗಿತ್ತು. ನಮ್ಮ ಡ್ರೈವರ್‌ನನ್ನು ನಾವು ಯಾವ ಭಾಗದಲ್ಲಿ ಸಂಚರಿಸುತ್ತೇವೋ ಅಲ್ಲಿನ ಧಾರ್ಮಿಕ ವಾತಾವರಣಕ್ಕೆ ಹೊಂದಿಕೆಯಾಗುವಂಥ ವನಾಗಿರಬೇಕಿತ್ತು. ಗಡಿಪ್ರದೇಶವನ್ನು ದಾಟುವಾಗ ಯಾವ ಧರ್ಮಗಳ ವಿರುದ್ಧವೆನಿಸದಂಥವನಾಗಿರಬೇಕಿತ್ತು. ಈ ಸಂದರ್ಭಕ್ಕಾಗಿ ನಾವು ಬ್ರಿಟಿಷ್ ಕ್ಯಾಪ್ಟನ್ ಒಬ್ಬರ ಸೇವೆಯನ್ನು ಪಡೆದುಕೊಂಡೆವು. ಪಾಕಿಸ್ತಾನ ಸೇನೆಯಲ್ಲಿ ಅವರು ಅಧಿಕಾರಿಯಾಗಿದ್ದರು. ಅವರು ನಮ್ಮ ಅಗತ್ಯತೆಗೆ ತಕ್ಕಂತಿದ್ದರು. ಆ ದಿನವೆಲ್ಲ ನಮ್ಮ ಕಣ್ಣಿಗೆ ಕಂಡದ್ದು ತುಂಬ ದುಃಖ ತರುವಂಥ ಸಂಗತಿಗಳು. ನಾವು ಮೊತ್ತಮೊದಲ ಬಾರಿಗೆ ಕಾಲರಾ ವ್ಯಾಧಿಯ ವಿಕೋಪವನ್ನು ನೋಡಿದೆವು. ಕಸೂರ್ ಎಂಬಲ್ಲಿ ಸ್ವಲ್ಪ ಸುಧಾರಿತವೆಂದು ಹೇಳಬಹುದಾದ ಆಸ್ಪತ್ರೆಗೆ ಭೇಟಿ ಕೊಟ್ಟೆವು. ಅಲ್ಲಿ ಕಾಲರಾದಿಂದ ನರಳುತ್ತಿದ್ದ ಸುಮಾರು 800 ಮಂದಿ ರೋಗಿಗಳು ಜಾಗವಿಲ್ಲದೆ ನೆಲದ ಮೇಲೇ ಮಲಗಿದ್ದರು. ಅವರಲ್ಲಿ ಕೆಲವರು ಬದುಕಿಕೊಳ್ಳಬಹುದು ಎಂದು ಹೇಳಿದರಾದರೂ ಅವರನ್ನು ನೋಡಿದಾಗ ನಮಗೆ ಅಂಥ ಭರವಸೆಯೇನೂ ಮೂಡಲಿಲ್ಲ. ಅವರಿಗೆ ಎಂತಹ ಚಿಕಿತ್ಸೆ ಸಿಗುತ್ತದೆ ಎಂಬುದರ ಮೇಲೆ ಅವರ ಉಳಿವು ಅಳಿವು ಅವಲಂಬಿಸಿತ್ತು. ಬಹುಶಃ ನನ್ನನ್ನು ತುಂಬ ಕಂಗಾಲು ಮಾಡಿದ ದೃಶ್ಯ ಇದೇ ಇರಬೇಕು. ಇವೆಲ್ಲರ ಅಮಾಯಕ ರೈತರು. ತಮ್ಮ ಪೂರ್ವಿಕರ ಕಾಲದಿಂದ ನೆಲೆಸಿದ್ದ ಮನೆಗಳನ್ನು ಅನಿವಾರ್ಯವಾಗಿ ತೊರೆದು ಬಂದಿದ್ದರು. ತಮ್ಮ ಕನಸಿನ ನಾಡು ಸಿಗುತ್ತದೆ ಎಂದು ನಂಬಿ ಬಂದಿದ್ದವರು ಕೆಲವರು.

ಒಂದು ಸಲ ಸಂಜೆಯಾಗುತ್ತಿದ್ದಂತೆ ನಾವು ಲಾಹೋರಿಗೆ ಹಿಂದಿರುತ್ತಿದ್ದಾಗ ಅಲ್ಲಿನ ಒಂದು ಹೊಲದಲ್ಲಿ ಜನರ ಗುಂಪು ಕಂಡಿತು. ಅವರೆಲ್ಲ ಚೂಪುಕತ್ತಿಗಳನ್ನು ಸಿಕ್ಕಿಸಿದ್ದ ಉದ್ದಕೋಲುಗಳನ್ನು ಹಿಡಿದಿದ್ದರು. ಅಲ್ಲಿಂದ ಮುಂದೆ ರಸ್ತೆಯಲ್ಲಿ ತಿರುವು ತೆಗೆದುಕೊಂಡಾಗ ನಿರಾಶ್ರಿತರನ್ನು ತುಂಬಿಕೊಂಡ ಒಂದು ಟ್ರಕ್ ಹೋಗುತ್ತಿದ್ದುದು ಕಂಡುಬಂತು. ಅದರಲ್ಲಿದ್ದವರೆಲ್ಲ ಹಿಂದೂಗಳು. ಈ ಮಸ್ಲಿಂ ಪ್ರದೇಶದಲ್ಲಿ ಅವರು ಸಿಕ್ಕಿಕೊಂಡಿದ್ದರು. ನಾವು ಮೊದಲು ಹೊಲದಲ್ಲಿ ನೋಡಿದ ಜನ ಭರ್ಜಿಗಳನ್ನು ಹಿಡಿದು ಇವರನ್ನು ಅಟ್ಟಿಸಿಕೊಂಡು ಬರುತ್ತಿದ್ದರು. ಓಡಿಬಂದ ಜನ ಟ್ರಕ್ ಮೇಲೆ ಹತ್ತಿ ಅಲ್ಲಿದ್ದ ಬಟ್ಟೆ ಬರೆ ವಸ್ತುಗಳನ್ನೆಲ್ಲ ಎಳೆದಾಡಿ ಕೆಳಕ್ಕೆಸೆದರು. ಒಬ್ಬ ಕೈಕೊಡಲಿಯಿಂದ ಜನರನ್ನು ಕೊಚ್ಚುತ್ತಿದ್ದ. ಟ್ರಕ್‌ನಲ್ಲಿದ್ದವರು ಭಯದಿಂದ ಅರಚುತ್ತಿದ್ದರು. ನಮ್ಮ ಜೀಪನ್ನು ಡ್ರೈವ್ ಮಾಡುತ್ತಿದ್ದ ಕ್ಯಾಪ್ಟನ್ ಜೀಪಿನಿಂದ ಹೊರಹಾರಿ, ಅಲ್ಲಿಂದ ದೂರ ಹೋಗುವಂತೆ ಆಕ್ರಮಣಕಾರರಿಗೆ ಅಪ್ಪಣೆ ಮಾಡಿದ. ರಿವಾಲ್ವರ್‌ನಿಂದ ಗಾಳಿಯಲ್ಲಿ ಗುಂಡು ಹಾರಿಸಿದ. ಆದರೆ ಟ್ರಕ್ ಮುಂದೆ ಹೋಗದಂತೆ ದಪ್ಪತಂತಿಯ ಬೇಲಿ ಅಡ್ಡವಾಗಿತ್ತು. ಈ ತಡೆಯನ್ನು ಕ್ಯಾಪ್ಟನ್ ತೆಗೆದು ಹಾಕುತ್ತಿದ್ದಾಗ ಧಾಳಿಕೊರರು ಪುನಃ ಹಿಂಭಾಗದಿಂದ ಟ್ರಕ್ ಮೇಲೆ ಹತ್ತಿದರು. ಕೈಯಲ್ಲಿದ್ದ ಭರ್ಜಿ ಕೊಡಲಿಗಳನ್ನು ಮನಬಂದತ್ತ ಬೀಸುತ್ತಿದ್ದರು. ಈ ಸ್ಥಳದಿಂದ ನಾವು ಕೇವಲ ಮೂರು ಗಜಗಳ ಅಂತರಲ್ಲಿದ್ದೆವು. ಕ್ಯಾಪ್ಟನ್ ಅವರಲ್ಲಿ ಒಬ್ಬನ ಮೇಲೆ ಗುಂಡು ಹಾರಿಸಿದ. ಇತರರು ಟ್ರಕ್‌ನಿಂದ ಇಳಿದು ಕತ್ತಲಲ್ಲಿ ಓಡಿ ಮರೆಯಾದರು. ನಮ್ಮ ಜೀಪು ಮುಂದೆ ಹೊರಟಾಗ ಎಲ್ಲಿಂದಲೋ ಕೆಲವು ಗುಂಡುಗಳು ಹಾರಿದ ಶಬ್ದ ಕೇಳಿಸಿತು.

ಜನವಲಸೆಯನ್ನು ಹಿಂಬಾಲಿಸುತ್ತ ನಾವು ವಾರಗಟ್ಟಲೆ ತಿರುಗಾಡಿದೆವು. ನಮ್ಮ ಬಟ್ಟೆಬರೆಗಳು

ಧೂಳಿನಿಂದ ರಟ್ಟಿನಂತಾಗಿದ್ದವು. ಕೂದಲು ಬೂದಿಬಣ್ಣಕ್ಕೆ ತಿರುಗಿದಂತಾಗಿತ್ತು. ಕ್ಯಾಮರಾಗಲ್ಲಿಯೂ ಧೂಳು ಕಟ್ಟಿಕೊಂಡಿತ್ತು. ನಾವು ಕೂಡ ಈ ಓಡಾಟದಲ್ಲಿ ಎಷ್ಟು ಸುಸ್ತಾಗಿದ್ದೆವೆಂದರೆ ನಮ್ಮ ಕಣ್ಣ ಮುಂದೆಯೇ ನಡೆದ ಎಷ್ಟೋ ಹೃದಯವಿದ್ರಾವಕ ಘಟನೆಗಳ ಫೋಟೋ ತೆಗೆಯುವುದನ್ನು ಬಿಟ್ಟುಬಿಟ್ಟೆವು. ನನ್ನ ನೆಗೆಟಿವ್‌ಗಳೆಲ್ಲ ಮುಗಿದವು. ಲೀ ಎಲ್ಲ ಪೋಟೋಗಳಿಗೂ ಸೂಕ್ತ ಕ್ಯಾಪ್ಶನ್ ಬರೆದಳು. ವಿಮಾನದಲ್ಲಿ ಅವುಗಳನ್ನು ಲೈಫ್‌ಗೆ ಕಳಿಸಿದೆವು. ಆಮೇಲೆ ಲೀ, ಇನ್ನೊಂದು ಹೊಸ ಯೋಜನೆಯ ಮೇಲೆ ಜಗತ್ತಿನ ಇನ್ನೊಂದು ಭಾಗಕ್ಕೆ ಹೋದಳು. ಇಷ್ಟೆಲ್ಲ ಆದರೂ ಸಹಸ್ರ ಸಹಸ್ರ ರೈತಾಪಿ ಜನರ ಈ ದುರಂತ ಪ್ರಯಾಣ ನಡೆದೇ ಇತ್ತು. ಮುಂದೇನು ಎಂದು ಅವರಿಗೆ ಗೊತ್ತಿರಲಿಲ್ಲ. ಪಾಕಿಸ್ತಾನವನ್ನು ಬಿಟ್ಟು ಹೊರಟಿದ್ದ ಸಿಖ್ ಮತ್ತು ಹಿಂದೂಗಳ ಸಂಖ್ಯೆ ಸುಮಾರು ನಾಲ್ಕು ದಶಲಕ್ಷ. ಇದಕ್ಕೆ ಪ್ರತಿಯಾಗಿ ಭಾರತದಿಂದ ಪಾಕಿಸ್ತಾನದ ಕಡೆ ಹೊರಟಿದ್ದ ಮುಸ್ಲಿಮರ ಸಂಖ್ಯೆ ಆರು ದಶಲಕ್ಷ. ಹೀಗಾಗಿ ಈ 'ಪರಿಶುದ್ಧ' ಪುಟ್ಟನಾಡು ಈ ಸಂಖ್ಯಾಬಾಹುಳ್ಯದಿಂದಲೇ ಕುಸಿದುಹೋಗುವ ಅಪಾಯದಲ್ಲಿದ್ದಂತೆ ತೋರುತ್ತಿತ್ತು.

ವಲಸೆ ಹೊರಟವರ ಧಾರುಣ ಸ್ಥಿತಿ



ಮುಸ್ಲಿಂ ರೈತರು ಭಾರತದಲ್ಲಿ ಎಲ್ಲೆಲ್ಲಿದ್ದರೊ ಅದು ಮುಖ್ಯವಲ್ಲ. ಆದರೆ ಈಗ ಪಾಕಿಸ್ತಾನಕ್ಕೆ ಬಂದ ಮೇಲೆ ತಾವು ಇಂಥ ಸ್ಥಳದಲ್ಲಿ ನೆಲಸಬೇಕು ಎಂದು ಅವರು ನಿರ್ಧರಿಸಿಕೊಂಡು ಬಿಟ್ಟಿದ್ದರು. ಹೀಗೆ ಅವರು ನಿರ್ಧರಿಸಿಕೊಂಡಿದ್ದ ಸ್ಥಳದ ಹೆಸರು ಲ್ಯಾಲ್‌ಪುರ. ಪ್ರತಿಯೊಬ್ಬರೂ ಅಲ್ಲಿಯೇ ಹೊಲ ಮಾಡಿಕೊಳ್ಳುವ ಆಸೆಯಿಟ್ಟುಕೊಂಡಿದ್ದರು. ಯಾಕೆಂದರೆ ಇಡೀ ಭಾರತ ಉಪಖಂಡದಲ್ಲಿ ಇದರಷ್ಟು ಫಲವತ್ತಾದ ಭೂಮಿ ಇನ್ನೊಂದಿರಲಿಲ್ಲ. ಪೂರ್ವ ಮತ್ತು ಪಶ್ಚಿಮ ಪಂಜಾಬಿನ ನಡುವೆ ರಾಷ್ಟ್ರೀಯ ವಿಭಜನಾಗೆರೆ ಎಳೆದಾಗ ಲ್ಯಾಲ್‌ಪುರ ಪಾಕಿಸ್ತಾನಕ್ಕೆ ಸೇರಿಕೊಂಡು ಬಿಟ್ಟಿತು. ಕೇವಲ ಮೂವತ್ತು ವರ್ಷಗಳ ಹಿಂದೆ ಲ್ಯಾಲ್‌ಪುರ ಸಿಕ್ಕುಸಿಕ್ಕಾದ ಕಾಡು ಪ್ರದೇಶವಾಗಿತ್ತು. ಭಾರತದ ವೀರಾಗ್ರಣಿಗಳು ಎಂದು ಪ್ರಸಿದ್ಧರಾಗಿದ್ದ ಹಾಗೂ ಅತ್ಯಂತ ಕಷ್ಟಪಟ್ಟು ದುಡಿಯುವುದಕ್ಕೆ ಹೆಸರಾಗಿದ್ದ ಸಿಖ್ಖರು ಅಲ್ಲಿ ಬಂದು ನೆಲೆಸಿದ್ದು ಕುತೂಹಲಕಾರಿ. ಮೊದಲೇ ಮಹಾಯುದ್ಧದಲ್ಲಿ ಹೋರಾಡಿದ್ದಕ್ಕೆ ಬಳುವಳಿಯಾಗಿ ಈ ಕಾಡುಪ್ರದೇಶದಲ್ಲಿ ಅವರಿಗೆ ಭೂಮಿಯನ್ನು ಕೊಡಲಾಗಿತ್ತು. ಇಲ್ಲಿ ಬಂದು ನೆಲೆಸಿದ ಸಿಖ್ಖರು ಕಾಡನ್ನು ಸವರಿದರು. ಕಾಲವೆ ತೋಡಿದರು. ಉಳುಮೆ ಮಾಡಿದರು. ಕೇವಲ ಒಂದೇ ಒಂದು ತಲೆಮಾರಿನೊಳಗಾಗಿ ಈ ಭೂಮಿಯಲ್ಲಿ ಇವರು ಗೋಧಿ. ಹತ್ತಿ ಹಾಗೂ ಎಣ್ಣೆ ಬೀಜಗಳ ಸಮೃದ್ಧ ಬೆಳೆ ತೆಗೆಯತೊಡಗಿದರು. ಬಲವಾದ ಸುತ್ತುಗೋಡೆಯಿರುವ ಹಳ್ಳಿಗಳನ್ನು ಕಟ್ಟಿಕೊಂಡರು. ಪ್ರತಿ ಹಳ್ಳಿಯ ಮಧ್ಯೆ ಒಂದು ಗುರುದ್ವಾರ. ಎಲ್ಲಾರೂ ಆರಾಧನೆಗಾಗಿ ಅಲ್ಲಿ ಸೇರುತ್ತಿದ್ದರು.

ಮುಸ್ಲಿಮರಂತೆ ಸಿಖ್ಖರು ಕೊಡ ಏಕದೇವೋಪಾಸಕರು. ಹಿಂದೂಗಳಂತೆ ನೂರಾರು ದೇವರುಗಳನ್ನು (ಜೊತೆಗೆ ಮರ,ನದಿ, ಗೋವು ಸೇರಿದಂತೆ) ಪೂಜಿಸುವವರಲ್ಲ. ಹೀಗಿದ್ದೂ ಇವರಿಬ್ಬರೇ ಯಾಕೆ ಬದ್ಧವೈರಿಗಳಂತೆ ಸೆಣಸಾಡಿದರು ಎಂಬುದು ಅರ್ಥವಾಗದ ಸಂಗತಿ. ಈ ಕಾರಣದಿಂದಲೇ ನನಗೆ ಈ **"ಧಾರ್ಮಿಕ ಯುದ್ಧ" ಗಳೆಲ್ಲ ನಿಜಕ್ಕೂ ಧಾರ್ಮಿಕ ಕಾರಣಕ್ಕಾಗೇ ನಡೆಯುತ್ತಿವೆಯೇ ಎಂಬ ಪ್ರಶ್ನೆ ಕಾಡತೊಡಗಿತ್ತು. ಬಹುಶಃ ಇವರೆಲ್ಲ ಧರ್ಮದ ಸೋಗಿನಲ್ಲಿ ಇನ್ನಾವುದೋ ಉದ್ದೇಶಕ್ಕೆ ಹೋರಾಡುತ್ತಿದ್ದಾರೆ ಎನ್ನಿಸಿತು.** ಇಂತಹ ಧಾರ್ಮಿಕ ವೈಮನಸ್ಯಗಳ ಪ್ರಾಯೋಗಿಕ ಅನುಕೂಲಗಳೇನು ಎಂಬುದು ಮುಂದೆ ನನಗೆ ಮನವರಿಕೆಯಾಯಿತು.

ರಸ್ತೆಗಳಲ್ಲಿ ನನಗೆ ಎದುರಾದ ಸಿಖ್ಖರು ಹೇಳಿದ ಪ್ರಕಾರ 'ಏನು ನಡೆಯುತ್ತಿದೆ ಎಂದು ಗೊತ್ತಾಗುವುದಕ್ಕೂ ಮೊದಲೇ ದುರಂತ ಬಂದೆರಗಿತ್ತು. ನಾವು ನಮ್ಮ ನಾಡನ್ನು ಬಿಟ್ಟು ಹೋಗಬೇಕಾಗಬಹುದು ಎಂದು ನಮ್ಮ ನಾಯಕರು ನಮಗೆ ತಿಳಿಸಲೇ ಇಲ್ಲ. ಅಷ್ಟೆಲ್ಲ ಶ್ರಮಪಟ್ಟು ಸುಧಾರಿಸಿದ್ದ ಭೂಮಿಯನ್ನು ನಾವು ಬಿಟ್ಟುಬರ ಬೇಕಾಯಿತು" ಎಂದು ಅವರು ಹೇಳಿದರು. "ಇಡೀ ಪಂಜಾಬನ್ನು ನಮಗೇ ಬಿಟ್ಟುಕೊಡುತ್ತಾರೆ. ನಮಗೆ ನಮ್ಮದೇ ಆದ ಸಿಖ್‌ಸ್ಥಾನ ಸಿಗುತ್ತೆ ಎಂದು ಅಂದುಕೊಂಡಿದ್ದೆವು." ಎಂಬ ಮಾತನ್ನಂತೂ ಪದೇಪದೇ ಅವರು ಹೇಳುತ್ತಿದ್ದರು. ಮುಖ್ಯವಾಗಿ ಲ್ಯಾಲ್‌ಪುರ ಜಿಲ್ಲೆಯನ್ನು ಬಿಟ್ಟುಹೋಗಬೇಕಾದವರಂತೂ ಇಂತಹ ಹಠಾತ್ ಉಚ್ಚಾಟನೆಯಿಂದ ದಂಗಾಗಿದ್ದರು. ಇಲ್ಲಿದ್ದ

ಹಳ್ಳಿಗಳಲ್ಲಿ ಮುಸ್ಲಿಮರ ಸಂಖ್ಯೆ ಶೇಕಾಡ 25ರಿಂದ 40ರಷ್ಟು ಮಾತ್ರ. ಸಿಖ್ ರೈತರೊಂದಿಗೆ ಅವರ ಸಂಬಂಧ ಸ್ನೇಹಮಯವಾಗಿತ್ತು. ಸುತ್ತಮುತ್ತಲ ಜಿಲ್ಲೆಗಳಲ್ಲಿ ರಕ್ತಪಾತ ಆರಂಭವಾದಾಗ, ಇಲ್ಲಿ ನಿಮಗೆ ಏನೂ ತೊಂದರೆ ಯಾಗುವುದಿಲ್ಲ. ನಾವೆಲ್ಲ ಸೋದರರಂತೆ ಬಾಳಿತ್ತಿದ್ದೇವೆ ಎಂದು ಮುಸ್ಲಿಮರು ಹೇಳಿದ್ದರು. ಆದರೆ ವಿಭಜನೆಯನ್ನು ಸಾಧಿಸುವುದಕ್ಕಾಗಿ ಹುಟ್ಟುಹಾಕಿದ್ದ ವಿದ್ವೇಷದ ಭಾವನೆ ಎಲ್ಲ ನಿಯಂತ್ರಣವನ್ನೂ ಮೀರಿ ವ್ಯಾಪಿಸಿತ್ತು. ವಿಭಜನೆಗೆ ಧಾರ್ಮಿಕ ಆಧಾರವೇ ಮುಖ್ಯ ಕಾರಣವಾದಾಗ ಎಲ್ಲರೂ ಬರ್ಬರವಾಗಿ ವರ್ತಿಸಿದ್ದರು. ಎಲ್ಲೋ ಅಲ್ಲೊಂದು ಇಲ್ಲೊಂದು ಗುಂಪು ಸರಿಯಾಗಿ ಯೋಚಿಸುತ್ತಿದ್ದರೂ ಈ ಭಯೋತ್ಪದನೆಯನ್ನು ಅಡಗಿಸಲು ಅವರಿಂದ ಸಾಧ್ಯವಾಗಲಿಲ್ಲ.

ಈ ಬಿಕ್ಕಟ್ಟು ಹೇಗೆ ಬೆಳೆಯಿತು ಎಂದು ಗುರುದಿತ್ ಸಿಂಗ್ ವಿವರಿಸಿದ. 18 ಮೈಲುದ್ದದವರೆಗೆ ಇದ್ದ ಹಾಗೂ ಸಾವಿರಾರು ಎತ್ತಿನ ಗಾಡಿಗಳು ಒಂದರ ಹಿಂದೊಂದರಂತೆ ಶಿಸ್ತಾಗಿ ಚಲಿಸುತ್ತಿದ್ದ ವಲಸೆಯ ಪ್ರವಾಹದಲ್ಲಿ ಗುರುದಿತ್ ಸಿಂಗ್ ಮತ್ತು ಅವನ ಸಹೋದರರು ಹಾಗೂ ಅವರ ಪತ್ನಿಯರ ಇಡೀ ಕುಟುಂಬವೂ ಒಂದಾಗಿತ್ತು. ಹೀಗೇ ಹೋಗುತ್ತಿರುವಾಗ ಅವರ ಗಾಡಿಯ ಚಕ್ರ ಮುರಿದ ಕಾರಣ ಅದನ್ನು ಸರಿಡಿಸುವುದಕ್ಕಾಗಿ ಅವರು ಒಂದು ಕಡೆ ಸ್ವಲ್ಪ ಕಾಲ ನಿಲ್ಲಲೇಬೇಕಾಯಿತು. ಗಾಡಿಯ ಮೇಲೆ ಬೈಸಿಕಲ್ಲುಗಳು, ಹಾಸಿಗೆಗಳು, ಕೃಷಿ ಉಪಕರಣಗಳು, ಅಡಿಗೆ ಸಾಮಾನುಗಳು ಹೀಗೆ ಹೊರಲಾರದಷ್ಟು ಹೊರೆಯನ್ನು ಏರಿಸಿದ್ದರು. ಉದ್ದುದ್ದ ಗಡ್ಡಗಳು, ರೋಮಭರಿತ ತೋಳುಗಳು, ಧೂಳು ಮುಸಿಕಿದ ಹುಬ್ಬುಗಳು, ಜಡ್ಡುಗಟ್ಟಿದ ತಲೆಗೂದಲ ಆ ಕುಟುಂಬದ ಗಂಡಸೆರಲ್ಲ ಸೇರಿ ಗಾಡಿಯ ಚಕ್ರವನ್ನು ಸರಿಪಡಿಸಲು ಹೆಣಗಾಡುತ್ತಿದ್ದಾಗ ಈ ಭೂಮಿಯ ಮೇಲಿನ ಯಾವುದೇ ವಿಚಿತ್ರ ದೈತ್ಯ ಪೀಳಿಗೆಯವರಂತೆ ಕಾಣಿತ್ತಿದ್ದರು. ಗುರುದಿತ್ ಸಿಂಗ್ ಇದ್ದ ಹಳ್ಳಿಯ ಜನ ಹಳ್ಳಿಯನ್ನು ಬಿಡಲೇಬೇಕಾಗಿ ಬಂದ ಪರಿಸ್ಥಿತಿ ನಿರ್ಮಾಣವಾಗಿದ್ದು ಹೀಗೆ : ಮೊದಲನೆಯ ರಾತ್ರಿ ಹಳ್ಳಿಯ ಗೋಡೆಯ ಹೊರಗೆ ಕಬ್ಬಿನ ಹೊಲದಲ್ಲಿ ಕೆಲವೊಂದು ಮುಸ್ಲಿಮರು ಗುಂಪುಕೂಡಿ, ಎಲ್ಲ ಹೊರಗೆ ಬನ್ನಿ ಎಂದು ಕೂಗಾಡುತ್ತಿದ್ದರು. ಆ ರಾತ್ರಿ ಅಷ್ಟಕ್ಕೇ ಮಿಗಿಯಿತು. ಮಾರನೇ ರಾತ್ರಿ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಮರು ಹಳ್ಳಿಯನ್ನು ಸುತ್ತುವರೆದರು. ಅವರೆಲ್ಲ ಇಲ್ಲಿನವರಲ್ಲ; ಯಾವುದೇ ದೂರದ ಕಡೆಯಿಂದ ಬಂದ ಮುಸ್ಲಿಮರು. ಮಧ್ಯರಾತ್ರಿಯ ಹೊತ್ತಿಗೆ 'ಅಲ್ಲಾ ಹೋ ಅಕ್ಬರ್' ಎಂದು ಕೂಗಲಾರಂಭಿಸಿದರು. ಮನೆಯ ಛಾವಣೆಗಳನ್ನು ಹತ್ತಿ ನೋಡಿದ ಸಿಖ್ಖರಿಗೆ ದೂರದಲ್ಲಿ ಕೆಂಪು ಬೆಂಕಿಯ ಜ್ವಾಲೆಗಳು ಕಾಣಿಸಿದವು. ಇತರ ಹಳ್ಳಿಗಳನ್ನು ಹೀಗೇ ಸುತ್ತುವರೆದು ಬೆಂಕಿ ಹಚ್ಚಿದ್ದಾರೆ ಎಂದು ಅರ್ಥವಾಯಿತು. ಇನ್ನೂ ಬೆಳಕಾಗಿಲ್ಲ. ಆಗ ಮುಸ್ಲಿಂ ಶಾಲಾಮಾಸ್ತರರೊಬ್ಬರು ನೀವು ಯಾರೂ ಇಲ್ಲಿಂದ ಹೋಗಬೇಡಿ. ನಾವು ಮೊದಲಿನಿಂದಲೂ ಶಾಂತಿಯಿಂದ ಬಾಳಿದ್ದೇವೆ. ನಿಮಗೆ ನಾವು ರಕ್ಷಣೆ ಕೊಡುತ್ತೇವೆ. ಸಾಯುವುದಿದ್ದರೆ ನಿಮ್ಮೊಂದಿಗೆ ನಾವು ಸಾಯುತ್ತೇವೆ ಎಂದು ಸಿಖ್ಖರಿಗೆ ಹೇಳಿದರು. ಆದರೆ ಮಾರನೇ ರಾತ್ರಿ ಕಬ್ಬಿನ ಹೊಲದಿಂದ ಜೋರಾಗಿ ನಗಾರಿಗಳನ್ನು ಬಡಿಯುವ ಶಬ್ದ ಕೇಳಿಸಿತು. ಇದು ಆಕ್ರಮಣದ ಸೂಚನೆ ಎಂದು ಸಿಖ್ಖರಿಗೆ ಅರ್ಥವಾಯಿತು. ದೂರದಲ್ಲಿ ಎಲ್ಲೆಲ್ಲೂ ಬೆಂಕಿಯ ಜ್ವಾಲೆಗಳು ಉರಿಯುತ್ತಿದ್ದವು. ಮಧ್ಯರಾತ್ರಿಯಾಗಿದ್ದಾಗ ಶಾಲಾಮಾಸ್ತರರು ಬಂದರು. ಆಗ "ನಾವು ಏನೂ ಮಾಡುವಂತಿಲ್ಲ" ಎಂದು ಹೇಳಿ ಒಂದು ಪತ್ರವನ್ನು ಸಿಖ್ಖರ ಕೈಗೆ ಕೊಟ್ಟರು. ಅಲ್ಲಿದ್ದ ಜನರಲ್ಲಿ ಹೆಚ್ಚು ವಿದ್ಯಾವಂತನಾಗಿದ್ದ ಮಾಸ್ತರನಿಂದ ಒತ್ತಾಯಪೂರ್ವಕವಾಗಿ ಆ ಪತ್ರವನ್ನು ಬರೆಸಲಾಗಿತ್ತು. ಅದರ ಒಕ್ಕಣೆ ಹೀಗಿತ್ತು. "ಇದು ನಮ್ಮ ದೇಶ. ನೀವು ಈ ಜಾಗವನ್ನು ಬಿಟ್ಟು ಹೋಗಬೇಕು. ಈ ಭೂಮಿ ಮತ್ತು ಇಲ್ಲಿನ ಆಸ್ತಿಯೆಲ್ಲವೂ ಪಾಕಿಸ್ತಾನಕ್ಕೆ ಸೇರಿರುವುದರಿಂದ ನೀವು ಇಲ್ಲಿಂದ ಯಾವುದೇ ಚರಸ್ವತ್ತನ್ನೂ ತೆಗೆದುಕೊಂಡು ಹೋಗಬಾರದು." ಪತ್ರ ಕೊಡುವಾಗ ಮಾಸ್ತರರು ಅಳುತ್ತಿದ್ದರು.

ಮುಂದೆ ಬೆಲೊಕಿ ಎಂಬ ಸ್ಥಳದಿಂದ ದೊಡ್ಡ ವಲಸೆ ಹೊರಡುತ್ತಿದೆ ಎಂದು ತಿಳಿದುಕೊಂಡು ಗ್ರಾಮಸ್ಥರು ಟೌನ್‌ಹಾಲ್‌ಗೆ ಪತ್ರ ಬರೆದು ತಮಗೆ ಬೆಂಗಾವಲು ಕಳಿಸಬೇಕೆಂದು ಮನವಿ ಮಾಡಿಕೊಂಡರು. ಜಿಲ್ಲಾ ಮ್ಯಾಜಿಸ್ಟ್ರೇಟರು ಅವರ ರಕ್ಷಣೆಗಾಗಿ ಸೈನಿಕರನ್ನು ಕಳಿಸಿದರು. ಗ್ರಾಮಸ್ಥರು ಎತ್ತಿನ ಗಾಡಿಗಳಲ್ಲಿ ಎಷ್ಟೆಷ್ಟೋ ಸಾಧ್ಯವೋ ಅಷ್ಟಷ್ಟು ತಮ್ಮ ಸಾಮಾನುಸರಂಜಾಮನ್ನು ಹೇರಿಕೊಂಡು ಹೊರಟರು. ಲೂಟಿಗಾರರು ಲೂಟಿ ಮಾಡದಂತೆ ಎಲ್ಲ ಮನೆಗಳಿಗೂ ಮ್ಯಾಜಿಸ್ಟ್ರೇಟ್ ಬೀಗ ಹಾಕಿಸಿದ. ಸ್ವತಃ ಮುಸ್ಲಿಮನಾಗಿದ್ದ ಆತ ವ್ಯವಸಾಯದಲ್ಲಿ ಪರಿಣಿತರಾಗಿದ್ದ. ಜನ ಊರು ಬಿಟ್ಟು ಹೋಗುವುದನ್ನು ದುಃಖದಿಂದ ನೋಡುತ್ತ ನಿಂತಿದ್ದ. ಬೇರೆ ಕಡೆಯಿಂದ ಇಲ್ಲಿಗೆ ವಲಸೆ ಬರುವ ಜನರ ಕೃಷಿವಿಧಾನ ಬೇರೆ ರೀತಿಯಿರುತ್ತದೆ. ಇಲ್ಲಿನ ನೀರಾವರಿ ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಳ್ಳುದಕ್ಕೆ ಅವರಿಗೆ ತಕ್ಷಣ ಸಾಧ್ಯವಾಗುವುದಿಲ್ಲ ಎಂದು ಅವನು ಚಿಂತಿಸುತ್ತಿದ್ದ.

ಜನರ ವಲಸೆ ಆರಂಭವಾದಾಗಿನಿಂದ ಈ ಇಡೀ ಪ್ರದೇಶದ ಕೊಯಿಲು, ಬಿತ್ತನೆ ಮೊದಲಾದ ಕೆಲಸಗಳೆಲ್ಲವೂ ಅಸ್ತವ್ಯಸ್ತಗೊಂಡಿದ್ದವು. ಮುಂದಿನ ಬೆಳೆ ವಿಳಂಬವಾಗುವುದರಿಂದ ಆಹಾರದ ತೀವ್ರ ಕೊರತೆ ಎದುರಾಗಲಿತ್ತು. ನಿರಾಶ್ರಿತರ ವಲಸೆ ಹೆಚ್ಚುತ್ತಲೇ ಇದ್ದರಿಂದ ಇದನ್ನು ತಪ್ಪಿಸಲು ಬರುವಂತಿರಲಿಲ್ಲ.

ಪ್ರತಿಯೊಬ್ಬರೂ ಒಂದಲ್ಲ ಒಂದು ನಷ್ಟಕ್ಕೆ ಗುರಿಯಾಗಿದ್ದರು. ಅಮೃತಸರದಲ್ಲಿ ನೆಲೆಸಿದ್ದ ಒಬ್ಬ ಶ್ರೀಮಂತ ಮುಸ್ಲಿಂ ಮಹಿಳೆಯ ಮನೆಯ ಭಾಗ ಭಾರತಕ್ಕೆ ಸೇರಿಹೋದ್ದರಿಂದ ತನ್ನ ಅಮೂಲ್ಯ ಆಭರಣಗಳನ್ನೆಲ್ಲ ಬಾವಿಗೆ ಹಾಕಿ ಗಡಿದಾಟಿ ಪಾಕಿಸ್ತಾನಕ್ಕೆ ಬಂದಿದ್ದಳು. ಅನಂತರ ಯಾರಾದರೊಬ್ಬ ಮುಳುಗುಗಾರ ಸಿಕ್ಕರೆ ಆ ಸ್ಥಳಕ್ಕೆ ಹೋಗಿ ಆಭರಣಗಳನ್ನು ತೆಗೆದುಕೊಂಡು ಬರಬೇಕೆಂದು ಹುಚ್ಚಿಯಂತೆ ಪರದಾಡುತ್ತಿದ್ದಳು. ಒಬ್ಬಾತ ಕುದುರೆ ತಳಿ ಬೆಳೆಸುವದರಲ್ಲಿ ನಿಷ್ಣಾತ, ಅವನು ದೇಶದಲ್ಲಿಯೇ ಅತ್ಯುತ್ತಮವಾದ ಕುದುರೆ ತಳಿಯನ್ನು ನಿರ್ಮಿಸಿದ್ದ. ವಿಭಜನೆಯ ನಂತರ ಆತ ಪಾಕಿಸ್ತಾನದಲ್ಲಿ ಉಳಿದ. ಆತನ ಬಳಿ ಹೆಣ್ಣು ಕುದುರೆಗಳು ಮಾತ್ರ ಉಳಿದವು. ಪ್ರತಿ ಬೇಸಿಗೆಯಲ್ಲಿಯೂ ಬೀಜದ ಕುದುರೆಗಳನ್ನು ಮೇಯುವುದಕ್ಕಾಗಿ ಕಾಶ್ಮೀರದ ಬೆಟ್ಟದ ತಪ್ಪಲಲ್ಲಿ ಬಿಡುವುದು ಅವನ ಪದ್ಧತಿಯಾಗಿತ್ತು. ಈಗ ಆ ಭಾಗವೆಲ್ಲ ಭಾರತಕ್ಕೆ ಸೇರಿದ್ದರಿಂದ ಬೀಜದ ಕುದುರೆಗಳು ಭಾರತದಲ್ಲೇ ಉಳಿದವು. ಕಾಶ್ಮೀರದ ಆ ಭಾಗದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಾಗಿತ್ತಾದ್ದರಿಂದ ಆ ಭಾಗ ಭಾರತಕ್ಕೆ ಸೇರಬಹುದೆಂಬ ಊಹೆಯೂ ಆತನಿಗಿರಲಿಲ್ಲ.

ಹೀಗೆ ಸಮಸ್ಯೆಗಳು ಹೆಚ್ಚುತ್ತಲೇ ಇದ್ದವು. ಪಾಕಿಸ್ತಾನದ ಬ್ಯಾಂಕುಗಳ ಕೆಲಸ ನಿಂತುಹೋಗಿತ್ತು. ಬ್ಯಾಂಕಿನ ಗುಮಾಸ್ತರೆಲ್ಲ ಹಿಂದೂಗಳು. ಹೀಗಾಗಿ ಅವರು ಭಾರತಕ್ಕೆ ಹೋಗಿಬಿಟ್ಟರು. ಇಡೀ ಅಂಗಡಿ ಬೀದಿಗಳು ನಿರ್ಜನವಾಗಿದ್ದವು. ಅಂಗಡಿಗಳೆಲ್ಲ ಬಹುತೇಕವಾಗಿ ಹಿಂದೂಗಳಿಗೆ ಸೇರಿದ್ದವು. ಅವರು ನಗದು ಹಣ ತೆಗೆದುಕೊಂಡು ಭಾರತಕ್ಕೆ ಹೋದರು. ಹತ್ತಿ ಮಾರಾಟದ ಕೇಂದ್ರ ಕಟ್ಟಡ. ಈಗ ಬಿಕೋ ಎನ್ನುತ್ತಿತ್ತು. ಹತ್ತಿಯ ದಲ್ಲಾಲಿಗಳೆಲ್ಲ ಹಿಂದೂಗಳು. ಸುಮಾರು ಮನ್ನೂರು ಮಂದಿ ಬ್ರೋಕರುಗಳಲ್ಲಿ ಕೇವಲ ಹತ್ತು ಮಂದಿಯನ್ನು ಬಿಟ್ಟು ಉಳಿದವರೆಲ್ಲ ಭಾರತಕ್ಕೆ ಪಲಾಯನ ಮಾಡಿದ್ದರು. ಪಾಕಿಸ್ತಾನದ ಬಂಗಾರದ ಎಳೆ ಎಂದು ಪ್ರಸಿದ್ಧವಾಗಿದ್ದ ಸೆಣಬಿನ ಸಂಪತ್ತೆಲ್ಲವೂ ಕೊಳ್ಳುವವರಿಲ್ಲದೆ ಗಡಿಪ್ರದೇಶದಲ್ಲಿ ರಾಶಿರಾಶಿಯಾಗಿ ಬಿದ್ದಿತ್ತು. ಏಕೆಂದರೆ ಸೆಣಬಿನ ಗಿರಿಣಿಗಳು ಭಾರತದಲ್ಲಿದ್ದವು. ಉಕ್ಕಿನ ಗಿರಿಣಿಗಳು ಭಾರತದಲ್ಲಿದ್ದವು. ಪಾಕಿಸ್ತಾನದಲ್ಲಿ ಒಂದೇ ಒಂದು ಬೆಂಕಿಪೊಟ್ಟಣದ ಕಾರ್ಖಾನೆ ಇರಲಿಲ್ಲ. ಇದಕ್ಕೆ ಪ್ರತಿಯಾಗಿ ಭಾರತದಲ್ಲಿದ್ದ ತೊಗಲು ಕೆಲಸಗಾರರು, ಬಟ್ಟೆ ಹೊಲಿಯುವವರು, ಮೆಕ್ಯಾನಿಕ್‌ಗಳು, ಎಲೆಕ್ಟ್ರಿಶಿಯನ್‌ಗಳೆಲ್ಲ ಮುಸ್ಲಿಮರಾಗಿದ್ದು ಅವರೆಲ್ಲ ಭಾರತ ಬಿಟ್ಟು ಹೋಗಿದ್ದರು. ಇದರಿಂದ ಟೆಲಿಫೋನ್ ಜಾಲಕ್ಕೆ ಬಹಳ ಧಕ್ಕೆಯಾಗಿತ್ತು. ಡಯಲ್‌ಫೋನುಗಳನ್ನು ರಿಪೇರಿ ಮಾಡುವವರೇ ಇಲ್ಲವಾಗಿತ್ತು. ನಗರಗಳ ನಡುವೆ ಸಂಪರ್ಕ ಅತ್ಯಂತ ಕಷ್ಟವಾಯಿತು.


ನಾನು ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಒಂದೂವರೆ ವರ್ಷದ ಮೊದಲು ಬಂದವಳು. ಆಗಿನಿಂದಲೂ ಅಧಿಕಾರಕ್ಕಾಗಿ ನಿರಂತರ ಹೋರಾಟ ನಡೆಯುವುದನ್ನು ನೋಡುತ್ತಲೇ ಇದ್ದೆ. ಅಂತಿಮವಾಗಿ ಸ್ವತಂತ್ರವಾದ, ಒಂದು ಏಕೀಕೃತ ರಾಷ್ಟ್ರದ ಬದಲಿಗೆ ಅಂಗವಿಕಲವಾದ ಅವಳಿ ಜವಳಿಗಳು ಹುಟ್ಟಿದ್ದವು. ಜಗಳದ ಆರಂಭದಲ್ಲಿಯೇ ರಕ್ತಪಾತ ಶುರುವಾಗಿತ್ತು. ಪಾಕಿಸ್ತಾನಕ್ಕಾಗಿ ಹೋರಾಡುವವರು ನಮಗೆ ಪ್ರತ್ಯೇಕ ರಾಷ್ಟ್ರಬೇಕು; ಇಲ್ಲದಿದ್ದರೆ ನಾವು ಶಾಂತಿಯಿಂದಿರಲು ಸಾಧ್ಯವಿಲ್ಲ. ಎಂದು ಹೇಳುತ್ತಲೇ ಇದ್ದರು. ಅಂತೂ ಅವರ ಪ್ರತ್ಯೇಕ ರಾಷ್ಟ್ರದ ಕನಸು ನನಸಾಗಿತ್ತು. ಆದರೆ ಜನಕ್ಕೆ ಶಾಂತಿ ಸಿಗಲಿಲ್ಲ. ತಾವು ಸಾಧಿಸಿದ್ದೇನು ಎಂಬುದು ಇಷ್ಟು ಬೇಗ ಅವರಿಗೆ ಗೊತ್ತಾಗುವುದು ಸಾಧ್ಯವಿರಲಿಲ್ಲ. ಮುಸಲ್ಮಾನರ ಪಾಕಿಸ್ತಾನ ಹೀಗಿರುತ್ತೆ ಎಂದು ಯಾರಿಗೆ ಗೊತ್ತಿತ್ತು ಎಂದು ಈ ವಲಸೆಯಲ್ಲಿ ಬೇಸತ್ತು ಹೋಗಿದ್ದ ಒಬ್ಬ ಮುಸ್ಲಿಂ ವ್ಯಕ್ತಿ ಹೇಳುತ್ತಿದ್ದ.

ನಮಗೆ ಸಿಖ್ಖಿಸ್ತಾನ ಸಿಗುತ್ತದೆ ಎಂದು ಹೇಳುತ್ತಿದ್ದ ಸಿಖ್ಖರು ಈಗ ಅಷ್ಟೆಲ್ಲ ತಾವು ಹಸನು ಮಾಡಿಟ್ಟಿದ್ದ ಭೂಮಿಯನ್ನು ಬಿಟ್ಟುಬರುವಾಗ ನಮಗೆ ಸುಖವೆಂಬುದು ಇನ್ನು ಕನಸೇ ಸರಿ ಎಂದ್ದರು. ಗಡ್ಡಪೇಟಗಳಿಗೆಲ್ಲ ದಟ್ಟವಾಗಿ ಧೂಳು ಮೆತ್ತಿಕೊಂಡಿದ್ದರೂ ಒಂದಿಷ್ಟೂ ಬೇಸರಿಸದೆ ಆತ್ಮಗೌರವದಿಂದ ಇದ್ದ ಸಿಖ್ ವ್ಯಕ್ತಿ ಹೇಳಿದ ಮಾತು ನನಗಿನ್ನೂ ನೆನಪಿದೆ. ಆತ ಹೇಳಿದ "ಈ ಮುಸಲ್ಮಾನರ ಭವಿಷ್ಯವೂ ಕೊಡ ಅಂಧಕಾರಮಯವಾಗಿದೆ. ಅವರೂ ನಮ್ಮಂತೆಯೇ ನಿಸ್ಸಹಾಯಕರು. ನಮ್ಮಂತೆ ಅವರೂ ತಮ್ಮ ಮನೆ ಮಾರುಗಳನ್ನು ಕಳೆದುಕೊಂಡಿದ್ದಾರೆ. ನಮ್ಮ ಹಾಗೇ ಅವರೂ ದುರದೃಷ್ಟದ ಬಲಿಪಶುಗಳು."

○

ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ಪಾತ್ರ

ವಿ.ಜೆ.ಕೆ.ನಾಯರ್



ರಾಜಕೀಯ ಮುಖಂಡರು ಇತಿಹಾಸ 'ವನ್ನು ಸೃಷ್ಟಿಸುತ್ತಾರೆಂದು ಭಾವಿಸಿರುವವರು ಭಾರತ ಸ್ವಾತಂತ್ರ್ಯ ಚಳುವಳಿಯನ್ನು ಸಹ ರಾಷ್ಟ್ರೀಯ ಮುಖಂಡರ ಒಲವು–ನಿಲುವುಗಳನ್ನಾಗಿಯೇ ನೋಡುತ್ತಾರೆ. ದುಡಿಯುವ ಜನತೆ – ಜನ ಸಾಮಾನ್ಯರು ವಹಿಸಿದ ಪಾತ್ರವನ್ನು ನಿರ್ಲಕ್ಷಿಸುತ್ತಾರೆ. ಆದರೆ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದ ಹಾಗೂ ಕರ್ನಾಟಕ ರಾಜ್ಯದ ಕಾರ್ಮಿಕ ವರ್ಗ ವಹಿಸಿದ ಉಜ್ವಲ ಪಾತ್ರವನ್ನು ಗುರುತಿಸಿ ವಿಶ್ಲೇಷಿಸಿದ್ದಾರೆ ಹಿರಿಯ ಕಾರ್ಮಿಕ ನೇತಾರ ಹಾಗೂ ಲೇಖಕ.

ಇಪ್ಪತ್ತನೇ ಶತಮಾನದ ಭಾರತದ ಚರಿತ್ರೆಯನ್ನು ಸ್ಥೂಲವಾಗಿ ಎರಡು ಭಾಗವನ್ನಾಗಿ ಮಾಡಬಹುದು. ಮೊದಲ ಭಾಗದ 1950 ರಲ್ಲಿ ಸಾಧಿಸಲಾದ ಭಾರತ ಗಣರಾಜ್ಯದ ಸ್ಥಾಪನೆ ಮತ್ತು ಅದಕ್ಕಾಗಿ ನಡೆದ ಚಳುವಳಿ. ಎರಡನೆಯದು ಭಾರತ ದೇಶದ ಶೋಷಿತ ಮೂಲ ವರ್ಗಗಳು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಮೂಲಕ ದೇಶದಲ್ಲಿ ಯೋಜಿತ ಅಭಿವೃದ್ಧಿಯ ಹಾದಿ ರೂಪುಗೊಳ್ಳಲು ಕಾರಣವಾಗಿದ್ದು ಮತ್ತು ಸ್ವಾತಂತ್ರ್ಯದ ಕ್ರೋಢೀಕರಣ. ಮೊದಲ ಭಾಗದಲ್ಲಿ ಕಾರ್ಮಿಕವರ್ಗ ತನ್ನ ಹೋರಾಟದಲ್ಲಿ ಇತರ ವಿವಿಧ ವಿಭಾಗಗಳ ಪ್ರೋತ್ಸಾಹವನ್ನು ಗಳಿಸಿತು. ಏಕೆಂದರೆ ಭಾರತ ಸ್ವಾತಂತ್ರ್ಯ ಗಳಿಸಬೇಕಾದರೆ ಕಾರ್ಮಿಕ ವರ್ಗದ ದನಿಯೂ ಜೊತೆಗೂಡಬೇಕಾಗಿತ್ತು. ಎರಡನೆಯ ಭಾಗದಲ್ಲಿ ಕಾರ್ಮಿಕ ವರ್ಗವು ಬಂಡವಾಳಶಾಹಿ ಪಕ್ಷ ವಹಿಸಿದ ತನ್ನದೇ ರಾಷ್ಟ್ರೀಯ ನಾಯಕತ್ವದಿಂದ ಅಪಮಾನಕರ ರೀತಿಯ ಶೋಷಣೆಗೆ ಗುರಿಯಾಯಿತು.

1908 ರಷ್ಟು ಹಿಂದೆಯೇ ಅಂದಿನ 'ತೀವ್ರಗಾಮಿ' ನಾಯಕರಾಗಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕರ ರಕ್ಷಣೆಗಾಗಿ ಬಾಂಬೆಯ ಕಾರ್ಮಿಕ ವರ್ಗ ನಡೆಸಿದ ತೀವ್ರ ಮತ್ತು ಸಾಮೂಹಿಕ ಕಾರ್ಯಾಚರಣೆಯನ್ನು ಅಂದಿನ ಮಹಾನ್ ಕ್ರಾಂತಿಕಾರಿ ಲೆನಿನ್‌ರವರು ಸಹ ಗುರುತಿಸಿದ್ದರು.

ಆಗಿನ್ನೂ ಬೆಳೆದು ಬರುತ್ತಿದ್ದ ಸ್ವಾತಂತ್ರ್ಯ ಹೋರಾಟದ ಆರಂಭಿಕ ಕಾಲಘಟ್ಟದಲ್ಲಿ ಕಾರ್ಮಿಕ ವರ್ಗವು ತಾನು ಇನ್ನೂ ಪ್ರಬುದ್ಧತೆಯನ್ನು ಗಳಿಸಿಕೊಳ್ಳಬೇಕಾದ ಸ್ಥಿತಿಯಲ್ಲಿತ್ತು. ಕಾರ್ಮಿಕ ವರ್ಗವು ತನ್ನ ಶೈಶವಾವಸ್ಥೆಯಲ್ಲಿ ಸಹ ದೇಶಪ್ರೇಮದ ಪ್ರಶ್ನೆಯಲ್ಲಿ ಯಾವುದೇ ರೀತಿಯಲ್ಲೂ ಇತರ ವಿಭಾಗಕ್ಕಿಂತ ಕಡಿಮೆಯಾಗಿರಲಿಲ್ಲ ಎಂಬುದನ್ನು ನಾವಿಲ್ಲಿ ಗುರುತಿಸಬೇಕಾಗುತ್ತದೆ. ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಹಿಸಿದ ಪಾತ್ರವನ್ನೇ ಕಾರ್ಮಿಕವರ್ಗವು ಸ್ವಂತ ತನ್ನದೇ ಚಳುವಳಿಯನ್ನು ಸಂಘಟಿಸಿಕೊಳ್ಳಲು ಬಳಸಿಕೊಂಡಿತು. ರಾಷ್ಟ್ರೀಯ ಬಂಡವಾಳಶಾಹಿ ವರ್ಗವು ಈ ಕಾರ್ಮಿಕ ವರ್ಗದ ಚಳುವಳಿಯನ್ನು ತನ್ನ ಗುರಿ ಸಾಧನೆಗೆ ಬಳಸಿಕೊಂಡದ್ದು ಬೇರೆ ವಿಚಾರ.

'ಆಧುನಿಕ ಕಾರ್ಮಿಕ ವರ್ಗ'ದ ಅಂದಿನ ವಿವರಣೆಗೆ ಹತ್ತಿರವಾಗಿದ್ದ ಬಾಂಬೆಯ ಕಾರ್ಮಿಕ ವರ್ಗವು ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನ್ನ ವಿಶೇಷ ಪಾತ್ರವನ್ನು ವಹಿಸಿತು.

1908 ರಷ್ಟು ಹಿಂದೆಯೇ ಅಂದಿನ 'ತೀವ್ರಗಾಮಿ' ನಾಯಕರಾಗಿದ್ದ ಲೋಕಮಾನ್ಯ ಬಾಲಗಂಗಾಧರ ತಿಲಕರ ರಕ್ಷಣೆಗಾಗಿ ಬಾಂಬೆಯ ಕಾರ್ಮಿಕ ವರ್ಗ ನಡೆಸಿದ ತೀವ್ರ ಮತ್ತು ಸಾಮೂಹಿಕ ಕಾರ್ಯಾಚರಣೆಯನ್ನು ಅಂದಿನ ಮಹಾನ್ ಕ್ರಾಂತಿಕಾರಿ ಲೆನಿನ್‌ರವರು ಸಹ ಗುರುತಿಸಿದ್ದರು. ಲೆನಿನ್‌ರವರು ಆ ಬಗ್ಗೆ ('ಲೇಖನಿಯ ರಕ್ಷಣೆಗಾಗಿ ಬೀದಿಗಳು ಎದ್ದು ನಿಂತಿವೆ') ಎಂದು ಬಣ್ಣಿಸಿದ್ದಾರೆ. ಬ್ರಿಟಿಷ್ ಪ್ರಭುತ್ವ 'ಸ್ವರಾಜ್' ಪತ್ರಿಕೆಯ ಸಂಪಾದಕರಾಗಿದ್ದ ತಿಲಕರನ್ನು ಬಂಧಿಸಿ ಜೈಲಿಗೆ ಹಾಕಿದಾಗ ಅವರ ರಕ್ಷಣೆಗೆ ನಿಂತು ಸಾಮಾನ್ಯ ಕಾರ್ಮಿಕ

ವರ್ಗ ನಡೆಸಿದ ಬೀದಿ ಕಾಳಗದ ಕುರಿತು ಲೆನಿನ್‌ರವರು ಈ ಸುಂದರವಾದ ಮತ್ತು ಅರ್ಥಪೂರ್ಣವಾದ ಮಾತನ್ನು ಹೇಳಿದ್ದಾರೆ.

ಕಾರ್ಮಿಕವರ್ಗದ ಇತಿಹಾಸಕಾರರಾದ ಸುಕೋಮಲ್‌ಸೇನ್ ಕಾರ್ಮಿಕವರ್ಗದ ಈ ಸಂಗ್ರಾಮವನ್ನು ದಾಖಲಿಸಿದ್ದಾರೆ. ಬಾಂಬೆಯ ಸುಮಾರು 10 ಬೃಹತ್ ಜವಳಿ ಗಿರಣಿಗಳು ಕೆಲಸವನ್ನು ಸ್ಥಗಿತಗೊಳಿಸಿ ಬೀದಿ ಬೀದಿಗಳಲ್ಲಿ ಬ್ರಿಟೀಷರ ಪೊಲೀಸರು ಮತ್ತು ಸೈನ್ಯದೊಂದಿಗೆ ಸಂಘರ್ಷ ನಡೆಸಿತು. 1908 ಜೂನ್ 29ರಂದು ಆರಂಭವಾದ ಸಂಘರ್ಷ ಜುಲೈ 24ವರೆಗೆ ತಿಲಕರು ಬಿಡುಗಡೆ ಯಾಗುವವರೆಗೆ ಮುಂದು ವರಿಯಿತು. "ಸ್ವರಾಜ್ಯ ನನ್ನ ಆ ಜನ್ಮ ಸಿದ್ಧ ಹಕ್ಕು" ಎಂದು ಘೋಷಿಸಿದ ತಿಲಕರಿಗಿಂತಲೂ ತಮ್ಮ ಉತ್ಪಾದನೆಯೇ ಮುಖ್ಯ ಎಂದು ಭಾವಿಸಿದ ಬಾಂಬೆಯ ಗಿರಣಿ ಮಾಲಿಕರ ಶಾಮೀಲುತನದ ವರ್ತನೆಗಳನ್ನು ಸುಕೋಮಲ್‌ಸೇನ್ ಬಯಲು ಮಾಡಿದ್ದಾರೆ. ಈ ಗಿರಣಿ ಮಾಲೀಕರು ಒಂದೆಡೆ ಈ ಸ್ವದೇಶಿ ಚಳುವಳಿಯಲ್ಲಿ ಕಾರ್ಮಿಕ ವರ್ಗವನ್ನು ಚಾಣಾಕ್ಷತೆ ಯಿಂದ ದುರುಪಯೋಗ ಮಾಡಿಕೊಳ್ಳುತ್ತಾ ಮತ್ತೊಂದೆಡೆ ಬ್ರಿಟಿಷ್ ಆಡಳಿತದ ಕೃಪಾ ಕಟಾಕ್ಷವನ್ನು ಗಳಿಸಲು ಪ್ರಯತ್ನಿಸುತ್ತಿದ್ದರು.

ಐತಿಹಾಸಿಕ ರಿನ್ ಬಂಡಾಯಕ್ಕೆ ಮುಂಬೈ ಕಾರ್ಮಿಕ ವರ್ಗದ ಬೃಹತ್ ಬೆಂಬಲ



1920ರಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಸ್ಥಾಪನೆ ಯಾಯಿತು. ಎಐಟಿಯುಸಿ ಸ್ಥಾಪನೆಯ ದಾರಿ ನಿರ್ಮಿಸಿ 'ಪಥದರ್ಶನ' ಕೊಟ್ಟ ಒಟ್ಟು 101 ಕಾರ್ಮಿಕ ಸಂಘಟನೆಗಳಲ್ಲಿ 14 ರೈಲ್ವೆ ಕಾರ್ಮಿಕರ ಸಂಘಟನೆಗಳಾಗಿದ್ದವು. ಪಂಜಾಬ್ ಪ್ರಾಂತದ ಲಾಲಾಲಜಪತ ರಾಯ್ ರವರು ಎಐಟಿಯುಸಿಯ ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾಗಿದ್ದು ಸಹಜವೇ ಆಗಿತ್ತು. ಅವರು ಪಂಜಾಬ್‌ನ ರೈಲ್ವೆ ಕಾರ್ಮಿಕ ಮುಖಂಡರಾಗಿದ್ದರು. ಈ 14 ರೈಲ್ವೆ ಕಾರ್ಮಿಕರ ಸಂಘಟನೆಗಳಲ್ಲಿ 70 ಸಾವಿರದಷ್ಟು ಸದಸ್ಯತ್ವವಿದ್ದ ಅತಿದೊಡ್ಡ ಸಂಘಟನೆ 'ನಾರ್ಥ್ ವೆಸ್ಟ್ ಫ್ರಂಟೀಯರ್ ರೈಲ್ವೆ'ಯದಾಗಿತ್ತು.

ತಮ್ಮ ಮೇಲಿನ ಅಮಾನವೀಯ ಶೋಷಣೆ ತಡೆಯಲಾಗದೆ ತೋಟ ಬಿಟ್ಟು ಪಲಾಯನ ಮಾಡುತ್ತಿದ್ದ ಬಂಗಾಳ ಮತ್ತು ಆಸ್ಸಾಂಗಳಲ್ಲಿನ ತೋಟ ಕಾರ್ಮಿಕರ ಬೆಂಬಲಾರ್ಥ ಬಂಗಾಳದ ರೈಲ್ವೆ ಕಾರ್ಮಿಕರು ಮತ್ತು ನಾವಿಕರು ನಡೆಸಿದ ಸೌಹಾರ್ದ ಕಾರ್ಯಾಚರಣೆಯ ಕುರಿತು ಇಎಂಎಸ್ ನಂಬೂದರಿಪಾಡ್‌ರವರು ತಮ್ಮ ಕೃತಿಯಲ್ಲಿ ಬರೆದು ಗೌರವಿಸಿದ್ದಾರೆ. ತೋಟ ಬಿಟ್ಟು ಓಡಿ ಹೋಗುತ್ತಿದ್ದ ಈ ಕಾರ್ಮಿಕರನ್ನು ಹಿಡಿದು ಬಡಿದು ವಾಪಸ್ ತರಲು ಸರ್ಕಾರ ನೇಮಿಸಿದ್ದ 'ಗೂರ್ಖಾ ಬೆಟಾಲಿಯನ್' ಈ ಕಾರ್ಮಿಕರ ಮೇಲೆ ನಡೆಸುತ್ತಿದ್ದ ಘೋರ ಧಾಳಿಗಳ ಕುರಿತೂ ಬರೆದಿದ್ದಾರೆ. ಕಾರ್ಮಿಕರು ರೈಲುಗಳು ಮತ್ತು ನದಿಗಳಲ್ಲಿ ಯಾಂತ್ರಿಕ ದೋಣಿಗಳ ಮೂಲಕ ಓಡಿ ಹೋಗುತ್ತಿದ್ದರು. ಈ 'ಗೂರ್ಖಾ ಬೆಟಾಲಿಯನ್' ಅಸಹಾಯಕ ಕಾರ್ಮಿಕರ ಮೇಲೆ ನಡೆಸುತ್ತಿದ್ದ ಭೀಕರ ಕ್ರೂರ ಹಿಂಸಾಚಾರಗಳನ್ನು ನೋಡಲಾಗದೆ ಈ ರೈಲ್ವೆ ಮತ್ತು ನಾವಿಕ ಕಾರ್ಮಿಕರು ತಾವು ನಡೆಸುವ ರೈಲು ಮತ್ತು ದೋಣಿಗಳಲ್ಲಿ ಸ್ಥಗಿತಗೊಳಿಸಿ ತೋಟ ಕಾರ್ಮಿಕರಿಗೆ ತಮ್ಮ ಬೆಂಬಲ ತೋರಿಸಿದರು. ಇದು ನಡೆದದ್ದು 1921ರಲ್ಲಿ ಗಾಂಧೀಜಿಯವರ ನೇತೃತ್ವದ ಅಸಹಕಾರ ಚಳುವಳಿಯ ಬಗೆಗೆ ಜನ ಜಾಗೃತಿ ಮೂಡುತ್ತಿದ್ದ ಸಂದರ್ಭದಲ್ಲಿ.

ಈಗ ಮಹಾರಾಷ್ಟ್ರದಲ್ಲಿರುವ ಸೊಲ್ಲಾಪುರದಲ್ಲಿ ಒಂದು ಸಂಘಟಿತ ಕಾರ್ಮಿಕ ವರ್ಗದ ಕಾರ್ಯಾಚರಣೆ ನಡೆಯಿತು. ಅಲ್ಲಿನ ಗಿರಣಿ ಕಾರ್ಮಿಕರು ದಂಗೆ ಎದ್ದು ಬ್ರಿಟೀಷ್ ಆಡಳಿತಗಾರರನ್ನು ಪಟ್ಟಣದಿಂದ ಹೊರಗಟ್ಟಿದರು. ಆ ಮೂಲಕ ಕೆಲವು ದಿನಗಳ ಕಾಲ

ಪಟ್ಟಣವನ್ನು ವಿದೇಶಿ ಆಡಳಿತಗಾರರ ನೊಗದಿಂದ ಮುಕ್ತಗೊಳಿಸಿದರು. ಮರಳಿ ಪಟ್ಟಣದಲ್ಲಿ ನಿಯಂತ್ರಣ ಸ್ಥಾಪಿಸಿದ ಬ್ರಿಟೀಷರು ಕಾರ್ಮಿಕರನ್ನು ಅತ್ಯಂತ ಕ್ರೂರವಾಗಿ ಹತ್ತಿಕ್ಕಿದರು. ನಾಲ್ವರು ಕಾರ್ಮಿಕರನ್ನು ನೇಣಿಗೇರಿಸಲಾಯಿತು. ಈ ಕಾರ್ಮಿಕರಿಗೆ ಗೌರವ ಪೂರ್ಣ ನಮನ ಸಲ್ಲಿಸಿರುವ ಇಎಂಎಸ್‌ರವರು ಚಿತ್ತಗಾಂಗ್‌ನಲ್ಲಿ ಶಸ್ತ್ರಗಳನ್ನು ಲೂಟಿ ಮಾಡಿದ ಸೂರ್ಯಸೇನ್ ಮತ್ತು ಪ್ರಯಂವದಾರವರ ಸಾಹಸದಂತೆ ಈ ಹೋರಾಟವು ವ್ಯಕ್ತಿಗತ ಸಾಹಸವಾಗದೆ, ಸೊಲ್ಲಾಪುರದ ಕಾರ್ಮಿಕವರ್ಗ ಇಲ್ಲಿ ಸಾಮೂಹಿಕ ಚಳುವಳಿ-ಕಾರ್ಯಾಚರಣೆ ನಡೆಸಿ ತನ್ನ ಸಾಮರ್ಥ್ಯ ಮತ್ತು ಶಕ್ತಿಯನ್ನು ಪ್ರದರ್ಶಿಸಿದೆ ಮತ್ತು ಕಾರ್ಮಿಕವರ್ಗ ಸ್ವತಂತ್ರ ಸಂಗ್ರಾಮದಲ್ಲಿ ತನ್ನ ಪಾತ್ರವೇನೆಂದು ತೋರಿಸಿದೆ ಎಂದಿದ್ದಾರೆ.



1937ರ ನಂತರದಲ್ಲಿ ಬಾಂಬೆಯ ಕಾರ್ಮಿಕರು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಿಂದ ಆಕರ್ಷಿತರಾದರು ಮತ್ತು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು. ಮೊರಾರ್ಜಿ ದೇಸಾಯಿಯವರು ಬಾಂಬೆ ಪ್ರಾಂತ್ಯದ ಮುಖ್ಯ ಮಂತ್ರಿಗಳಾದರು. ಆದರೆ ಸ್ವಾತಂತ್ರ್ಯ ಮತ್ತು ಪರಿಹಾರದ ಬದಲು ಹೊಸ ಆಡಳಿತಗಾರರು ದೇಶೀಯರೇ ಆದರೂ ಸಹ ಕಾರ್ಮಿಕರು ಲಾಠಿ, ಬೂಟು, ಬಂದೂಕುಗಳನ್ನು ಹಾಗೂ ಮುಷ್ಕರ ನಿಷೇಧಗಳನ್ನು ಎದುರಿಸ ಬೇಕಾಯಿತು. ದೇಶ ಸ್ವಾತಂತ್ರ್ಯ ಪಡೆಯುವ ಸುಮಾರು ಒಂದು ದಶಕಗಳಷ್ಟು ಮೊದಲೇ ಕಾರ್ಮಿಕ ವರ್ಗವು ನಮ್ಮವರೇ ಆದ ರಾಷ್ಟ್ರೀಯ ನಾಯಕರ ವಿದ್ರೋಹದ ರುಚಿ ನೋಡಬೇಕಾಯಿತು.

1946 ರಲ್ಲಿ ಸ್ವಾತಂತ್ರ್ಯ ಚಳುವಳಿಯ ಕೊನೆಯ ಹಂತದಲ್ಲಿ ಈ ಚಳುವಳಿಗೆ ಕಳಸವಿಟ್ಟಂತೆ ಕಾರ್ಮಿಕ ವರ್ಗದ ಹೋರಾಟಗಳು ಉತ್ತುಂಗಕ್ಕೇರಿದವು. ಭಾರತದ ಒಕ್ಕೂಟದಲ್ಲಿ ವಿಲೀನವಾಗಲು ಒಪ್ಪದೇ ಪ್ರತ್ಯೇಕವಾಗಲು ಪ್ರಯತ್ನಿಸುತ್ತಿದ್ದ ತಿರುವಾಂಕೂರಿನ ಆಡಳಿತಗಾರರ ವಿರುದ್ಧ ಅಲೆಪ್ಪಿ ಜಿಲ್ಲೆಯ ಕಾರ್ಮಿಕ ವರ್ಗ ಶಸಸ್ತ್ರ ಬಂಡಾಯವೆದ್ದಿತು.

ತಿರುವಾಂಕೂರು ಪ್ರಾಂತ್ಯದ ಅಲೆಪ್ಪಿಯ ತೆಂಗಿನ ನಾರು ಕಾರ್ಖಾನೆ ಕಾರ್ಮಿಕರು ದಂಗೆಯೆದ್ದಿದ್ದರು. ಕಾರ್ಮಿಕರು ಮತ್ತು ಅವರ ಗ್ರಾಮೀಣ ಸಂಬಂಧಿಗಳು ಸೇರಿ ಶಸಸ್ತ್ರ ಶಿಬಿರಗಳನ್ನು ಸಂಘಟಿಸಿದರು. ಭರ್ಜಿ, ಕೊಡಲಿ, ಮಚ್ಚು, ಚಾಕು, ಮರದಿಂದ ಮಾಡಿದ ಈಟಿ, ಕಲ್ಲು ಇತ್ಯಾದಿಗಳೊಂದಿಗೆ ಸಜ್ಜುಗೊಂಡ ಇವರು ಮೆಷಿನ್ ಗನ್‌ಗಳೊಂದಿಗೆ ಸಿದ್ಧವಾಗಿದ್ದ ಸರ್.ಸಿ.ಪಿ.ರಾಮಸ್ವಾಮಿ ಅಯ್ಯರ್‌ನ ಪೊಲೀಸರನ್ನು ಎದುರಿಸಿದರು. ನೂರಾರು ಸಂಖ್ಯೆಯಲ್ಲಿ ಅವರು ಪ್ರಾಣಾರ್ಪಣೆ ಮಾಡಿದರು. ಆದರೆ ತಿರುವಾಂಕೂರು ಭಾರತ ಒಕ್ಕೂಟದಿಂದ ಪ್ರತ್ಯೇಕ ಗೊಳ್ಳುವುದನ್ನು ಅವರು ವಿಫಲಗೊಳಿಸಿದರು.

1946ರಲ್ಲಿ ಪ್ರಸಿದ್ಧ ರಿನ್(RIN) ಬಂಡಾಯ ಬಾಂಬೆಯಲ್ಲಿ ಜರುಗಿತು. ಬಾಂಬೆಯ ಕಾರ್ಮಿಕರು ಬ್ರಿಟೀಷರ ವಿರುದ್ಧ ಬಂಡಾಯವೆದ್ದ ನಾವಿಕ ಪಡೆಯ ಸೈನಿಕರ ಬೆಂಬಲಾರ್ಥ ಕಾರ್ಯಾಚರಣೆಗಿಳಿದರು. ಹಲವಾರು ಕಾರ್ಮಿಕರು ಬ್ರಿಟೀಷ್ ಸೈನಿಕರಿಂದ ಹತ್ಯೆಗೆ ಗುರಿಯಾದರು. ಈ ಕಾರ್ಮಿಕ ವರ್ಗದ ತ್ಯಾಗ ಬಲಿದಾನವು ಎರಡನೇ ವಿಶ್ವಯುದ್ಧದ ನಂತರದ ಸನ್ನಿವೇಶದಲ್ಲಿ ಬ್ರಿಟೀಷರ ಭಾರತೀಯರಿಗೆ ಅಧಿಕಾರ ಹಸ್ತಾಂತರಿಸಲು ಕಾರಣ ವಾಯಿತು.

ಮೈಸೂರು ಪ್ರಾಂತ್ಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ನಡೆದ ಹೋರಾಟದಲ್ಲಿ ಕೋಲಾರ ಚಿನ್ನದ ಗಣಿ (ಕೆ.ಜಿ.ಎಫ್) ಪ್ರದೇಶದಲ್ಲಿ ಪೊಲೀಸರ ದಬ್ಬಾಳಿಕೆಯಲ್ಲಿ 1946ರಲ್ಲಿ ನಾಲ್ವರು ಕೆ.ಜಿ.ಎಫ್ ಕಾರ್ಮಿಕರು ಪ್ರಾಣ ತೆತ್ತರು. ಅಂತಿಮವಾಗಿ ಜವಾಬ್ದಾರಿ ಸರ್ಕಾರದ ಗುರಿಯನ್ನು ಸಾಧಿಸಲಾಯಿತು ಮತ್ತು ಈ ಚಳುವಳಿಯ ಮುಖಂಡ ಕೆ.ಸಿ.ರೆಡ್ಡಿಯವರು ರಾಜ್ಯದ ಪ್ರಥಮ ಮುಖ್ಯಮಂತ್ರಿಗಳಾದರು.

ಬೆಂಗಳೂರಿನಲ್ಲಿ 1942ರಲ್ಲಿ ಮಹಾತ್ಮ ಗಾಂಧಿಯವರ 'ಕ್ವಿಟ್ ಇಂಡಿಯಾ ಚಳುವಳಿ ಕರೆಗೆ

ಸ್ಪಂಧಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ ಗಿರಣಿ ಕಾರ್ಮಿಕರಲ್ಲಿ 4 ಮಂದಿ ಪೊಲೀಸರ ಗುಂಡಿಗೆ ಬಲಿಯಾದರು. ಈಗಲೂ ಅವರ ಹೆಸರಿನಲ್ಲಿ ಸ್ಮಾರಕವೊಂದು ಮೈಸೂರು ಬ್ಯಾಂಕ್ ಎದುರಿನ ವೃತ್ತದಲ್ಲಿರುವುದನ್ನು ನೋಡಬಹುದು.

1911ರಲ್ಲಿ ವೇಲ್ಸ್‌ನ ರಾಜಕುಮಾರ ಭೇಟಿ ನೀಡಿದಾಗ ಕಾರ್ಮಿಕವರ್ಗ ಎದ್ದು ನಿಂತು ಪ್ರತಿಭಟಿಸಿದ ಪರಿಯನ್ನು ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡ ಬೇಕಾಗಿದೆ. ಬಾಂಬೆಯ ಆಡಳಿತಗಾರರು ರಾಜಕುಮಾರ ರನ್ನು ಸ್ವಾಗತಿಸಲು ಸ್ವಾಗತ ಕಮಾನು 'ಗೇಟ್ ವೇ ಆಫ್ ಇಂಡಿಯಾ'ವನ್ನು ನಿರ್ಮಿಸಿದರು. ಆದರೆ ಕಾರ್ಮಿಕರಿಗೆ ಈ ಭೇಟಿಯು ಕುರಿತು ಯಾವ ಸಂಭ್ರಮವೂ ಇರಲಿಲ್ಲ. 1930ರಲ್ಲಿ ಸೈಮನ್ ಕಮಿಷನ್‌ನ್ನು ಬಹಿಷ್ಕರಿಸಿ ರಾಷ್ಟ್ರವ್ಯಾಪಿ ನಡೆದ ಪ್ರತಿಭಟನೆಗಳಲ್ಲೂ ಕಾರ್ಮಿಕರು ಮುಂಚೂಣಿಯಲ್ಲಿದ್ದರು.

1937ರ ನಂತರದಲ್ಲಿ ಬಾಂಬೆಯ ಕಾರ್ಮಿಕರು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಿಂದ ಆಕರ್ಷಿತರಾದರು ಮತ್ತು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರು. ಮೊರಾರ್ಜಿ ದೇಸಾಯಿಯವರು ಬಾಂಬೆ ಪ್ರಾಂತ್ಯದ ಮುಖ್ಯ ಮಂತ್ರಿಗಳಾದರು. ಆದರೆ ಸ್ವಾತಂತ್ರ್ಯ ಮತ್ತು ಪರಿಹಾರದ ಬದಲು ಹೊಸ ಆಡಳಿತಗಾರರು ದೇಶೀಯರೇ ಆದರೂ ಸಹ ಕಾರ್ಮಿಕರು ಲಾಠಿ, ಬೂಟು, ಬಂದೂಕುಗಳನ್ನು ಹಾಗೂ ಮುಷ್ಕರ ನಿಷೇಧಗಳನ್ನು ಎದುರಿಸಬೇಕಾಯಿತು.



ಜವಳಿ ಕಾರ್ಮಿಕರು ಈ ಚಳುವಳಿಗಳಲ್ಲಿ ಅತ್ಯಂತ ತೀವ್ರ ಮುಂಚೂಣಿ ಹೋರಾಟಗಾರರಾಗಿದ್ದರು. ಏಕೆಂದರೆ ಅವರೇ ಅಂದಿನ ಸಂದರ್ಭದ ಆಧುನಿಕ ಶ್ರಮಿಕ ವರ್ಗವಾಗಿದ್ದರು. 1908ರಿಂದ 1946–47ರವರೆಗಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗವು ಯಾವಾಗಲೂ ಮುಂಚೂಣಿಯಲ್ಲಿತ್ತು.

ಯಾವುದೇ ಒಬ್ಬ ಇತಿಹಾಸದ ಗಂಭೀರ ವಿದ್ಯಾರ್ಥಿ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ತ್ಯಾಗ ಬಲಿದಾನಗಳನ್ನು ಮತ್ತು ಚಾರಿತ್ರಿಕ ಸನ್ನಿವೇಶಕ್ಕೆ ಉಕ್ಕೊದಗಿದ ಕಾರ್ಮಿಕ ವರ್ಗದ ಭಾವನಾತ್ಮಕ ಸ್ಪಂದನವನ್ನು ದಾಖಲಿಸದೇ ಬಿಡುವುದು ಸಾಧ್ಯವಿಲ್ಲ. ಆದರೆ ಈ ರಾಷ್ಟ್ರೀಯ ಚಳುವಳಿಯ ನಾಯಕತ್ವ ವಹಿಸಿದ ರಾಷ್ಟ್ರೀಯ ಬಂಡವಾಳಗಾರರು ಮತ್ತು ಭೂಮಾಲಿಕ ವರ್ಗಗಳು ಕಾರ್ಮಿಕ ವರ್ಗದ ನಿರೀಕ್ಷೆ ಮತ್ತು ಆಶೋತ್ತರಗಳಿಗೆ ದ್ರೋಹ ಬಗೆದರೆನ್ನುವುದು ವಿಪರ್ಯಾಸ.

ಈ ಸಂದರ್ಭದಲ್ಲಿ ಎ.ಕೆ. ಗೋಪಾಲನ್‌ರ ಉದಾಹರಣೆ ಈ ಸ್ವಾತಂತ್ರ್ಯದ ಒಂದು ಕ್ರೂರ ವ್ಯಂಗ್ಯವಾಗಿದೆ. ಭಾರತದ ಸ್ವಾತಂತ್ರ್ಯ ಸಾಧನೆಗೆ ತನ್ನದೆಲ್ಲವನ್ನೂ ತ್ಯಾಗ ಮಾಡಿದ ಈ ಮಹೋನ್ನತ ನಾಯಕ ಭಾರತ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆಯಲ್ಲಿದ್ದಾಗ ಕಣ್ಣೂರಿನ ಜೈಲಿನಲ್ಲೇ ಬಂಧಿಯಾಗಿದ್ದರು. ಆದರೆ ಅವರು ಹತಾಶೆಗೊಳ್ಳಲಿಲ್ಲ. ಕಣ್ಣೂರಿನ ಜೈಲಿನಲ್ಲೇ ಅವರು ಹೇಗೋ ಒಂದು ರಾಷ್ಟ್ರೀಯ ಧ್ವಜವನ್ನು ಸಂಪಾದಿಸಿಕೊಂಡು ಇತರ ಖೈದಿಗಳೊಂದಿಗೆ ಸೇರಿ ಬಾವುಟವನ್ನು ಹಾರಿಸಿ ಜೈಲಿನಲ್ಲೇ ಮೆರವಣಿಗೆ, ಬಹಿರಂಗ ಸಭೆ ನಡೆಸಿ, ಹೊಸ ಆಡಳಿತಗಾರರು ತನಗೆ ಸ್ವಾತಂತ್ರ್ಯವನ್ನು ವಂಚಿಸಿದ್ದರೂ ಸಹ ಸಹಖೈದಿಗಳಿಗೆ ಸ್ವಾತಂತ್ರ್ಯದ ಕುರಿತು ತಿಳಿಸಿಕೊಟ್ಟರು.

ಕಾರ್ಮಿಕ ವರ್ಗ ತನ್ನನು ಬಂಧಿಸಿರುವ ಸಂಕೋಲೆಗಳನ್ನು ಕಡಿದೆಸೆದು ತನ್ನನ್ನು ತಾನು ವಿಮೋಚನೆಗೊಳಿಸಿಗೊಳ್ಳಬಲ್ಲುದು. ಮತ್ತು ಜನತೆಗೆ ನಿಜವಾದ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಮೌಲ್ಯಗಳನ್ನು ಖಾತ್ರಿಪಡಿಸಬಲ್ಲುದು.

○

ದೆಹಲಿ ಗಿರಣಿ ಕಾರ್ಮಿಕರು

ಮಾರ್ಗರೇಟ್ ಬರ್ಕ್‌ವೈಟ್



ಗಾಂಧೀಜಿಯು ಉಪವಾಸದಾದ್ಯಂತವೂ ಹಾಗೂ ಮತೀಯ ಐಕ್ಯತೆಗಾಗಿ ಅವರು ಸಾರಿದ ಯುದ್ಧದಾದ್ಯಂತವೂ ಒಂದು ಗುಂಪು ಮಾತ್ರ ಸದಾಕಾಲ ಗಾಂಧೀಜಿಯವರ ಬೆಂಬಲಕ್ಕಿತ್ತು. ಈ ಗುಂಪಿನ ಸದಸ್ಯರಿಗೆ ಮಹಾತ್ಮರ ಕೆಲವೊಂದು ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯ ಇತ್ತಾದರೂ ಅವರು ಗಾಂಧಿಯವರಿಗೆ ಸತತ ಒತ್ತಾಸೆಯಾಗಿ ನಿಂತರು. ಹೀಗೆ ಒತ್ತಾಸೆಯಾಗಿ ನಿಂತ ಗುಂಪೇ ಕಾರ್ಮಿಕ ವರ್ಗ.

ಮತೀಯ ಹೆಸರಿನಲ್ಲಿ ಅತ್ಯಂತ ಪೈಶಾಚಿಕ ಸ್ವರೂಪದ ಗಲಭೆ ಹೋರಾಟಗಳು ನಡೆದಾಗ ಆ ಮಹಾಸನ್ನಿಯಿಂದ ದೂರನಿಂತ ವರ್ಗವೆಂದರೆ ಕಾರ್ಮಿಕ ವರ್ಗ. ಹಿಂದೂ ಮುಸ್ಲಿಂ ದ್ವೇಷದ ಸೋಂಕು ಇವರಿಗೆ ತಟ್ಟಲೇ ಇಲ್ಲ ಎನ್ನಬಹುದು. ಇದು ಸಹಜವೇ ಆಗಿತ್ತು. ಯಾಕೆಂದರೆ ಮಾಲೀಕರು ಮತ್ತು ಕಾರ್ಮಿಕ ಸಂಬಂಧದ ಮೇಲೆ ಊಳಿಗಮಾನ್ಯ ಪದ್ಧತಿಯ ಕರಾಳ ನೆರಳು ಇನ್ನೂ ಹಾಗೇ ಉಳಿದಿದ್ದ ಸಂದರ್ಭದಲ್ಲಿ ಕಾರ್ಮಿಕ ವರ್ಗವೂ ಆ ಸಂಬಂಧವಾಗಿ ಮಾಡಬೇಕಾಗಿದ್ದ ಹೋರಾಟವೇ ಸಾಕಷ್ಟಿತ್ತು. ಕಾರ್ಮಿಕ ಸಂಘಟನೆಯನ್ನು ದುರ್ಬಲಗೊಳಿಸುವುದಕ್ಕೆ ಅಥವಾ ಅಲ್ಲಿ ಮುಷ್ಕರವೇಳುವಂತೆ ಮಾಡುವುದಕ್ಕೆ ಮತೀಯ ಗಲಭೆಗಳನ್ನು ಬಳಸಿಕೊಂಡ ಸಂದರ್ಭಗಳನ್ನು ಅವರು ಕಂಡಿದ್ದರು. ಹೀಗಾಗಿ ಗಾಂಧೀಜಿಯವರ ಉಪವಾಸ ಸಂದರ್ಭದಲ್ಲಿ ಬಿರ್ಲಾ ಗೇಟುಗಳೊಳಗೆ ಪ್ರವೇಶಿಸಿದ ಶಾಂತಿಸಂದೇಶದ ಮೆರವಣಿಗೆ ಗಳಲ್ಲಿ ಕಾರ್ಮಿಕ ಸಂಘಟನೆ ಗಳ ಮೆರವಣಿಗೆಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಬಸ್ಸು ಮತ್ತು ಟ್ರಾಮ್‌ಕಾರು ಆಪರೇಟರುಗಳು, ಲೋಕೋಮೋಟಿವ್‌ಗಳ ಅನುಪಾಲನಾ ಕಾರ್ಮಿಕರು, ಅಚ್ಚುಮೊಳೆ ಜೋಡಿಸುವವರು, ಸರ್ಕಾರಿ ಗುಮಾಸ್ತರು ..... ಹೀಗೆ ಅನೇಕ ಸಂಘಟನೆಗಳವರು ತಮ್ಮ ತಮ್ಮ ಬ್ಯಾನರುಗಳನ್ನು ಹಿಡಿದುಕೊಂಡು ಬಂದಿದ್ದರು. ಎಲ್ಲ ಕಾರ್ಮಿಕ ಸಂಘಟನೆಗಳವರೂ ಶಾಂತಿ ಪಾಲಿಸುತ್ತೇವೆ ಎಂಬ ಪ್ರಮಾಣ ವಚನದೊಂದಿಗೆ ತಮ್ಮ ನಿಯೋಗಗಳನ್ನು ಕಳಿಸಿದ್ದರು. ಗಾಂಧೀಜಿಯವರ ಜೀವವನ್ನು ಉಳಿಸಿಕೊಳ್ಳಬೇಕೆಂಬ ಮನವಿಯನ್ನು ಕಳಿಸಿದ್ದರು. ಆದರೆ ಇವುಗಳಲ್ಲಿ ಅಗತ್ಯವಾಗಿ ಇರಲೇಬೇಕಾದ ಒಂದು ಸಂಘಟನೆ ಮಾತ್ರ ಇರಲಿಲ್ಲ. ಅದರ ಗೈರುಹಾಜರಿ ಎದ್ದು ಕಾಣುತ್ತಿತ್ತು. ಹೀಗೆ ಗೈರುಹಾಜರಾಗಿದ್ದ ಸಂಘಟನೆ ಯಾವುದೆಂದರೆ ಎಲ್ಲವುಗಳಿಗಿಂತ ಬಹು ದೊಡ್ಡದಾದ ಜವಳಿ ಕಾರ್ಮಿಕರದು. ಜವಳಿ ಉದ್ಯಮವು ದೆಹಲಿಯಲ್ಲಿ ಮಾತ್ರವಲ್ಲ. ಇಡೀ ದೇಶದಲ್ಲಿ ಬಹು ದೊಡ್ಡ ಉದ್ಯಮವೆನಿಸಿಕೊಂಡಿತ್ತು. ಮತ್ತು ಭಾರತದ ಅತಿ ದೊಡ್ಡ ಜವಳಿ ಗಿರಣಿಯ ಮಾಲೀಕರು ಶ್ರೀ ಬಿರ್ಲಾ ಉಪವಾಸ ಆರಂಭವಾದ ನಂತರ ಕೆಲವೊಂದು ನೇಕಾರರು ವೈಯಕ್ತಿಕವಾಗಿ ಬಿರ್ಲಾ ಭವನದೊಳಗೆ ಬಂದಿದ್ದರು. ಅದರೆ ಇಂತಹ ಒಂದು ಅತಿದೊಡ್ಡ ಸಂಘಟನೆಯ ಸಂಘಟಿತ ರೂಪದ ಮೆರವಣಿಗೆ ಬಿರ್ಲಾ ಗೇಟಿನೊಳಗೆ ಬರಲೇ ಇಲ್ಲ.

ಇದು ನನಗೆ ಬಹಳ ಕುತೂಹಲಕಾರಿಯಾಗಿ ಕಂಡಿತು. ಉಪವಾಸದ ಭರಾಟೆ ಎಲ್ಲಾ ಶಾಂತವಾದ ನಂತರ ಒಂದು ದಿನ ಹಳೇ ದೆಹಲಿಯ ದೂರದ ಮೂಲೆಯಲ್ಲಿರುವ ಗಿರಣಿ ಜಿಲ್ಲೆಗೆ ಹೋದೆ. ದೆಹಲಿ, ಹೇಗೆಹೇಗೋ ಚಾಚಿಕೊಂಡಿರುವ ಬಹುದೊಡ್ಡ ನಗರ. ಅದು ವಾಸ್ತವವಾಗಿ ಒಟ್ಟು ಎಂಟು ನಗರಗಳು ಸೇರಿ ಆದ ಒಂದು ಸಂಯುಕ್ತ ನಗರ. ಇದರಲ್ಲಿ ಏಳು ನಗರಗಳು ಹಳೆಯವು. ಒಂದು ಹೊಸದು. ಹೊಸದೆಹಲಿಯಿಂದ ದೂರದ ಕಾರ್ಖಾನೆ ಸ್ಥಳಗಳಲ್ಲಿ ಭಯಾನಕ ರಸ್ತೆಗಳು ಇಕ್ಕಟ್ಟಿನ ಓಣಿಗಳನ್ನು ನೋಡುತ್ತಿದ್ದಂತೆ ದೆಹಲಿಯ ಕಣ್ಣುಕೋರೈಸುವ ಆಧುನಿಕ ಸರ್ಕಾರಿ ಕಟ್ಟಡಗಳು, ಬಹು ಅಂತಸ್ತುಗಳ ಹೋಟೆಲು ಗಳು, ರಾಜ ಮಹರಾಜರುಗಳ ಭವ್ಯ ಗುಮ್ಮಟದ ಅರಮನೆಗಳು ಮರತೇಹೋಗುತ್ತವೆ.

ಬಿರ್ಲಾ ಮಾಲೀಕತ್ವದ ಬಹುದೊಡ್ಡ ಗಿರಣಿಗಳೆಲ್ಲ ಇರುವುದು ಶಾಬ್ಜಿ ಮಂಡಿಯಲ್ಲಿ. ಅಲ್ಲಿನ ಪೇಟೆ ಪ್ರದೇಶದ ಅಂಕುಡೊಂಕಿನ ಇಕ್ಕಟ್ಟಿನ ರಸ್ತೆಗಳಲ್ಲಿ ಟ್ರಾಮ್ ಕಾರುಗಳು, ಬಸ್ಸುಗಳು, ಎತ್ತಿನ ಬಂಡಿಗಳು, ಕುದುರೆಗಾಡಿಗಳು ಒಂದನ್ನೊಂದು ಉಜ್ಜಿಕೊಂಡೇ ಹೋಗಬೇಕು. ಕಾರ್ಖಾನೆ, ಅಂಗಡಿ, ಉಪಾಹಾರದ ಸ್ಥಳಗಳ ನಡುವೆ

ಎಲ್ಲೆಲ್ಲಿ ಜಾಗವಿದೆಯೋ ಅಲ್ಲೆಲ್ಲ ಉಸಿರುಕಟ್ಟಿದಂತೆ ಸಿಕ್ಕಿ ಹಾಕಿಕೊಂಡಿರುವ ಕಾರ್ಮಿಕರ ವಸತಿಗಳು.

ಇಂತಹ ಒಂದು ವಸತಿ ಸ್ಥಳಕ್ಕೆ ನಾನು ಹೋದೆ. ನನ್ನ ಅದೃಷ್ಟಕ್ಕೆ ಇಂಗ್ಲೀಷ್ ಅರ್ಥವಾಗುವ ಯಾರಾದರೊಬ್ಬ ವ್ಯಕ್ತಿ ಸಿಗಬಹುದೇ ಎಂದು ನಿರೀಕ್ಷಿಸುತ್ತ, ಸಂದಿಗೊಂದಿಗಳನ್ನು ನುಗ್ಗಿಕೊಂಡು ಹೋಗುತ್ತಾ ಸಣ್ಣಸಣ್ಣ ಬಿಲಗಳಂತಹ ಕೋಣೆಗಳಿರುವ ಜಾಗಕ್ಕೆ ಕಾಲಿಟ್ಟೆ. ಇಂತಹ ಸಾಲುಸಾಲು ಮನೆಗಳಿರುವುದನ್ನು ಬಸ್ತಿ ಎನ್ನುತ್ತಾರೆ. ಅಲ್ಲಿ ಒಂದು ಕಡೆ ನೀರಿನ ನಲ್ಲಿ, ಅದರ ಪಕ್ಕದ ಮಣ್ಣುದಿಬ್ಬದ ಮೇಲೆ ಹಲವು ಮಂದಿ ಗಂಡಸರು, ಹೆಂಗಸರು, ಮಕ್ಕಳು ನಿಂತೋ ಕುಳಿತೋ ಇದ್ದರು.

ನಾನು ಆ ಜಾಗಕ್ಕೆ ಕಾಲಿಟ್ಟಕೂಡಲೇ ನೂರಾರು ಮಂದಿ ನನ್ನನ್ನು ಪ್ರಶ್ನಾರ್ಥಕವಾಗಿ ಸುತ್ತುವರೆದರು. ಅವರು ನನ್ನನ್ನು ನಾನು ಅವರನ್ನು ಕುತೂಹಲದಿಂದ ನೋಡುತ್ತಾ ನಿಂತೆವು. ಇವರು ಅದೇ ಜನ, ಜಗತ್ತಿನ ಯಾವುದೇ ಊರಿನ ಗಿರಣಿ ಪ್ರದೇಶಗಳಲ್ಲಿ ಕಾಣುವಂತಹ ಬಡಕಲು ದೇಹ, ಉಬ್ಬಿದ ನರಗಳು, ಕುಶಲಕೈಗಳು, ಕಾತುರ ನಿರೀಕ್ಷೆ ತುಂಬಿದ ಕಣ್ಣಿನ ಚುರುಕ ಜನ. ಇವರೆಲ್ಲ ಇವರಿಗೇ ವಿಶಿಷ್ಟವಾದ ಸೀರೆ, ಧೋತಿಗಳಲ್ಲಿದ್ದರು ಮತ್ತು ಸಾಮಾನ್ಯವಾಗಿ ಗಿರಣಿ ಕೆಲಸದಲ್ಲಿ ಬಿಳುಚಿಕೊಂಡ ಬಣ್ಣವನ್ನು ಮರೆಮಾಚುವ ಕಪ್ಪು ಚರ್ಮದವರು ಎಂಬುದೊಂದು ವ್ಯತ್ಯಾಸ ಬಿಟ್ಟರೆ ನಾನು ಫೋಟೋ ತೆಗೆಯಲು ಭೇಟಿ ನೀಡಿದ ಯುರೋಪಿನ ನೂರಾರು ಕಾರ್ಖಾನೆ ಪ್ರದೇಶಗಳಲ್ಲಿನ ಯಾವುದೋ ಒಂದು ಪ್ರದೇಶದಲ್ಲಿದ್ದೇನೆ ಅಂತಲೆ ಅನ್ನಿಸುತ್ತಿತ್ತು. ನನ್ನ ಬಗ್ಗೆ ಇವರಿಗಿದ್ದ ಅಚ್ಚರಿ ತಣ್ಣಗಾಗುತ್ತಿದ್ದಂತೆ ಅವರಿಗೂ ನನಗೂ ಇದ್ದ ಅಡೆತಡೆ ಮಾಯವಾಯಿತು. ನಮ್ಮನ್ನು ನೋಡುವುದಕ್ಕೆ ಯಾರು ಬರುತ್ತಾರೆ ಎಂದು ಒಬ್ಬ ವ್ಯಕ್ತಿ ಹೇಳಿದ. ಹಾಗೆ ಹೇಳಿದ ವ್ಯಕ್ತಿಯ ಕೆಲಸ ಸೀರೆಯ ಅಂಚುಗಳಿಗಾಗಿ ಮಗ್ಗಗಳಲ್ಲಿ ಬಣ್ಣದ ದಾರಗಳನ್ನು ಅಣಿಗೊಳಿಸುವುದು. ಸಣ್ಣ ನೀಲಿ ಅಥವಾ ಕೆಂಪು ನೇಯ್ಗೆ ಅಂಚಿನ ಬಿಳಿಯ ಸೀರೆಗಳು ಇಲ್ಲಿ ಹತ್ತಿರವೇ ಇದ್ದ ಒಂದಾನೊಂದು ಬಿರ್ಲಾ ಗಿರಣಿಯ ಮುಖ್ಯ ಉತ್ಪಾದನೆ. ಮಾತಾಡಿದ ವ್ಯಕ್ತಿಯ ಹೆಸರು ರಾಮದಾಸ್. ಅವನು ಚಿಕ್ಕ ಹುಡುಗನಾಗಿದ್ದಾಗ ಯಾವುದೋ ಇಂಗ್ಲಿಷ್ ಕುಟುಂಬದಲ್ಲಿ ಸೇವಕನಾಗಿದ್ದನಂತೆ. ಹೀಗಾಗಿ ಅವನಿಗೆ ಅಲ್ಪಸ್ವಲ್ಪ ಇಂಗ್ಲೀಷ್ ಅರ್ಥವಾಗುತ್ತಿತ್ತು. ರಾಮದಾಸ್‌ನ ಭಾಷಾಂತರದ ನೆರವಿನಿಂದ ನನ್ನ ಹಾಗೂ ಗಿರಣಿ ಕಾರ್ಮಿಕರ ಸಂಭಾಷಣೆ ಮುಂದಕ್ಕೆ ಬೆಳೆಯಿತು.

> "ಗಾಂಧೀಜೀ ಬಹುದೊಡ್ಡ ಮನುಷ್ಯನಿರ ಬಹುದು. ಆದರೆ ನಮಗಾಗಿ ಏನೂ ಮಾಡಲಿಲ್ಲ. ಅವರು ಬಿರ್ಲಾ ಋಣದಲ್ಲಿದ್ದಾರೆ. ಅವನ ಅನ್ನ ತಿನ್ನುತ್ತಿದ್ದಾರೆ. ಹೀಗಿದ್ದಾಗ ನಮಗೆ ಏನು ಸಹಾಯ ಮಾಡುತ್ತಾರೆ? ಇಲ್ಲಿ ಗುಂಡು ಹಾರಿಸಿದಾಗಲೂ ಅವರು ಸುಮ್ಮನಿದ್ದರು."
>
> **– ಒಬ್ಬ ಕಾರ್ಮಿಕ**

ನಾನು ಇಲ್ಲಿಗೆ ಯಾಕೆ ಬಂದೆ ಎನ್ನುವುದನ್ನು ಅವರಿಗೆ ಹೇಳಬೇಕಿರಲಿಲ್ಲ. ಯಾಕೆಂದರೆ ಗಾಂಧಿಯವರ ಇತ್ತೀಚಿನ ಉಪವಾಸದ ವಿಷಯ ಎಲ್ಲರ ಬಾಯಲ್ಲಿಯೂ ಇದ್ದ ಮಾತು. ಗಾಂಧಿಯ ಹೆಸರು ಪ್ರಸ್ತಾಪಿತವಾಗುತ್ತಿದ್ದಂತೆ ರಾಮದಾಸ್ ಭಾಷಾಂತರಿಸುವುದಕ್ಕೂ ಮೊದಲೇ ಎಲ್ಲರೂ ಅವರ ಅಭಿಪ್ರಾಯ ಹೇಳತೊಡಗಿದರು. ''ಗಾಂಧೀಜೀ ಈ ದೇಶಕ್ಕೆ ಒಳ್ಳೆಯವರಿರಬಹುದು. ಆದರೆ ನಮಗಲ್ಲ. ಯಾಕೆಂದರೆ ಅವರು ಬಿರ್ಲಾ ಮನೆಯಲ್ಲಿದ್ದಾರೆ." ಇನ್ನೊಬ್ಬ ಹೇಳಿದ ''ಗಾಂಧೀಜೀ ಬಹುದೊಡ್ಡ ಮನುಷ್ಯನಿರಬಹುದು. ಆದರೆ ನಮಗಾಗಿ ಏನೂ ಮಾಡಲಿಲ್ಲ. ಅವರು ಬಿರ್ಲಾ ಋಣದಲ್ಲಿದ್ದಾರೆ. ಅವನ ಅನ್ನ ತಿನ್ನುತ್ತಿದ್ದಾರೆ. ಹೀಗಿದ್ದಾಗ ನಮಗೆ ಏನು ಸಹಾಯ ಮಾಡುತ್ತಾರೆ? ಇಲ್ಲಿ ಗುಂಡು ಹಾರಿಸಿದಾಗಲೂ ಅವರು ಸುಮ್ಮನಿದ್ದರು.'

(ನಾನು ಈ ಬಗ್ಗೆ ವಿವರವಾಗಿ ವಿಚಾರಿಸೋಣ ಎಂದುಕೊಂಡೆ. ಅಷ್ಟರಲ್ಲಿ ಮಾತು ಮುಂದಕ್ಕೆ ಹೋಯಿತು). "ಗಾಂಧೀಜಿ ಬಿರ್ಲಾಮನೆಯಲ್ಲಿದ್ದಾರೆ. ಆತನಿಗೆ ಅವರಿಂದ ಏನೋ ಅನುಕೂಲ ಆಗುತ್ತಿರಬೇಕು''. ''ಕಾರ್ಮಿಕರಿಗಂತೂ ಬಿರ್ಲಾ ಒಳ್ಳೆಯವನಲ್ಲ. ಆದರೆ ಹೊರ ಜಗತ್ತಿಗೆ ಬಹುದೊಡ್ಡ ಮನುಷ್ಯರಂತೆ ತೋರಿಸಿಕೊಳ್ಳುತ್ತಾನೆ. ತನ್ನ ದೊಡ್ಡಸ್ತಿಕೆ ತೋರಿಸುವುದಕ್ಕಾಗಿ ದೇವಸ್ಥಾನಗಳನ್ನು ಕಟ್ಟಿಸುತ್ತಾನೆ''.

ಬಿರ್ಲಾ ನಿರ್ಮಾಣದ ದೇವಸ್ಥಾನಗಳನ್ನು ನೋಡಿದವರು ಅವುಗಳ ಸೌಂದರ್ಯವನ್ನು ಮರೆಯುವಂತಿಲ್ಲ. ನವದೆಹಲಿಯಲ್ಲಿ ಬಿರ್ಲಾಗಳು ದೇವಸ್ಥಾನ ಕಟ್ಟಿಸುವುದನ್ನು ಬಹುದೊಡ್ಡ ಧಾರ್ಮಿಕ ಕಾರ್ಯ ಎಂದು ಜನ ಭಾವಿಸಿದ್ದರು. ಈ ಜವಳಿ ಜಗತ್ತಿನ ಮಹಾರಾಜನ ಹಿರಿಯ ಸೋದರ ತುಂಬಾ

ಆಸ್ತಿಕನಾದ ಹಿಂದೂವಾಗಿದ್ದು ಆತ ಇಷ್ಟು ಭವ್ಯವಿಲ್ಲದಿದ್ದರೂ ಇನ್ನು ಅನೇಕ ಕಡೆ ಇಂಥದೇ ದೇವಾಲಯಗಳನ್ನು ನಿರ್ಮಿಸಿದ್ದರು.

"ಆ ದೇವಸ್ಥಾನವನ್ನು ಕಟ್ಟಿದ್ದು ನಮ್ಮ ಬೆವರಿನಿಂದ" ಎಂದು ಆ ಜನ ಹೇಳಿದರು, ಮಹಾಯುದ್ಧದ ವರ್ಷಗಳಲ್ಲಿ ಅಧಿಕೃತ ಸರ್ಕಾರಿ ಲೆಕ್ಕಪರಿಶೋಧನೆಗಳ ಪ್ರಕಾರ ಜವಳಿ ಕೈಗಾರಿಕೆಗೆ ಶೇಕಡ 500 ರಿಂದ 700 ರಷ್ಟು ಲಾಭ ಗಳಿಕೆಯಾಗಿತ್ತು. "ನಮಗೇಕೆ ಬೇಕು ಈ ದೇವಸ್ಥಾನಗಳು. ಬೆವರು ಸುರಿಸಿ ಕೆಲಸ ಮಾಡುವ ಜನಕ್ಕೆ ದೇವಸ್ಥಾನ ಕಟ್ಟಿಕೊಂಡು ಏನಾಗಬೇಕು?" "ಅದೇ ಮರ, ಕಾಂಕ್ರೀಟ್ ಹಾಕಿ ನಮಗೆ ಸ್ವಲ್ಪವಾದರೂ ಚೆನ್ನಾಗಿರುವ ಮನೆಗಳನ್ನು ಕಟ್ಟಿಕೊಡಬಹುದಲ್ಲ" "ಇನ್ನೂರೈವತ್ತು ಜನಕ್ಕೆ ಒಂದೇ ಕಕ್ಕಸು" ಎಂದು ಅವರು ಬಾಗಿಲೇ ಇಲ್ಲದ ಒಂದು ಹಳೆಯ ಕೋಣೆಯತ್ತ ಬೆರಳು ಮಾಡಿ ತೋರಿಸಿದರು. ಅಲ್ಲಿ ಗೋಪ್ಯತೆಗೆ ಅವಕಾಶವೇ ಇರಲಿಲ್ಲ. ಹೆಂಗಸರೂ ಅದನ್ನೇ ಬಳಸಬೇಕಿತ್ತು. ಧರ್ಮಕ್ಕೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ಮಾನಕ್ಕೆ ಕೊಡುವ ಹಿಂದೂ ಹೆಂಗಸರ ಸ್ಥಿತಿ ಹೇಗಿರಬಹುದು? ಅಲ್ಲಿ ಒಂದೇ ಒಂದು ನಲ್ಲಿ ಇತ್ತು. ಅರವತ್ತು ಮನೆಗಳಿಗೆ ಅದೊಂದೇ ನಲ್ಲಿ. ಸ್ನಾನಕ್ಕೆ ಎಲ್ಲಿಯೂ ಪ್ರತ್ಯೇಕ ಜಾಗವಿರಲಿಲ್ಲ. ದಿನವೂ ಸ್ನಾನ ಎಂಬುದೂ ಕೂಡ ಹಿಂದೂಗಳಿಗೆ ಒಂದು ಧಾರ್ಮಿಕ ವಿಧಿ. ಶುಚಿತ್ವಕ್ಕೂ ದೈವತ್ವಕ್ಕೂ ಇಷ್ಟೊಂದು ನಿಕಟ ಸಂಬಂಧವಿರುವಾಗ ಕೇವಲ ಒಂದು ನಲ್ಲಿಯಲ್ಲಿ ಇಷ್ಟು ಜನರ ಅಗತ್ಯ ಪೂರೈಸುವುದು ಹೇಗೆ? ಆದ್ದರಿಂದಲೇ ಅವರಿಗೆ ದೇವಸ್ಥಾನದಲ್ಲಿ ಕೊಳವಿರುವುದಕ್ಕಿಂತ ತಮಗೆ ಉತ್ತಮ ನಲ್ಲಿ, ಸರಿಯಾದ ನೀರಿನ ವ್ಯವಸ್ಥೆ ಇರಬೇಕಿತ್ತು ಅನ್ನಿಸಿದ್ದು ಸಹಜವೇ ಆಗಿತ್ತು. ಬಿರ್ಲಾ ದೇವಾಲಯಗಳಲ್ಲಿ ಎಲ್ಲರಿಗೂ ಪ್ರವೇಶ ನೀಡಿರುವ ಬಗ್ಗೆ ಅವರ ಪ್ರಕಟಣೆಯ ಪತ್ರಿಕೆಗಳು ಬಹಳ ಪ್ರಚಾರ ನೀಡುತ್ತಿದ್ದವು. ಸವರ್ಣೀಯ ಹಿಂದೂಗಳ ಜೊತೆಗೆ ಅಸ್ಪೃಶ್ಯರಿಗೂ ದೇವಸ್ಥಾನದ ಪ್ರವೇಶ ನೀಡುವುದು ಒಳ್ಳೆಯದೇ ಆಯಿತು ಎಂದು ರಾಮದಾಸ್ ಹೇಳಿದ. ಅವನು ಸವರ್ಣೀಯ ನಾಗಿದ್ದರೂ ಈ ಮಾತು ಹೇಳಿದ್ದ. ಆದರೆ ಅನೇಕ ಸವರ್ಣೀಯರು, ಅಸ್ಪೃಶ್ಯರು ಪ್ರವೇಶಿಸಿದಂತಹ ದೇವಾಲಯಗಳನ್ನು ಬಹಿಷ್ಕರಿಸಿದರು. ಸರಿಯಾದ ತಿಳುವಳಿಕೆಯ ಜನ ಈ ಭೇದಭಾವದ ಆಚರಣೆಯನ್ನು ವಿರೋಧಿಸಿದ್ದರು. ದೇವಸ್ಥಾನಕ್ಕೆ ಹೋದ ಮೇಲೆ ಎಲ್ಲರೂ ಭಕ್ತರೇ ತಾನೆ! ಇದು ರಾಮದಾಸನ ವಿಚಾರಧಾರೆ. ಅದೇ ರೀತಿ ಕಾರ್ಖಾನೆಯಲ್ಲಿ ಕೆಲಸ ಮಾಡುವವರೆಲ್ಲ ಕಾರ್ಮಿಕರೇ ತಾನೆ? ಅಸ್ಪೃಶ್ಯರನ್ನು ಕುರಿತು ಬಿರ್ಲಾ ಜನ ಅಷ್ಟೊಂದು ಕೊಚ್ಚಿಕೊಳ್ಳುತ್ತಿದ್ದರು. ಗಾಂಧೀಜಿ ತಮ್ಮ ಪತ್ರಿಕೆಗೆ 'ಹರಿಜನ್' ಎಂದು ಹೆಸರಿಟ್ಟಿದ್ದರು. ಗಾಂಧೀಜಿಯ ಹೆಸರು ಹೇಳುವ ಜನ ಇಲ್ಲಿಗೆ ಬಂದು ಬಿರ್ಲಾ ಅವರದೇ ಸ್ವಂತ ಗಿರಣಿಯಲ್ಲಿ ಹರಿಜನರು ಯಾವ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ನೋಡಬಾರದೇ? ನಾನು ಈಗ ನೋಡಿದ ಬಸ್ತಿಯಲ್ಲಿನ ನೆಲಕ್ಕೆ ಗಾರೆ ಇತ್ತು. ನೀರು ಹರಿದು ಹೋಗಲು ತೆರೆದ ಚರಂಡಿಗಳಾದರೂ ಇದ್ದವು. ಆದರೆ ಅಸ್ಪೃಶ್ಯರ ಮನೆಗಳಲ್ಲಿ ಮಣ್ಣಿನ ನೆಲ. ಕೊಳಕು ನೀರು ಹರಿದು ಮನೆಯ ಮುಂದೆ ನಿಂತಿರುತ್ತಿತ್ತು. ಅವರು ವಾಸಿಸುತ್ತಿದ್ದ 'ಚಾಲ್' ಗಳಿಗೆ ಹೋಲಿಸಿದರೆ ಬಸ್ತಿಗಳೇ ಅರಮನೆಗಳು. ಕೆಲವು ಬಸ್ತಿಗಳುಮಾತ್ರ ಉಳಿದ ಬಸ್ತಿಗಳಿಗಿಂತ ಉತ್ತಮ ಸ್ಥಿತಿಯಲ್ಲಿದ್ದವು. ಆದರೆ ಅವು ಕಾರ್ಮಿಕರಿಗಾಗಿ ಇರಲಿಲ್ಲ. ಕಾರ್ಮಿಕರನ್ನು ಕೆಲಸಕ್ಕೆ ತರುವ, ಬೇಡದಿದ್ದಾಗ ಓಡಿಸುವ ಮಧ್ಯವರ್ತಿಗಳಿಗೆ ಅವು ಮೀಸಲು. ಕಾರ್ಖಾನೆ ನಡೆಸುತ್ತಿದ್ದ ಸ್ಕೂಲುಗಳು ಹಾಗೂ ಹಾಲಿನ ವಿತರಣೆ ಮೊದಲಾದ ಸೌಲಭ್ಯಗಳೆಲ್ಲ ಸಿಗುತ್ತಿದ್ದುದು ಕಾರ್ಖಾನೆಯ ಇಂತಹ ನಿಷ್ಠಾವಂತ ಸೇವಕರಿಗೆ ಹಾಗೂ ಅವರ ಮಕ್ಕಳಿಗೆ ಮಾತ್ರ.

ಇಲ್ಲಿದ್ದ ಕಾರ್ಮಿಕರ ಪಾಲಿಗೆ, ಕೆಲಸಕ್ಕೆ ಸೇರಿಸಿಕೊಳ್ಳುವ ಹಾಗೂ ಕೆಲಸದಿಂದ ಓಡಿಸುವ ವ್ಯವಸ್ಥೆ ಒಂದು ದುಃಸ್ವಪ್ನ, ಯಾವಾಗ ತೆಗೆದುಹಾಕುತ್ತಾರೋ ಎಂಬ ಭಯದ ಕತ್ತಿ ಸದಾ ತೂಗುತ್ತಲೇ ಇರುತ್ತಿತ್ತು. ಒಂದೇ ಗಿರಣಿಯಲ್ಲಿ 15 ರಿಂದ 25 ವರ್ಷಗಳಷ್ಟು ಕಾಲ ಕೆಲಸ ಮಾಡಿದವನೂ ಕೂಡ ಯಾವುದೇ ಕ್ಷಣದಲ್ಲಿ ಕೆಲಸ ಕಳೆದುಕೊಳ್ಳಬಹುದಿತ್ತು. ಬಿಟ್ಟು ಹೋಗುವಾಗ ಅವರಿಗೆ ಕೊಡಬೇಕಾದ ಹಣ ದಲ್ಲಾಳಿಗಳ ಪಾಲಾಗುತ್ತಿತ್ತು. ಗಿರಣಿಯಲ್ಲಿ ಹಿಂದಿನವಾರ ನಡೆದ ಕಾರ್ಮಿಕರ ಹಾಗೂ ಮ್ಯಾನೇಜರ್‌ಗಳ ದೊಡ್ಡ ಸಭೆಯಲ್ಲಿ ಈ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸಬೇಕು ಎಂದು ಅವರು ಅಂದುಕೊಂಡಿದ್ದರು. ಆದರೆ ಯಾವಾಗಲೂ ಆಗುವಂತೆ 'ಕಂಪನಿಯ ಜನ' ಮಾತ್ರ ಮೈಕಿನ ಬಳಿ ಕೂತಿದ್ದರು. ಯಾರಾದರೂ ಮಾತಾಡಲು ಎದ್ದು ನಿಂತರೆ ಅವನನ್ನು ಕಮ್ಯುನಿಸ್ಟ್ ಎಂದು ಕರೆದು ಕೆಲಸದಿಂದ ಓಡಿಸಲಾಗುತ್ತಿತ್ತು.

ಈಗ ಹೊಸದೊಂದು ಬೆಳವಣಿಗೆ ನಡೆದಿತ್ತು. ಕಾರ್ಮಿಕ ಸಂಘಟನೆಗಳನ್ನು ಇನ್ನೊಂದು ರೀತಿಯಲ್ಲಿ

ಏರ್ಪಡಿಸುವ ಕೆಲಸ ಬಹುದೊಡ್ಡ ಪ್ರಮಾಣದಲ್ಲಿ ನಡೆದಿತ್ತು. ಈ ಬಗ್ಗೆ ಆಸಕ್ತಿ ವಹಿಸಿದ್ದರು ಬೇರೆ ಯಾರೂ ಅಲ್ಲ, ಸ್ವತಃ ಬಿರ್ಲಾ ಮತ್ತು ಪಟೇಲ್. ಈ ಹೊಸ ಸಂಘಟನೆಯ ಹೆಸರು ಇಂಟಕ್ (INTUC). ಇಂಟಕ್ ಅಸ್ತಿತ್ವಕ್ಕೆ ಬಂದು ಹಳೆಯ ಭಾರತೀಯ ಕಾರ್ಮಿಕ ಒಕ್ಕೂಟದ ಸ್ಥಾನವನ್ನು ಆಕ್ರಮಿಸತೊಡಗಿತ್ತು. ಇದಕ್ಕೆ ಗೃಹ ಸಚಿವರಾದ ಪಟೇಲರ ಬಲವಾದ ಒತ್ತಾರೆ ಇದ್ದುದರಿಂದ, ಸರ್ಕಾರದ ಪ್ರಯೋಜಕತ್ವದಲ್ಲಿದ್ದ ಅನೇಕ ಕಂಪನಿಗಳು ಅದರಲ್ಲಿ ಸೇರಿಕೊಳ್ಳತೊಡಗಿದ್ದವು. ಇದರಿಂದ ಅದು ವಿಶಾಲ ವ್ಯಾಪ್ತಿಯನ್ನು ಪಡೆದುಕೊಳ್ಳತೊಡಗಿತ್ತು. ಮುಷ್ಕರಗಳನ್ನು ಮಾಡದಿರುವುದೇ ಇಂಟಕ್‌ನ ನಿರ್ಣಯ ಎಂಬುದನ್ನು ಪಟೇಲರು ತಮ್ಮ ಭಾಷಣಗಳ ಮೂಲಕ ಪ್ರಚಾರ ಮಾಡುತ್ತಿದ್ದರು. ಈ ನಿರ್ಣಯವನ್ನು ಮೂರು ವರ್ಷಗಳ ಅವಧಿಗೆ ವಿಸ್ತರಿಸುವ ಯೋಜನೆಯೂ ಇತ್ತು. ನನ್ನ ಸುತ್ತ ಕುಳಿತಿದ್ದ ಕಾರ್ಮಿಕರಿಗೆ ಇಂಟಕ್‌ನಲ್ಲಿ ವಿಶ್ವಾಸವಿರಲಿಲ್ಲ. ಮತ್ತು ಈಗ ನಡೆದಿರುವ ಬೆಳವಣಿಗೆಯ ಬಗ್ಗೆ ಅವರು ತೀವ್ರ ತಳಮಳಗೊಂಡಿದ್ದರು. ಎಲ್ಲರೂ ಇನ್ನಷ್ಟು ಒತ್ತೊತ್ತಾಗಿ ಸರಿದುಕೂರುತ್ತಾ 'ನಾವೆಲ್ಲರೂ ಕುರಿಗಳಂತೆ ಅನುಸರಿಸಬೇಕು ಎಂಬುದು ಇಂಟಕ್‌ನವರ ನಿರೀಕ್ಷೆ' ಎಂದು ಹೇಳಿದರು.

ಕಾರ್ಮಿಕರ ನಗರ ಎಂದು ಪ್ರಸಿದ್ಧವಾಗಿದ್ದ ಮುಂಬೈನಲ್ಲಿ ಇತ್ತೀಚೆಗೆ ಮೂರು ವರ್ಷಕಾಲ ಮುಷ್ಕರವೇ ಇರಕೂಡದು ಎಂಬ ನಿಲುವನ್ನು ಪ್ರತಿಭಟಿಸಿ ನಗರದಾದ್ಯಂತ ಒಂದು ದಿನದ ಹರತಾಳ ನಡೆದಿತ್ತು. ಇದಕ್ಕೆ ಪಟೇಲ್ ಅವರ ಪ್ರತಿಕ್ರಿಯೆ ನಿಜಕ್ಕೂ ಮರೆಯಲಾಗದ ಮಾತು!

ಅವರ ಮಾತು ಇಲ್ಲಿಂದ ಸಂಬಳಭತ್ಯೆಗಳ ಕಡೆಗೆ ಹರಿಯಿತು. ತುಟ್ಟಿಭತ್ಯೆ, ಜೀವನವೆಚ್ಚ, ಇತ್ಯಾದಿಯಾಗಿ ಅವರು ಪಡೆಯುವುದಕ್ಕೂ ಭಯಾನಕವಾಗಿ ಏರುತ್ತಿದ್ದ ಬೆಲೆಗಳಿಗೂ ತಾಳೆ ಇರಲಿಲ್ಲ. ಯುದ್ಧದ ವರ್ಷಗಳಲ್ಲಿ ಜವಳಿ ಕೈಗಾರಿಕೆ ಉತ್ತುಂಗ ಸ್ಥಿತಿಯಲ್ಲಿದ್ದಾಗ ಅವರಿಗೆ ಶೇಕಡಾ 50 ರಷ್ಟು ತುಟ್ಟಿಭತ್ಯೆಯ ಹೆಚ್ಚಳ ಸಿಕ್ಕಿತ್ತು. ಆದರೆ ಅದೇ ಅವಧಿಯಲ್ಲಿ ಬೆಲೆಗಳು ಶೇಕಡಾ 300 ಏರಿದ್ದವು. ಮತ್ತು ಈ ಮೂರುಪಟ್ಟಿನ ಏರಿಕೆಯೂ ಸಹ ಸರ್ಕಾರದ ಸೂಚಿಯಲ್ಲಿ ಪ್ರಕಟಿಸಲಾಗಿದ್ದ 'ನಿಯಂತ್ರಣ' ಬೆಲೆಗಳಿಗೆ ಮಾತ್ರ ಅನ್ವಯಿಸುತ್ತಿತ್ತು. ಇದರಲ್ಲಿ ಕಾಳಸಂತೆಯ ಬೆಲೆಗಳು ಸೇರದಿದ್ದುದು ಸಹಜ. ಈಗ ಬೆಲೆಗಳ ನಿಯಂತ್ರಣ ತೆಗೆದುಹಾಕುವ ಎಲ್ಲ ಸಾಧ್ಯತೆಯೂ ಇತ್ತು.

ಮುಷ್ಕರಗಳನ್ನು ಮಾಡದಿರುವುದೇ ಇಂಟಕ್‌ನ ನಿರ್ಣಯ ಎಂಬುದನ್ನು ಪಟೇಲರು ತಮ್ಮ ಭಾಷಣಗಳ ಮೂಲಕ ಪ್ರಚಾರ ಮಾಡುತ್ತಿದ್ದರು.

ಹಿಟ್ಟು ಮತ್ತು ಸಕ್ಕರೆ ಮೊದಲಾದವುಗಳ ನಿಯಂತ್ರಣ ತೆಗೆದುಹಾಕುವ ಬಗ್ಗೆ ಪತ್ರಿಕೆಗಳು ತೀವ್ರವಾಗಿ ಪ್ರತಿಭಟಿಸಿದವು. ಮುಖ್ಯವಾಗಿ ಬಿರ್ಲಾ ಮಾಲಿಕತ್ವದ ವೃತ್ತ ಪತ್ರಿಕೆಗಳು ಹಾಗೂ ಗಾಂಧೀಜಿಯವರೇ ಪ್ರಕಟಿಸುತ್ತಿದ್ದ ಹರಿಜನ ಪತ್ರಿಕೆ ಕೂಡ ಪ್ರತಿಭಟಿಸಿದವು ಎಂದು ಒಬ್ಬ ಕಾರ್ಮಿಕ ಹೇಳಿದ. ನಿಯಂತ್ರಣ ಬೆಲೆಗಳು ಕೂಡ ಉಸಿರುಕಟ್ಟಿಸುವಂತಿದ್ದವು. ಸಾಮಾನ್ಯ ಜನರಿಗೆ ಅಗತ್ಯವಾದ ವಸ್ತುಗಳು, ಸ್ವತಃ ಗಿರಣಿ ಕಾರ್ಮಿಕರೇ ನೂಲು ತೆಗೆದು ನೇಯ್ದ ಹತ್ತಿ ಬಟ್ಟೆಗಳೂ ಸಹ ಕಾಳಸಂತೆಯಲ್ಲಿ ಮಾಯವಾಗಿ ಹೊಸ ಬೆಲೆಯೊಂದಿಗೆ ಕಾಣಿಸಿಕೊಳ್ಳುತ್ತಿದ್ದವು. ಆ ಬೆಲೆಗೆ ಕೊಂಡುಕೊಳ್ಳುವ ಸಾಮರ್ಥ್ಯ ಶ್ರೀಮಂತರಿಗೆ ಮಾತ್ರ ಸಾಧ್ಯವಿತ್ತು. "ನಾವು ಅಷ್ಟೆಲ್ಲ ನೇಯ್ದ ಸಾವಿರಾರು ಗಜ ಬಟ್ಟೆ ಎಲ್ಲಿಗೆ ಹೋಗುತ್ತೆ? ನಮ್ಮ ಇಡೀ ಜೀವಮಾನದಲ್ಲಿ ಒಂದು ಶರ್ಟೇ ಗತಿ" ಎಂದು ಒಬ್ಬ ಹೇಳಿದ.

ನಾವು ಎಷ್ಟು ಹೊತ್ತು ಮಾತಾಡಿದ್ದೆವೆಂದರೆ ಸೂರ್ಯ ಮುಳುಗಿದ್ದೇ ಗೊತ್ತಾಗಿರಲಿಲ್ಲ. ನನಗೆ ಇದ್ದಕ್ಕಿದ್ದಂತೆ ಛಳಿಯಾಗ ತೊಡಗಿದಾಗ ಅದು ನನ್ನ ಅರಿವಿಗೆ ಬಂತು. ಭಾರತದಲ್ಲಿ ಬಿರುಬಿಸಿಲಿನ ಹಗಲು ಕಳೆದು ಸೂರ್ಯ ಮುಳುಗುತ್ತಿದ್ದಂತೆ ಅದೆಲ್ಲಿಂದ ಇಷ್ಟು ಛಳಿ ನುಗ್ಗುತ್ತದೋ! ಈ ಹವಮಾನದ ವ್ಯತ್ಯಾಸಕ್ಕೆ ನನಗೆ ಇದುವರೆಗೆ ಹೊಂದಿಕೊಳ್ಳಲಾಗಿರಲಿಲ್ಲ. ಛಳಿಯನ್ನು ತಾಳಲಾರದೆ ನಾನು ಹೊರಡೋಣ ಎಂದು ಹೊರಟಾಗ ನೀವು ಇನ್ನೊಂದು ಜಾಗವನ್ನು ನೋಡಬೇಕು ಎಂದು ಅವರು ಕೇಳಿಕೊಂಡರು. ಬಸ್ತಿಗಳಲ್ಲಿ ಅವಕಾಶಕ್ಕಿಂತ ಹೆಚ್ಚು ಜನ ಇದ್ದರೂ ಅವರವರು ಅವರ ಕುಟುಂಬಗಳೊಂದಿಗೆ ವಾಸಿಸುವಷ್ಟು ಸ್ಥಳಾವಕಾಶವಾದರೂ ಇರುತ್ತಿತ್ತು. ಆದರೆ ಇದಕ್ಕಿಂತ ಹೆಚ್ಚು ಟಿಪಿಕಲ್ ಆದ ಮನೆಗಳನ್ನು ನಾನಿನ್ನೂ ನೋಡಿರಲಿಲ್ಲ. ಅವರು ಕರೆದುಕೊಂಡು ಹೋದ ಜಾಗ ವಿಚಿತ್ರವಾಗಿತ್ತು. ಆ ಗೂಡುಗಳು ಇದಕ್ಕಿಂತ ಸರಳವಾಗಿರಲು ಸಾಧ್ಯವೇ ಇಲ್ಲ ಎನ್ನುವಷ್ಟು ಸರಳವಾಗಿದ್ದವು. ಒಂದು ವಿಶಾಲವಾದ ಕೋಣೆಯೊಳಗೆ ಸಮಾನಾಂತರವಾಗಿ ಕಟ್ಟಿದ

ಉದ್ದನೆಯ ಸಾಲುಸಾಲು ಗೂಡುಗಳು, ಒಂದೇ ಗೋಡೆಯ ಎರಡೂ ಬದಿಗಳಲ್ಲಿ ಒಂದೇ ರೀತಿಯ ಸಣ್ಣ ಸಣ್ಣ ಬಿಲದಂತಹ ಗೂಡುಗಳು. ಇಂತಹ ಒಂದು ಕೋಣೆಯೊಳಗೆ ರಾಮದಾಸ್ ನನ್ನನ್ನು ಕರೆದುಕೊಂಡು ಹೋದ. ಅದರ ಅಳತೆ ಸುಮಾರು 9x12 ಅಡಿ ಇರಬಹುದು. ಆ ಕೋಣೆಗೆ ಒಂದೇ ಒಂದು ಸಣ್ಣ ಕಿಟಕಿ. ಸ್ವಲ್ಪ ಹೊತ್ತೇರಿದ ನಂತರ ಅದರ ಮೂಲಕ ಸ್ವಲ್ಪ ಬೆಳಕು ಇಣುಕುತ್ತಿರಬಹುದು. ನೆಲದ ಮೇಲೆ ಒತ್ತೊತ್ತಾಗಿ ಸುರಳಿ ಸುತ್ತಿಕೊಂಡಂತೆ ಬಿದ್ದಿದ್ದ ಆಕೃತಿಗಳೆಲ್ಲ ಮಲಗಿದ್ದ ಮನುಷ್ಯರವು ಎಂದು ತಕ್ಷಣ ಗುರುತಿಸುವುದು ನನಗೆ ಸಾಧ್ಯವಾಗಲಿಲ್ಲ. ಒಂದೊಂದು ಕೋಣೆಯಲ್ಲಿ ಇಪ್ಪತ್ತೈದು ಜನ ಇರುತ್ತಾರೆ ಎಂದು ರಾಮದಾಸ್ ಹೇಳಿದ. ಆತನ ದನಿ ಕೇಳಿ ಮಲಗಿದ್ದ ಕೆಲವು ಆಕೃತಿಗಳು ಮಿಸುಕಾಡಿದವು. ಕೆಲವು ಎದ್ದು ಕುಳಿತವು. ಇವರೆಲ್ಲರೂ ನೇಕಾರರೇ. ಅವರಿಗೆ ತಿಂಗಳಿಗೆ ಸರಾಸರಿ 35 ರೂಪಾಯಿಯ ಸಂಬಳ. ಜೊತೆಗೆ ತುಟ್ಟಿಭತ್ಯೆ ಸೇರಿದರೆ 44 ರೂಪಾಯಿ. ಅವರು ಮಲಗುತ್ತಿದ್ದ ಈ ನೆಲದ ತುಣುಕಿಗೆ ಬಾಡಿಗೆ ಕೊಡಬೇಕಿತ್ತು. ವಾರಕ್ಕೆ ತಲಾ ಎರಡು ರೂಪಾಯಿ 12 ಆಣೆ. ಮೊದಲ ನೋಟಕ್ಕೆ ಈ ಬಾಡಿಗೆ ನ್ಯಾಯಸಮ್ಮತವಾಗಿದೆ ಅನ್ನಿಸಿತು. ಇದರಿಂದ ಮಾಲಿಕನಿಗೆ ಎಷ್ಟು ಸಿಗುತ್ತದೆ ಎಂದು ಲೆಕ್ಕಹಾಕಿದೆ. ಇಲ್ಲಿ ನೀರು, ಲೈಟು ಒಲೆ ಮೊದಲಾದ ಯಾವ ಅನುಕೂಲವೂ ಇರಲಿಲ್ಲ. ಪ್ರತ್ಯೇಕ ಕಕ್ಕಸೂ ಇರಲಿಲ್ಲ. ಇಷ್ಟು ಸ್ಥಳಾವಕಾಶಕ್ಕೆ ಕಂಪನಿಯು ತಿಂಗಳಿಗೆ 25 ಪೌಂಡುಗಳಿಗೆ ಸಮನಾದ ಬಾಡಿಗೆಯನ್ನು ವಸೂಲು ಮಾಡುತ್ತಿತ್ತು. ಯಾರೋ ಒಬ್ಬರು ಒಂದೇ ಒಂದು ಕ್ಯಾಂಡಲ್ ಹಚ್ಚಿ ಮೇಲಿಟ್ಟರು. ಮಲಗಿದ್ದವರೆಲ್ಲ ಪೂರ್ತಿಯಾಗಿ ಎದ್ದು ತಮ್ಮ ಅನಿಸಿಕೆಗಳನ್ನು ಹೇಳತೊಡಗಿದರು. "ನೋಡಿ, ನಾವು ಒಟ್ಟಿಗೆ ಕೂರುವಷ್ಟು ಜಾಗವಿಲ್ಲ. ಮಲಗಲು ಹೇಗೆ ಜಾಗ ಆಗುತ್ತೆ ಮಿಲ್‌ನಲ್ಲಿ ಮೂರು ಶಿಫ್ಟ್ ಇರುವುದರಿಂದ ಇಷ್ಟಾದರೂ ಆಗುತ್ತದೆ. ಕೆಲವರು ಶಿಫ್ಟ್‌ನಲ್ಲಿದ್ದಾಗ ಉಳಿದವರು ಮಲಗುತ್ತಾರೆ. ನಮಗೆ ರಜೆ ಸಿಗುವುದೂ ಕಷ್ಟ. ನಾವೆಲ್ಲ ಒಟ್ಟಿಗೆ ಸೇರುವುದಕ್ಕೂ ಅವಕಾಶವಿಲ್ಲ". ನೀವು ರಜಾದಿನ ಏನು ಮಾಡುತ್ತೀರಿ ಎಂದು ಸುಮಾರು 14 ವರ್ಷವಿರಬಹುದಾದ ಒಬ್ಬ ಹುಡುಗನನ್ನು ಕೇಳಿದೆ. ಜಮುನಾದಾಸ್ ಎಂಬ ಹೆಸರಿನ ಆ ಹುಡುಗ ನನ್ನ ಪ್ರಶ್ನೆಗೆ ಉತ್ತರಿಸಲು ತೀರ ನಾಚಿಕೊಂಡು ಬರಿಗಾಲಿನಿಂದ ನೆಲ ಕೆರೆಯುತ್ತ ನಿಂತ. ನಾನು ಬಿಡಲಿಲ್ಲ. ನನಗೆ ತಿಳಿದು ಬಂದ ಪ್ರಕಾರ ರಜಾದಿನಗಳಲ್ಲೂ ಈ ಹುಡುಗರು ಆಟ ಆಡುತ್ತಿರಲಿಲ್ಲ. ಭಾನುವಾರ ಮತ್ತು ಇತರ ಯಾವುದಾದರೂ ರಜಾದಿನಗಳಲ್ಲಿ ಅವರು ಬಟ್ಟೆ ಒಗೆದುಕೊಳ್ಳುತ್ತಿದ್ದರು. ಜಮುನಾದಾಸ್, ತಾನು ಒಂದೆರಡು ವರ್ಷ ಶಾಲೆಗೆ ಹೋಗಿದ್ದೆ ಎಂದು ಹೇಳುವಾಗ ಅವನ ಕಾಂತಿಹೀನ ಕಣ್ಣುಗಳಲ್ಲಿ ಲವಲವಿಕೆಯ ಬೆಳಕು ಚಿಮ್ಮಿತು. ಅವನು ಆಟ ಆಡುವುದನ್ನು ನಿಲ್ಲಿಸಿ ಎಷ್ಟು ದಿನಗಳಾಗಿದ್ದವೋ. ಇವನಿಗಿಂತ ಚಿಕ್ಕ ಹುಡುಗರೂ ಕೂಡ ಈ ಮಿಲ್ಲಿನಲ್ಲಿ ಎಂಟು ಗಂಟೆಗಳ ಕಾಲ ದುಡಿಯುತ್ತಾರೆ ಎಂದು ಕೆಲವರು ಹೇಳಿದರು. ಆಹಾರ ಪದಾರ್ಥಗಳೆಲ್ಲ ತುಟ್ಟಿ.

ಕಾರ್ಮಿಕರ ನಗರ ಎಂದು ಪ್ರಸಿದ್ಧವಾಗಿದ್ದ ಮುಂಬೈನಲ್ಲಿ ಇತ್ತೀಚೆಗೆ ಮೂರು ವರ್ಷಕಾಲ ಮುಷ್ಕರವೇ ಇರಕೂಡದು ಎಂಬ ನಿಲುವನ್ನು ಪ್ರತಿಭಟಿಸಿ ನಗರದಾದ್ಯಂತ ಒಂದು ದಿನದ ಹರತಾಳ ನಡೆದಿತ್ತು. ಇದಕ್ಕೆ ಪಟೇಲ್ ಅವರ ಪ್ರತಿಕ್ರಿಯೆ ನಿಜಕ್ಕೂ ಮರೆಯಲಾಗದ ಮಾತು!

ಹೊಟ್ಟೆ ತುಂಬುವಷ್ಟು ಆಹಾರವೂ ಅವರ ಪಾಲಿಗೆ ಸಾಧ್ಯವಿರಲಿಲ್ಲ. ಆಟ ಆಡಲು ಶಕ್ತಿ ಎಲ್ಲಿಂದ ಬರಬೇಕು. ಎಷ್ಟೋ ಮಂದಿ ತಮ್ಮ ಕುಟುಂಬಗಳನ್ನು ಹಳ್ಳಿಯಲ್ಲಿಯೇ ಬಿಟ್ಟುಬಂದಿದ್ದರು. ಆ ಕುಟುಂಬಗಳ ಪೋಷಣೆಗೂ ಇವರು ದುಡಿದಿದ್ದನ್ನು ಬಳಸಿಕೊಳ್ಳಬೇಕಿತ್ತು. ಇಂಥವರಿಗೆ ಹೊಟ್ಟೆತುಂಬ ಊಟ ಮಾಡುವುದಕ್ಕೂ ಅವರು ದುಡಿದದ್ದು ಸಾಧ್ಯವಾಗುತ್ತಿರಲಿಲ್ಲ. ಕುಟುಂಬಗಳನ್ನು ಇಲ್ಲೇ ತಂದಿಟ್ಟುಕೊಳ್ಳಲು ವಸತಿಯ ಸಮಸ್ಯೆ. ಎಲ್ಲರಂತೆ ಇವರಿಗೂ ತಮ್ಮ ಕಣ್ಣಮುಂದೆಯೇ ತಮ್ಮ ಮಕ್ಕಳು ಬೆಳೆಯಬೇಕು ಎಂಬ ಆಸೆ ಇತ್ತು. ನೀರಿಗೆ, ಸೀಮೆ ಎಣ್ಣೆಗೆ ಕ್ಯೂನಿಂತು ಕಾದು ತರುವುದಕ್ಕೆ ಮನೆಯ ಜನರಿಲ್ಲವಾದ ಕಾರಣ ಇವರಲ್ಲೇ ಕೆಲವರು ಆ ಕೆಲಸವನ್ನು ಹಂಚಿಕೊಂಡು ಮಾಡುತ್ತಿದ್ದರು. ಮತ್ತೆ ಇವರಲ್ಲಿಯೇ ಒಬ್ಬ ಅಡುಗೆಯ ಕೆಲಸ ವಹಿಸಿ ಕೊಂಡಿರುತ್ತಿದ್ದ. ಆದರೂ ತಮ್ಮ ಕುಟುಂಬಗಳಿಂದ ತಾವು ದೂರವಾಗಿರುವ ವ್ಯಥೆಯನ್ನು ಅವರು ಅನುಭವಿಸುತ್ತಿದ್ದರು. ಇದರ ಜೊತೆಗೆ, ಈಗ ಮತೀಯಗಲಭೆಗಳು ನಡೆಯುತ್ತಿರುವುದರಿಂದ ಊರಿನಲ್ಲಿರುವ ತಮ್ಮ ಕುಟುಂಬಗಳ ಗತಿ ಏನಾಗಿದೆಯೋ ಎಂಬ ಆತಂಕವೂ ಸೇರಿ ಅವರು ಇನ್ನಷ್ಟು ದುಃಖಿಗೊಂಡಿದ್ದರು. ಬರುವ ಹಣ ಹೊಟ್ಟೆ ಬಟ್ಟೆಗೇ ಸಾಲದಿರುವಾಗ ಗಲಭೆಗಳಿಂದ ಇರುವ ಮನೆಮಠಗಳಿಗೆ ಏನಾದರೂ ಹಾನಿಯಾದರೆ ಎಂಬ ಚಿಂತೆಯೂ ಸೇರಿತ್ತು.

ಡಿಸೆಂಬರ್ 8 ರಂದು (ಗಾಂಧೀಜಿ ಉಪವಾಸ ಆರಂಭಿಸುವುದಕ್ಕೆ ಕೇವಲ 5 ವಾರಗಳ ಮೊದಲು) ಈ ಗಿರಣಿ ಕೆಲಸಗಾರರು ತಮ್ಮ ತುಟ್ಟಿಭತ್ಯೆ ಹೆಚ್ಚಿಸಬೇಕು ಎಂದು ಮ್ಯಾನೇಜರ್ ಹತ್ತಿರ ಹೋಗಿ ಕೇಳಿದ್ದರು. ಬೆಲೆಗಳು ಏರುತ್ತಿವೆ. ನಮ್ಮ ಕುಟುಂಬ ಗಳನ್ನು ಸಾಕುವುದಕ್ಕೆ ಆಗುತ್ತಿಲ್ಲ ಎಂದಾಗ ನಿಮಗೆ ತಾವು ಕೊಡುವ ಸಂಬಳದಿಂದ ತೃಪ್ತಿ ಇಲ್ಲದಿದ್ದರೆ ಕೆಲಸ ಬಿಟ್ಟು ಹೋಗಬಹುದು ಎಂದು ಅವನು ಹೇಳಿದ್ದ. ಕಾರ್ಮಿಕರು ಸುಮ್ಮನಾಗಲಿಲ್ಲ. ಹೆಚ್ಚು ಹೆಚ್ಚು ಕಾರ್ಮಿಕರು ಬಂದು ಸೇರತೊಡಗಿದಾಗ ಮ್ಯಾನೇಜರ್ ಕಿಟಕಿಯಿಂದ ತಲೆ ಹೊರಗೆ ಹಾಕಿ ಈ ಜನ ಮಾತು ಕೇಳುತ್ತಿಲ್ಲ. ಒತ್ತಾಯ ಮಾಡುತ್ತಿದ್ದಾರೆ ಎಂದು ಯಾರಿಗೋ ಹೇಳಿದ. ಆಮೇಲೆ ಅವನು ಫೋನಿನಲ್ಲಿ ಮಾತಾಡಿದ್ದನ್ನು ಕೆಲಸಗಾರರು ನೋಡಿದರು. ಅವನು ಫೋನ್ ಮಾಡಿದ ಕೆಲವೇ ನಿಮಿಷಗಳಲ್ಲಿ ನಾಲ್ಕು ಮಂದಿ ಕಾನ್‌ಸ್ಟೇಬಲ್‌ಗಳು ಬಂದರು. ರೈಫಲ್‌ನ ತುದಿಯಿಂದ ತಿವಿದು ಜನರನ್ನು ಕಾಂಪೋಂಡಿನಿಂದ ಹೊರಗೆ ಅಟ್ಟತೊಡಗಿದರು. ಅಷ್ಟೇ ಅಲ್ಲ ಯಾವ ಮುನ್ನೆಚ್ಚರಿಕೆಯನ್ನೂ ಕೊಡದೆ ಇದ್ದಕ್ಕಿದ್ದಂತೆ ಗುಂಡು ಹಾರಿಸಿದರು. ಒಬ್ಬ ಕಾರ್ಮಿಕ ಸತ್ತ. ಇನ್ನೂ ಅನೇಕರು ತೀವ್ರವಾಗಿ ಗಾಯಗೊಂಡರು.

ಈ ಬಗ್ಗೆ ಗಾಂಧೀಜಿಯವರಿಗೆ ವಿಷಯ ತಿಳಿಸುವುದಕ್ಕಾಗಿ ಐದು ಜನ ಕಾರ್ಮಿಕರ ನಿಯೋಗ ಬಿರ್ಲಾ ಭವನದ ಕಡೆಗೆ ಹೊರಟಿತು. ನವದೆಹಲಿಯಲ್ಲಿರುವ ಅಲ್ಬುಕರ್ಕ್ ರಸ್ತೆಗೂ ಹಳೆ ನಗರದಲ್ಲಿರುವ ಶಾಬ್ಜಿಮಂಡಿಗೂ ಬಹಳ ದೂರದ ಹಾದಿ. ಅವರ ದುರಾದೃಷ್ಟ. ಅಷ್ಟುದೂರ ಅವರು ಬರುವಷ್ಟರಲ್ಲಿ ರಾತ್ರಿ ಒಂಬತ್ತು ಗಂಟೆ ದಾಟಿತ್ತು. ಕಾವಲುಗಾರರು ಅವರನ್ನು ಗೇಟಿನಲ್ಲಿಯೇ ತಡೆದು ನಾಳೆ ಬನ್ನಿ ಎಂದು ತಿಳಿಸಿದರು. ಮಾರನೇ ದಿನ ಈ ಐದೂಮಂದಿ ಬೆಳಿಗ್ಗೆ ಸಮಯಕ್ಕೆ ಸರಿಯಾಗಿ ಪುನಃ ಬಂದರು. ಆದರೆ ಗಾಂಧಿಯವರಿಗೆ ಡಿಸೆಂಬರ್ 13ರವರೆಗೆ ಬಿಡುವೇ ಇಲ್ಲ ಎಂದು ತಿಳಿಸಲಾಯಿತು. ಅಂದರೆ ಇನ್ನು ನಾಲ್ಕುದಿನ ಗಾಂಧಿಯನ್ನು ನೋಡುವಂತಿರಲಿಲ್ಲ. 13ನೇ ತಾರೀಖು ಬಂದರೂ ಉಪಯೋಗವೇನೂ ಆಗಲಿಲ್ಲ. ಬಿರ್ಲಾ ಮನೆಯಲ್ಲಿ ಅವರು ವಾಸವಾಗಿರು ವುದರಿಂದ ಗಾಂಧೀಜಿಯವರು ಬಹುಶಃ ಕಾರ್ಮಿಕರ ಸಮಸ್ಯೆಗೆ ಸರಿಯಾಗಿ ಗಮನ ಕೊಡು ವುದಿಲ್ಲ ಎಂದು ಕಾರ್ಮಿಕರು ನಿರ್ಧರಿಸಿದರು.

ಆದರೂ ಯಾವುದೇ ಮುನ್ಸೂಚನೆ ಇಲ್ಲದೆ, ಕೌಂಪೌಂಡಿನೊಳಗಿದ್ದ ಕೆಲಸಗಾರರ ಗುಂಪಿನ ಮೇಲೆ ಗುಂಡು ಹಾರಿಸಿದ್ದರಿಂದ ಅವರು ಮತ್ತಷ್ಟು ಕೆರಳಿದರು. ಹೇಗಾದರೂ ನ್ಯಾಯ ಪಡೆಯಬೇಕು ಎಂದು ನಿರ್ಧರಿಸಿದರು. ಇದಕ್ಕಾಗಿ ಅವರು ಸರ್ಕಾರದ ಬೇರೆ ಬೇರೆ ನಾಯಕರನ್ನು ಭೇಟಿ ಮಾಡಲು ಪ್ರಯತ್ನಿಸಿದರು. ಪಟೇಲರೂ ಸೇರಿದಂತೆ ಎಲ್ಲರ ಮನೆ ಬಾಗಿಲನ್ನೂ ತಟ್ಟಿದರು. ಗೃಹಮಂತ್ರಿ ಪಟೇಲರ ಮನೆಬಾಗಿಲು ಇವರಿಗೆ ತೆರೆಯದಿರುವುದರ ಬಗ್ಗೆ ಆಶ್ಚರ್ಯವೇನೂ ಇಲ್ಲ. ಮುಷ್ಕರರಹಿತ ಕಾರ್ಖಾನೆಗಳು ಎಂಬ ಇಂಟಕ್ ನಿಲುವನ್ನು ಎಲ್ಲರೂ ತಾವಾಗಿಯೇ ಒಪ್ಪಿಕೊಳ್ಳು ವಂತಾಗಬೇಕು ಎಂಬ ದೃಷ್ಟಿಯಿಂದ ಎಡೆಬಿಡದೆ ಪ್ರಚಾರ ಭಾಷಣಗಳಲ್ಲಿ ತೊಡಗಿದ್ದ ಪಟೇಲ್ ಅವರಿಗೆ ಸಮಯ ಸಿಗದಿದ್ದರಲ್ಲಿ ಅಚ್ಚರಿ ಏನೂ ಇಲ್ಲ.

ಕಾರ್ಮಿಕರ ನಗರ ಎಂದು ಪ್ರಸಿದ್ಧವಾಗಿದ್ದ ಮುಂಬೈನಲ್ಲಿ ಇತ್ತೀಚೆಗೆ ಮೂರು ವರ್ಷಕಾಲ ಮುಷ್ಕರವೇ ಇರಕೂಡದು ಎಂಬ ನಿಲುವನ್ನು ಪ್ರತಿಭಟಿಸಿ ನಗರದಾದ್ಯಂತ ಒಂದು ದಿನದ ಹರತಾಳ ನಡೆದಿತ್ತು. ಇದಕ್ಕೆ ಪಟೇಲ್ ಅವರ ಪ್ರತಿಕ್ರಿಯೆ ನಿಜಕ್ಕೂ ಮರೆಯಲಾಗದ ಮಾತು! ಅಂತೂ ಈ ಐದುಮಂದಿ ನೇಕಾರರ ಗುಂಪು ಎಬ್ಬಿಸ ಬಹುದಾಗಿದ್ದ ಒಂದು ಸಣ್ಣ ಕಿರಿಕಿರಿಯನ್ನೂ ಸಹ, ಸ್ವಲ್ಪ ಧೈರ್ಯವಾಗಿ ಮಾತಾಡುತ್ತಿದ್ದ ಒಬ್ಬ ಕಾರ್ಮಿಕನ ಬಂಧನ ಹಾಗೂ ಉಳಿದ ನಾಲ್ವರನ್ನೂ ಬೇರೆ ಬೇರೆ ಕಡೆಗೆ ಚದುರಿಸುವ ಮೂಲಕ ಸದ್ದಿಲ್ಲದೆ ಅಡಗಿಸಲಾಯಿತು.

ನಾನು ಹೊರಟಾಗ, ಕತ್ತಲಲ್ಲಿ ಇನ್ನಷ್ಟು ಕಪ್ಪಾಗಿ ಕಾಣುತ್ತಿದ್ದ ತೆರೆದ ಚರಂಡಿಗಳ, ಎತ್ತರದ ಗೋಡೆಗಳ ನಡುವಿನಿಂದ ರಾಮದಾಸ್ ಹುಷಾರಾಗಿ ನನ್ನನ್ನು ಕರೆದುಕೊಂಡು ಬರುತ್ತಿದ್ದಾಗ ಒಂದು ಮಾತು ಹೇಳಿದ– "ಸ್ವಾತಂತ್ರ್ಯ ಬಂದ ನಂತರ ಹೀಗೆಲ್ಲ ವಿಚಾರಣೆಯಿಲ್ಲದೆ ಯೂನಿಯನ್ ಲೀಡರುಗಳನ್ನು ಜೈಲಿನಲ್ಲಿಡುವುದಿಲ್ಲ ಎಂದು ಅಂದುಕೊಂಡಿದ್ದೆವು. ಆದರೆ ಈಗಲೂ ಹಾಗೇ ನಡೆಯುತ್ತಿದೆ."

ನಾವು ಟ್ಯಾಕ್ಸಿ ಬಳಿ ಬಂದೆವು. ಡ್ರೈವರ್ ಸ್ಟೀರಿಂಗ್ ಮೇಲೆ ತಲೆ ಇಟ್ಟು ಗೊರಕೆ ಹೊಡೆಯುತ್ತ ಮಲಗಿದ್ದ. ಅದನ್ನು ನೋಡಿ ನಾವು ನಕ್ಕ ಸದ್ದಿಗೆ ಅವನಿಗೆ ಎಚ್ಚರವಾಯಿತು. ಗಲಿಬಿಲಿಗೊಂಡು ಎದ್ದು ಕುಳಿತ. ನಾನು ಟ್ಯಾಕ್ಸಿಯಲ್ಲಿ ಕೂರುತ್ತಿದ್ದಾಗ ರಾಮದಾಸ್ ಹೇಳಿದ – "ಬ್ರಿಟಿಷ್ ಸಾಮ್ರಾಜ್ಯಾಧಿಪತ್ಯ ಕೊನೆಯಾದ ಮೇಲೆ ಒಂದಂತೂ ಏನೂ ವ್ಯತ್ಯಾಸವಾಗಿಲ್ಲ. ಹಾಗೇ ಇದೆ. ಗಳಿಸಿದ ಲಾಭವನ್ನೆಲ್ಲ ತಾನೇ ಇಟ್ಟುಕೊಳ್ಳುವ ಸ್ವಾತಂತ್ರ್ಯ ಮಾಲೀಕನಿಗಿದೆ. ಗಲಾಟೆ ಮಾಡದೆ ಶಾಂತಿಯನ್ನು ಪಾಲಿಸಿಕೊಂಡು ಹೋಗಬೇಕಾದ ಸ್ವಾತಂತ್ರ್ಯ ಕಾರ್ಮಿಕರಿಗಿದೆ". ●

ದೇಶದ ಸಾರ್ವಭೌಮತೆ ಮೇಲೆ ದಾಳಿ


ಭಾರತವು ಜಗತ್ತಿನ ದೊಡ್ಡಣ್ಣ ತಾನು ಎಂದು ಬೀಗುವ ಅಮೇರಿಕಾದ ಬಾಲಂಗೋಚಿಯಾಗಬೇಕೋ? ಅಥವಾ ಜನತೆಯ ಹಿತಾಸಕ್ತಿಗೆ ಅನುಗುಣವಾಗಿ ಸ್ವತಂತ್ರವಾದ ಹಾದಿ ಹಿಡಿಯಬೇಕೋ?

ಪ್ರಕಾಶ್ ಕಾರಟ್

ದೇಶ ಇದೀಗ 61ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದೆ. ಆದರೆ ಅದೇ ಸಮಯದಲ್ಲಿ ದೇಶವು ತನ್ನ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಗಂಭೀರ ಸವಾಲು ಎದುರಿಸಬೇಕಾಗಿದೆ. ಇಂದು ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ ಎರಡೂ ವಿಚಾರಗಳಲ್ಲೂ ಇದೇ ಪರಿಸ್ಥಿತಿ ಎದುರಾಗಿದೆ. ರಾಷ್ಟ್ರದ ಸಾರ್ವಭೌಮತೆ ದುರ್ಬಲವಾದಲ್ಲಿ ಅದು ಸ್ವಾತಂತ್ರ್ಯಕ್ಕೂ ಅಪಾಯವನ್ನು ತರುತ್ತದೆ. ಭಾರತವು ಅಮೇರಿಕಾದೊಂದಿಗೆ ಮಾಡಿಕೊಳ್ಳುತ್ತಿರುವ ಸಾಮರಿಕ ಮೈತ್ರಿಯು ಖಂಡಿತವಾಗಿಯೂ ದೇಶದ ಸಾರ್ವಭೌಮತೆಗೆ ಮಾರಕವಾಗಿದೆ.

‘ಭಾರತದ ಆಳುವ ವರ್ಗಗಳು ಅನುಸರಿಸುತ್ತಿರುವ ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ನಮ್ಮ ದೇಶದ ಎಲ್ಲ ರಂಗಗಳಲ್ಲೂ ಸಾಮ್ರಾಜ್ಯಶಾಹಿ ನುಸುಳುವಿಕೆಯನ್ನು ಅದರ ಉತ್ತುಂಗಕ್ಕೇರಿಸಿದೆ ಸಾಮ್ರಾಜ್ಯಶಾಹಿ ಅಮೇರಿಕಾದ ಕಡೆ ವಾಲುತ್ತಿರುವ ನೀತಿಯ ವಿರುದ್ದವಾಗಿ ಮತ್ತು ಅಲಿಪ್ತ ನೀತಿಯ ಆಧಾರಿತವಾದ ಸಾಮ್ರಾಜ್ಯಶಾಹಿ ಒತ್ತಡಗಳಿಂದ ದೂರವಾದ ನೀತಿಗಳಿಗಾಗಿ ಜನತೆ ಮುಂದೆ ಮಹತ್ತರವಾದ ಹೋರಾಟಗಳನ್ನು ನಡೆಸಬೇಕಾಗಿದೆ’. ಈ ರೀತಿಯಲ್ಲಿ ಭಾರತದ ಆಳುವ ವರ್ಗಗಳ ಸಾಮ್ರಾಜ್ಯಶಾಹಿಯೊಂದಿಗಿನ ಬೆಳೆಯುತ್ತಿರುವ ಶಾಮೀಲು ಕೋರತನವು ಭಾರತದ ವಿದೇಶಾಂಗ ನೀತಿಗಳಲ್ಲೂ ಪ್ರತಿಫಲನಗೊಳ್ಳುತ್ತಿದೆ.

ಅಮೇರಿಕಾದೊಂದಿಗೆ ಸಾಮರಿಕ (ಯುದ್ಧ)ಮೈತ್ರಿ ಏರ್ಪಡಿಸಿಕೊಳ್ಳುವುದು ಭಾರತವು ಅಮೇರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಕೈ ಮಿಲಾಯಿಸುವುದರ ಒಂದು ಪ್ರಮುಖ ಹೆಜ್ಜೆಯಾಗಿದೆ. ಜುಲೈ 2005 ರಲ್ಲಿ ಭಾರತದ ಪ್ರಧಾನ ಮಂತ್ರಿ ಮನಮೋಹನ್‌ಸಿಂಗ್ ಮತ್ತು ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಶ್ ಸಹಿ ಮಾಡಿದ ಜಂಟಿ ಹೇಳಿಕೆಯಲ್ಲಿ ಇದಕ್ಕಾಗಿಯೇ ಪ್ರಯತ್ನಿಸಲಾಗಿದೆ. ಈ ಸಾಮರಿಕ ಮೈತ್ರಿಯು ನಾಲ್ಕು ಭಾಗಗಳನ್ನೊಳಗೊಂಡಿದೆ. ಒಂದು, ಭಾರತವು ಅಮೇರಿಕಾದ ‘ಜಗತ್ತಿನಾದ್ಯಂತ ಪ್ರಜಾಪ್ರಭುತ್ವ ಹರಡುವ’ ಬಗ್ಗೆ ತುತ್ತೂರಿ ಊದಬೇಕು. ಅಮೇರಿಕಾದೊಂದಿಗೆ ಈ ನಿಟ್ಟಿನಲ್ಲಿ ಕೈ ಜೋಡಿಸಬೇಕು. ಎರಡನೆಯದಾಗಿ, ಅಮೇರಿಕಾದ ಹಿತಾಸಕ್ತಿ, ಮತ್ತು ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಯನ್ನು ಕಾಪಾಡುವಂತಹ ಹಣಕಾಸು ನೀತಿಗಳು; ಮೂರನೆಯದು, ರಕ್ಷಣಾ ಚೌಕಟ್ಟು ಒಪ್ಪಂದದಲ್ಲಿ ಹೇಳಲಾದಂತಹ ಮಿಲಿಟರಿ ಮೈತ್ರಿ, ಮತ್ತು ನಾಲ್ಕನೆಯದು, ಅಣು ಸಹಕಾರ ಒಪ್ಪಂದ.



ಈ ಅಣು ಒಪ್ಪಂದವನ್ನು ಕೇಂದ್ರವನ್ನಾಗಿಟ್ಟುಕೊಂಡು ಭಾರತವನ್ನು ಅಮೇರಿಕಾ ದೊಂದಿಗೆ ಮೈತ್ರಿಗೆ ಎಳೆಯಲಾಗುತ್ತಿದೆ. ಇಂತಹ ಒಪ್ಪಂದ ಒಮ್ಮೆ ಜಾರಿಗೆ ಬಂದರೆ ಅಮೇರಿಕಾದೊಂದಿನ ಸಾಮರಿಕ ಮೈತ್ರಿಯೂ ಗಟ್ಟಿಗೊಳ್ಳುತ್ತದೆ ಮತ್ತು ಇದು ಭಾರತದ ಸ್ವಾಯತ್ತತೆ ಹಾಗೂ ವಿದೇಶಾಂಗ ನೀತಿಯ ಮೇಲೆ ಅತ್ಯಂತ ಗಂಭೀರವಾದ ದೂರಗಾಮಿ ಪರಿಣಾಮಗಳನ್ನು ಬೀರಲಿದೆ.

ಜನರ ಬದುಕಿನ ಮೇಲೆ ಪರಿಣಾಮ

ಈ ಸಾಮರಿಕ ಮೈತ್ರಿಯ ವಿರುದ್ಧದ ಹೋರಾಟ ಎಂದರೆ ಅದು ಕೇವಲ ಅಣು ಒಪ್ಪಂದದ ವಿರುದ್ಧದ ಹೋರಾಟವಿಲ್ಲ. ಇದು ಭಾರತದ ಆರ್ಥಿಕ ಸಾರ್ವಭೌಮತೆ, ಸ್ವಾತಂತ್ರ್ಯ, ವಿದೇಶಾಂಗ ನೀತಿ ಮತ್ತು ದುಡಿಯುವ ವರ್ಗದ ಜನರ ಬದುಕಿನ ಮೇಲೆ ಪರಿಣಾಮ ಬೀರುತ್ತದೆ. ಈ ಆರ್ಥಿಕ ಪಾಲುದಾರಿಕೆಯ ಭಾಗವಾಗಿ ಈಗಾಗಲೇ ಹಲವು ಸರಣಿ ಕ್ರಮಗಳನ್ನು

ಕೈಗೆತ್ತಿಕೊಳ್ಳಲಾಗಿದೆ. ಇದು ಮಾರ್ಚ್ 2006ರಲ್ಲಿ ಜಾರ್ಜ್ ಬುಶ್ ಭಾರತಕ್ಕೆ ಭೇಟಿ ನೀಡಿದಾಗ ರಚನೆಗೊಂಡ ಭಾರತ– ಅಮೇರಿಕಾ 'ಸಿಇಓ ವೇದಿಕೆ'ಯಲ್ಲಿ ಯೋಜಿಸಿದಂತೆಯೇ ಇವೆ.

'ಭಾರತ–ಅಮೇರಿಕಾ ಕೃಷಿ ಜ್ಞಾನ ಮುತುವರ್ಜಿ'ಯು ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಕೃಷಿ ಸಂಶೋಧನೆಗಳ ಕುರಿತು ಆದೇಶ ನೀಡುವುದಕ್ಕೆ ದಾರಿ ಮಾಡಿಕೊಟ್ಟಿದೆ ಮತ್ತು ಭಾರತದ ಕೃಷಿಯನ್ನು ಕಾರ್ಪೋರೇಟ್ ರಂಗಕ್ಕೆ ತೆರೆದಿಡಲು ದಾರಿಮಾಡಿಕೊಟ್ಟಿದೆ. ಇದು ಭಾರತದ ರೈತರ ಬದುಕಿನ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡಲಿದೆ. ಅದೇ ರೀತಿ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ(ಎಫ್‌ಡಿಐ) ವು ಲಕ್ಷಾಂತರ ಸಣ್ಣ ವ್ಯಾಪಾರಿಗಳು ಮತ್ತು ಮಾರಾಟಗಾರರ ಬದುಕನ್ನು ನಾಶಮಾಡಲಿದೆ. ಶಿಕ್ಷಣ, ಮಾಧ್ಯಮ ಕ್ಷೇತ್ರವೇ ಅಲ್ಲದೇ ಇಡೀ ದೇಶದ ಆರ್ಥಿಕತೆಯನ್ನು ವಿದೇಶಿ ಬಂಡವಾಳಕ್ಕೆ ತೆರೆದಿಡಬೇಕಾದ ಪರಿಸ್ಥಿತಿ ಬರುತ್ತಿದೆ. ಭೂವ್ಯವಹಾರ (ರಿಯಲ್ ಎಸ್ಟೇಟ್) ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಪ್ರವೇಶಿಸಿರುವುದರಿಂದ ದೊಡ್ಡ ಕಾರ್ಪೋರೇಟ್ ಕಂಪನಿಗಳು ಭೂಮಿಯನ್ನು ನುಂಗಲು, ಭೂಮಿಯನ್ನು ಸೆಳೆಸಲು ಅನುಕೂಲವಾಗಿದೆ. ಇದರಿಂದಾಗಿ ಜನ ಸಾಮಾನ್ಯರ ಸ್ವಂತ ಮನೆ ಕಟ್ಟಿಕೊಳ್ಳುವ ಕನಸು ಕನಸಿನ ಗಂಟೇ ಆಗುವಂತಹ ಪರಿಸ್ಥಿತಿ ಬರುತ್ತಿದೆ. ಆರ್ಥಿಕತೆಯ ಇನ್ನಷ್ಟು ಉದಾರೀಕರಣ, ವಿದೇಶಿ ಬಂಡವಾಳದ ಒಳ ನುಸುಳುವಿಕೆಯು ಭಾರತ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಮತ್ತಷ್ಟು ದುರ್ಬಲಗೊಳಿಸಲಿದೆ.



ಆಹಾರ ಸಹಾಯಧನವನ್ನು ಕಡಿತ ಮಾಡುವುದು ಮತ್ತು ಪಡಿತರ ವ್ಯವಸ್ಥೆಯನ್ನು ದುರ್ಬಲಗೊಳಿಸುವುದು ಮುಂತಾದ ನವ ಉದಾರೀಕರಣದ ನೀತಿಗಳಿಗೆ ಜೋತು ಬಿದ್ದಿರುವುದರಿಂದಲೇ ಬೆಲೆ ಏರಿಕೆಯನ್ನು ನಿಯಂತ್ರಿಸುವುದರಲ್ಲಿ ಕೇಂದ್ರ ಸರ್ಕಾರವು ವಿಫಲವಾಯಿತು. ನವ ಉದಾರೀಕರಣವಾದಿ ನೀತಿಗಳು ಅಗತ್ಯ ವಸ್ತುಗಳ ವಿಚಾರಗಳಲ್ಲಿ ಕೂಡ ವಾಯಿದಾ ವ್ಯಾಪಾರ (ಮುಂಗಡ ವ್ಯಾಪಾರ)ವನ್ನು ಉತ್ತೇಜಿಸುತ್ತಿವೆಯೇ ಹೊರತು ಅದನ್ನು ಹತ್ತಿಕ್ಕಲು ಸೂಚಿಸುವುದಿಲ್ಲ. ಇಂತಹ ಕಾರಣಗಳಿಂದಾಗಿಯೇ ಅಮೇರಿಕಾ ದೊಂದಿಗಿನ ಸಾಮರಿಕ ಮೈತ್ರಿಯು ದುಷ್ಟ, ಜನವಿರೋಧಿ ಆರ್ಥಿಕ ನೀತಿಗಳಿಂದಾಗಿ ಭಾರತದ ಬಡ ಜನರ ಮೇಲೆ ನಡೆಯುತ್ತಿರುವ ದಾಳಿಗಳನ್ನು ತೀವ್ರಗೊಳಿಸುತ್ತದೆ.

ಮಿಲಿಟರಿ ಮೈತ್ರಿಯೇ ನಿರ್ಣಾಯಕ :

ಅಮೇರಿಕನ್ ಸಾಮ್ರಾಜ್ಯಶಾಹಿಯು ಮುಖ್ಯವಾಗಿ ಭಾರತವನ್ನು ತನ್ನ ಮಿಲಿಟರಿ ಮೈತ್ರಿಗೆ ಸೆಳೆಯಲು ಬಯಸಿದೆ. ಅಮೇರಿಕಾಕ್ಕೆ ತನ್ನ ದೂರದೃಷ್ಟಿಯ ತಂತ್ರದ ದೃಷ್ಟಿಯಿಂದ ಭಾರತದೊಂದಿಗಿನ ಮಿಲಿಟರಿ ಮೈತ್ರಿ ಮುಖ್ಯವಾಗಿದೆ. ಏನೆಲ್ಲಾ ಮಿಲಿಟರಿ ಬಲ, ಸಾಮರ್ಥ್ಯ ಹೊಂದಿದ್ದಾಗ್ಯೂ ಅಮೇರಿಕಾವು ತನ್ನ ಪ್ರಾಬಲ್ಯವನ್ನು, ಜಗತ್ತಿನ ಮೇಲಿನ ಹಿಡಿತವನ್ನು ಕ್ರೋಢೀಕರಿಸಿಕೊಳ್ಳಲು, ತನ್ನ ಸೈನ್ಯದೊಂದಿಗೆ ಮಿಲಿಟರಿ ಮಧ್ಯಪ್ರವೇಶ ಮಾಡುವುದಕ್ಕೆ ಕಷ್ಟವಾಗುತ್ತಿದೆ. ಆದ್ದರಿಂದಾಗಿ ಅಮೇರಿಕಕ್ಕೆ ತನ್ನ ಜಾಗತಿಕ ಪ್ರಾಬಲ್ಯವನ್ನು ಮೆರೆಯಲು ಸ್ಥಳೀಯವಾದ ಮಿಲಿಟರಿ ಮೈತ್ರಿ ಬೇಕಾಗಿದೆ. ಏಷ್ಯಾದಲ್ಲಿ ಜಪಾನ್ ಅಲ್ಲದೆ ಈಗ ಭಾರತ ಅಮೇರಿಕಾಕ್ಕೆ ಒಬ್ಬ ಮಿಲಿಟರಿ ಮಿತ್ರನಾಗಿ ಕಾಣಿಸುತ್ತಿದೆ. ಹತ್ತು ವರ್ಷಗಳ 'ರಕ್ಷಣಾ ಚೌಕಟ್ಟು ಒಪ್ಪಂದ'ವು ಅಮೇರಿಕಾ ಭಾರತಗಳ ಮಿಲಿಟರಿ ಸಹಯೋಗಕ್ಕೆ ಈ ಹಿಂದೆ ಎಂದೂ ಕಾಣದಂತಹ ಆಧಾರವನ್ನು ಒದಗಿಸಿದೆ.

ಈಗಾಗಲೇ ಅಮೇರಿಕಾದ ಸೈನ್ಯ ಶಕ್ತಿಯ ಕೇಂದ್ರವಾದ ಪೆಂಟಗಾನ್ ಭಾರತವನ್ನು ತಾನು ಮಿಲಿಟರಿ ನೆಲೆ ಸೌಲಭ್ಯ ಹೊಂದಿರುವ ದೇಶಗಳ ಪಟ್ಟಿಯಲ್ಲಿ ಸೇರಿಸಿಕೊಂಡಿದೆ. ಅಮೇರಿಕಾದ ಸೈನ್ಯವು ಭಾರತದ ನೌಕಾ ನೆಲೆ ಮತ್ತು ವಾಯುನೆಲೆಗಳಿಗೆ ಪ್ರವೇಶಿಸಲು ಅತ್ಯಂತ ಸರಾಗವಾದ ಪ್ರವೇಶಾವಕಾಶವನ್ನು ನೀಡುವ 'ಲಾಜಿಸ್ಟಿಕ್ ಸಪೋರ್ಟ್ ಅಗ್ರಿಮೆಂಟ್' ನ್ನು ಮನಮೋಹನ್ ಸಿಂಗ್ ಸರ್ಕಾರವು ಮಾಡಿಕೊಳ್ಳಲು ತುದಿಗಾಲಿನಲ್ಲಿ ನಿಂತಿತ್ತು. ಎಡಪಕ್ಷಗಳ ಅತ್ಯಂತ ದೃಢವಾದ ವಿರೋಧದಿಂದಾಗಿ ಮಾತ್ರ ಸರ್ಕಾರ ಈ

ನಿಟ್ಟಿನಲ್ಲಿ ಯಶಸ್ವಿಯಾಗಲು ಸಾಧ್ಯವಾಗಿಲ್ಲ.

ಜುಲೈ 2007 ರಲ್ಲಿ ಅಮೇರಿಕಾ–ಭಾರತ ದ್ವಿಪಕ್ಷೀಯ ಅಣು ಸಹಕಾರ ಒಪ್ಪಂದವನ್ನು ಘೋಷಿಸಿದ ಬೆನ್ನ ಹಿಂದೆಯೇ ಅಮೇರಿಕಾ ಅಧೀನ ಕಾರ್ಯದರ್ಶಿ ನಿಕೋಲಸ್ ಬರ್ನ್ ಹೇಳಿದ್ದು ಹೀಗೆ. "....ನಾವೀಗ ನಾಗರೀಕ ಅಣು ವ್ಯಾಪಾರ ಒಪ್ಪಂದವನ್ನು ಪೂರ್ಣಗೊಳಿಸಿದ್ದೇವೆ ಮತ್ತು ಈ ದಾರಿಯಲ್ಲಿ ಮುಂದೆ... ಭವಿಷ್ಯದಲ್ಲಿ ನಮ್ಮ ನಡುವೆ ಇದಕ್ಕಿಂತ ವಿಶಾಲವಾದ ರಕ್ಷಣಾ ಸಹಕಾರವು ಕಾಣುತ್ತಿದೆ. ತರಬೇತಿ, ಸಮರಾಭ್ಯಾಸ, ... ಮತ್ತು ಅಮೇರಿಕಾದ ರಕ್ಷಣಾ ತಂತ್ರಜ್ಞಾನದ ವ್ಯಾಪಾರ ಸಹ ನಡೆಯಲಿದೆ ಎಂದು ಭಾವಿಸುತ್ತೇನೆ'. ಈ ನಿಕೋಲಸ್‌ಬರ್ನ್ ಯಾರೆಂದರೆ...? ಈತನೇ 123 ಒಪ್ಪಂದ ಮಾತುಕತೆಗಳಿಗೆ ಮುಖ್ಯವಾದ ಹೊಣೆಗಾರ.

ಈಗಾಗಲೇ ಅಮೇರಿಕಾವು ದಕ್ಷಿಣ ಏಷ್ಯಾದ ವಿಷಯಗಳಲ್ಲಿ ಭಾರತದೊಂದಿಗೆ ಸಮನ್ವಯವನ್ನು ಸಾಧಿಸಿದೆ. ಅಫಘಾನಿಸ್ತಾನ, ಬಾಂಗ್ಲಾದೇಶ, ನೇಪಾಳ, ಎಲ್ಲಾ ಪ್ರದೇಶಗಳಲ್ಲಿ ಭಾರತ–ಅಮೇರಿಕಾ ಜಂಟಿ ತಂತ್ರವನ್ನು ರೂಪಿಸಲಾಗಿದೆ.

1998ರಿಂದ 2004 ರ ನಡುವೆ ಇದ್ದ ಬಿಜೆಪಿ ನೇತೃತ್ವದ ಸರ್ಕಾರವು ಯಾವ ರೀತಿಯಲ್ಲಿ ಅಮೇರಿಕದೊಂದಿಗೆ ಸಾಮರಿಕ ಮೈತ್ರಿಗೆ ಹಾತೊರೆದು ಮುಂದುವರಿಯಿತೋ ಅದೇ ರೀತಿಯಲ್ಲಿ ಅದೇ ದಾರಿಯಲ್ಲಿ ಮನಮೋಹನ್ ಸರ್ಕಾರವೂ ಸಹ ನಡೆಯುತ್ತಿದೆ. ಇದು ಏನನ್ನು ತೋರಿಸುತ್ತಿದೆ? ಭಾರತದ ಆಳುವ ವರ್ಗವು ಅಮೇರಿಕಾದೊಂದಿಗೆ ಗಾಢವಾದ ಸಹಯೋಗವನ್ನು ಬಯಸುತ್ತಿರುವುದಕ್ಕೆ ಇದೇ ಒಂದು ಸಾಕ್ಷಿಯಾಗಿದೆ. ಇದು ಅಮೇರಿಕಾದ ಆಳುವ ಜನರಿಗೂ ಗೊತ್ತಿದೆ. ಬ್ರೂಸ್ ರೈಡೆಲ್ ಎಂಬಾತ, ಕ್ಲಿಂಟನ್ ಆಡಳಿತದಲ್ಲಿ, ಅಮೇರಿಕಾದ ಗೂಢಚಾರ ಸಂಸ್ಥೆ ಸಿಐಎಯಲ್ಲಿ ದುಡಿದ ಮನುಷ್ಯ, ಏಪ್ರಿಲ್ 2008ರಲ್ಲಿ 'ಫಾರಿನ್ ಅಫೈರ್ಸ್' ಗೆ ನೀಡಿದ ಸಂದರ್ಶನದಲ್ಲಿ ಆತ ಹೀಗೆ ಹೇಳುತ್ತಾನೆ: 'ಭಾರತ –ಅಮೇರಿಕಾದ ಸಂಬಂಧ ಸಹಕಾರಗಳಿಗೆ ಈಗಲೂ ಬಲವಾದ ವಿರೋಧವೇ ಇದೆ. ಕಮ್ಯುನಿಸ್ಟ್‌ರು ಇದನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಮತ್ತು ಮುಖ್ಯ ವಿರೋಧ ಪಕ್ಷವಾದ ಬಿಜೆಪಿಗಳ ನಡುವೆ ಭಾರತದ ವಿದೇಶಾಂಗ ನೀತಿಯ ಮುಖ್ಯ ಆಧಾರ – ಸ್ಥಂಭ, 'ಅಮೇರಿಕಾ ಭಾರತಗಳ ನಡುವಿನ ಸಂಬಂಧ' ಎಂಬ ಬಗ್ಗೆ ಬಹುತೇಕ ಸಮ್ಮತಿ ಇದೆ'.

ಈ ಪರಿಸ್ಥಿತಿಯಿಂದಾಗಿ ಎಡಪಕ್ಷಗಳು ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದಿಂದ ದೂರ ಸರಿಸಬೇಕಾಯಿತು. ಎಡಪಕ್ಷಗಳು ಬೆಂಬಲ ನೀಡುತ್ತಿರುವ ಸರ್ಕಾರವೊಂದು ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕೆ ವಿರೋಧವಾಗಿ ಇಂತಹ ಸಾಮರಿಕ ಮೈತ್ರಿಗೆ ಮುಂದಾದರೆ ಅದನ್ನು ಎಡಪಕ್ಷಗಳು ಬೆಂಬಲಿಸಬಹುದಿತ್ತೇ? ಈ ಮೂಲಭೂತ ಪ್ರಶ್ನೆಯ ಆಧಾರದಲ್ಲಿ ಎಡಪಕ್ಷಗಳು ಬೆಂಬಲ ವಾಪಸ್ ಪಡೆದವು.

ಭಾರತದ ರಾಷ್ಟ್ರೀಯ ಸಾರ್ವಭೌಮತೆಯನ್ನು ರಕ್ಷಿಸಬೇಕಾದಲ್ಲಿ ಅಮೇರಿಕಾದೊಂದಿಗಿನ ಈ ವ್ಯೂಹಾತ್ಮಕ ಮೈತ್ರಿಯನ್ನು ಕೊನೆಗಾಣಿಸಬೇಕಿದೆ. ಈಗ ಮನ ಮೋಹನ್ ಸಿಂಗ್ ಸರ್ಕಾರ ಮುಂದೆ ಹೋಗುತ್ತಿರುವ ರೀತಿ ನೀತಿ ನೋಡಿದರೆ ದೇಶದ ಸಾರ್ವಭೌಮತೆಯನ್ನು ಅದು ರಕ್ಷಿಸುತ್ತದೆಂದು ಯಾವ ಕಾರಣಕ್ಕೂ ನೆಚ್ಚಿಕೊಳ್ಳುವಂತಿಲ್ಲ. ಇಂತಹ ಸಾಮ್ರಾಜ್ಯ ಶಾಹಿ ಪರವಾದ ನೀತಿಯನ್ನು ಅಳವಡಿಸಿಕೊಳ್ಳುವ ಮೂಲಕ ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳನ್ನು ಮಣಿಸುವ ಶಕ್ತಿಯನ್ನು ಸಹ ಕಾಂಗ್ರೆಸ್ ತೋರುವುದು ಸಾಧ್ಯವಿಲ್ಲ. ಅನುಭವಗಳು ಏನು ಹೇಳುತ್ತವೆ? ಹಿಂದುತ್ವ ಶಕ್ತಿಗಳು ಮತ್ತು ಬಿಜೆಪಿ ಅಮೇರಿಕಾದ ಪರವಾಗಿವೆ. ಅದೇ ನೀತಿಯನ್ನೇ ಆಯ್ಕೆ ಮಾಡಿಕೊಳ್ಳುವ ಮೂಲಕ ಕಾಂಗ್ರೆಸ್ ಪಕ್ಷವು ಕೋಮುವಾದಿ ಶಕ್ತಿಗಳನ್ನು ಎದುರಿಸುವ ವಿಚಾರದಲ್ಲಿ ಇನ್ನಷ್ಟು ದುರ್ಬಲವಾಗಿದೆ.

ಭಾರತದ ಸಾರ್ವಭೌಮತೆಯನ್ನು ರಕ್ಷಿಸಿಕೊಳ್ಳುವ ಪ್ರಶ್ನೆಯು ನೇರವಾಗಿ ದುಡಿಯುವ ವರ್ಗದ ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಹೋರಾಟದೊಂದಿಗೆ ಬೆಸೆದುಕೊಂಡಿದೆ. ಸಾಮ್ರಾಜ್ಯಶಾಹಿ ಪ್ರೇರಿತ ಆರ್ಥಿಕ ನೀತಿಗಳು ಜನರ ಬದುಕಿನ ಮೇಲೆ ತೀವ್ರ ದಾಳಿ ನಡೆಸುತ್ತಿವೆ. ಅಮೇರಿಕಾದ ಸಾಮ್ರಾಜ್ಯಶಾಹಿ ಹುನ್ನಾರಗಳ ವಿರುದ್ಧ, ಹಾಗೂ ಭಾರತವನ್ನು ಈ ಸಾಮರಿಕ ಒಪ್ಪಂದದಿಂದ ಹೊರತರಲು ಅತ್ಯಂತ ವಿಶಾಲವಾದ ದೇಶಪ್ರೇಮಿ ಶಕ್ತಿಗಳು ಮತ್ತು ಪ್ರಜಾಸತ್ತಾತ್ಮಕ ವಿಭಾಗಗಳನ್ನು ಅಣಿನೆರೆಸಬೇಕಾಗಿದೆ.

○


ಸಾರ್ವಭೌಮ, ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಬಲಗೊಳಿಸಿ

ಸೀತಾರಾಂ ಯೆಚೂರಿ

ಸ್ವತಂತ್ರ ಭಾರತದಲ್ಲಿ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವ ಅಭಿನ್ನ, ಅವನ್ನು ಪರಸ್ಪರ ಪ್ರತ್ಯೇಕಿಸಲು ಸಾಧ್ಯವಿಲ್ಲ. ಅಂತಿಮವಾಗಿ ಯಾವುದೇ ಪ್ರಜಾಪ್ರಭುತ್ವ ತನ್ನ ಪ್ರತಿಯೊಂದು ಅಲ್ಪಸಂಖ್ಯಾತ ಸಮುದಾಯಕ್ಕೆ ಮೇಲೆ ಹೇಳಿದ ಎಲ್ಲಾ ಆಯಾಮಗಳಲ್ಲಿ ಎಷ್ಟರ ಮಟ್ಟಿಗೆ ರಕ್ಷಣೆ, ಭದ್ರತೆ ಮತ್ತು ಸಮಾನ ಅವಕಾಶ ಒದಗಿಸಿದೆ ಎಂಬುದೇ ಅದರ ಯಶಸ್ಸಿನ ಅಳತೆಗೋಲು. ಆದ್ದರಿಂದ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಬಲಗೊಳಿಸದೆ ಆಧುನಿಕ ಭಾರತದ ಭವಿಷ್ಯ ಭದ್ರವಾಗುವುದಿಲ್ಲ.

ಭಾರತದ ಸ್ವಾತಂತ್ರ್ಯದ ಆಚರಣೆಯೆಂದರೆ ಅದರ ಅಪಾರ ಹಾಗೂ ಶ್ರೀಮಂತ ವೈವಿಧ್ಯತೆಯ ಆಚರಣೆ. ಶತಮಾನಗಳ ಸಮ್ಮಿಶ್ರ ನಾಗರಿಕತೆಯ ಮುನ್ನಡೆಯಲ್ಲಿ ವಿಕಾಸಗೊಂಡ ವೈವಿಧ್ಯತೆಯಿದು. ಆದರೆ ಸ್ವಾತಂತ್ರ್ಯದ 61ನೇ ವಾರ್ಷಿಕೋತ್ಸವವನ್ನು ಆಚರಿಸುವಾಗ ಕೋಮುವಾದ ಮತ್ತು ಪ್ರತ್ಯೇಕತಾವಾದದ ಜ್ವಾಲೆಗಳು ಜಮ್ಮು ಮತ್ತು ಕಾಶ್ಮೀರದಲ್ಲಿ ಪರಸ್ಪರ ಪೈಪೋಟಿ ನಡೆಸುತ್ತಾ ಹಲವು ಮುಗ್ಧ ಜೀವಗಳನ್ನು ಬಲಿ ತೆಗೆದುಕೊಂಡುದನ್ನು ಕಾಣಬೇಕಾಯಿತು. ಕಾಶ್ಮೀರ ಕಣಿವೆಯಲ್ಲೆಲ್ಲಾ ಕರ್ಫ್ಯೂ ಜಾರಿಯಲ್ಲಿತ್ತು.

ಆರೆಸ್ಸೆಸ್ ಮತ್ತು ಅದರ ಕಬಂಧ ಬಾಹುಗಳು ಅಲ್ಲಿ ಸುಳ್ಳುಗಳನ್ನು ಹರಡುವ ಮೂಲಕ ಸರಕಾರಗಳು "ಮುಸ್ಲಿಂ ತುಷ್ಟೀಕರಣ" ನಡೆಸುತ್ತಿವೆ ಎಂಬ ದುಷ್ಟ ಕೋಮುವಾದಿ ಪ್ರಚಾರದಲ್ಲಿ ತೊಡಗಿದ್ದವು. ಹಜ್ ಯಾತ್ರೆಗೆ ಸಬ್ಸಿಡಿ ಕೊಡುವ ಸರಕಾರ ಅಮರನಾಥ ಯಾತ್ರೆ ನಡೆಸುವುದನ್ನು ತಡೆಯುತ್ತಿದೆ ಎಂಬ ಅವರ ಸುಳ್ಳನ್ನು ಜಮ್ಮುವಿನ ಜನ ನಂಬುತ್ತಾರೆ ಎಂಬುದು ಆಳವಾಗಿ ಬೇರೂರಿರುವ ಪೂರ್ವಾಗ್ರಹಗಳನ್ನು ಬಿಂಬಿಸುತ್ತದೆ. ಇವು ಕೆಲವೊಮ್ಮೆ ನಿಜವಾದ ಅನ್ಯಾಯಗಳಿಂದ, ಕೆಲವೊಮ್ಮೆ ಕಲ್ಪಿತ ಅನ್ಯಾಯಗಳಿಂದ ಮೂಡಿರುವ ಪೂರ್ವಾಗ್ರಹಗಳು. ನಿಜಸಂಗತಿಯೆಂದರೆ ಆಗ ಅಮರನಾಥ ಯಾತ್ರೆ ರಾಜ್ಯ ಸರಕಾರದ ಎಲ್ಲಾ ಅಗತ್ಯ ಸೌಲಭ್ಯಗಳೊಂದಿಗೆ ನಡೆಯುತ್ತಲೇ ಇತ್ತು.



ಇಲ್ಲಿ ತಲೆ ದೋರಿದ್ದ ಭೂ ವಿವಾದಕ್ಕೆ ಸಂವಾದದ ಮೂಲಕ ಪರಿಹಾರ ಹುಡುಕಿಕೊಳ್ಳಬಹುದಿತ್ತು. ಆದರೆ ಆರೆಸ್ಸೆಸ್/ಬಿಜೆಪಿಗೆ ನಿಜವಾಗಿ ಪರಿಹಾರ ಬೇಕಾಗಿರಲಿಲ್ಲ ಎಂದು ಕಾಣುತ್ತದೆ. ಅವರಿಗೆ ಬಹುಶಃ ಬೇಕಾಗಿದ್ದದ್ದು ಕೋಮುಧ್ರುವೀಕರಣವನ್ನು ತೀವ್ರಗೊಳಿಸುವುದು ಮತ್ತು ಅದನ್ನ ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸುವುದು. ಈ ಹಿಂಸಾಚಾರ, ರಕ್ತಪಾತಕ್ಕೆ ಪ್ರತಿಯಾಗಿ "ಹಿಂದೂ ವೋಟ್ ಬ್ಯಾಂಕ"ನ್ನು ಕ್ರೋಢೀಕರಿಸುವ ಒಂದು ಅವಕಾಶವಷ್ಟೇ ಅವರಿಗೆ ಕಾಣುತ್ತಿದ್ದುದು. ದುರದೃಷ್ಟವಶಾತ್ ಇದೇ ಕೋಮುವಾದದ ಇತಿಹಾಸ. ಅವರು ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲೇ ಮಹಾತ್ಮಾ ಗಾಂಧಿಯವರನ್ನು ಕೂಡಾ ಬಿಡಲಿಲ್ಲ ಎಂಬುದನ್ನು ಮರೆಯುವಂತಿಲ್ಲ.

ಇದರ ಇನ್ನೊಂದು ತುದಿಯಲ್ಲಿ ಕಾಶ್ಮೀರ ಕಣಿವೆಯ ಪ್ರತ್ಯೇಕತಾವಾದಿ ಉಗ್ರಗಾಮಿ ಗುಂಪುಗಳು ಈ ಕೋಮುವಾದಿ ಶಕ್ತಿಗಳಿಗೆ ಬಹಳ ಸಂತೋಷದಿಂದ ನೆರವು, ಪ್ರೋತ್ಸಾಹ ನೀಡುವುದನ್ನು ಕಾಣುತ್ತೇವೆ. ಯಾತ್ರಿಗಳಿಗೆ ಯಾತ್ರೆಯ ಸಂದರ್ಭದಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಮಾತ್ರ ಭೂಬಳಕೆಯ ವಿಧಾನವನ್ನು ತಾತ್ಕಾಲಿಕವಾಗಿ ಬದಲಿಸಿದ್ದನ್ನು ಒಂದು ಶಾಶ್ವತ ಕ್ರಮ ಎನ್ನುತ್ತಾ

ಇದನ್ನು ಇಸ್ರೇಲಿಗಳು ಪ್ಯಾಲೆಸ್ಟೇನ್‌ನ ನೆಲ ಅಕ್ರಮಿಸಿಕೊಂಡು ಅಲ್ಲಿ ಯೆಹೂದ್ಯರನ್ನು ನೆಲೆಗೊಳಿಸಿದ್ದಕ್ಕೆ ಹೋಲಿಸಲಾರಂಭಿಸಿದರು. ಇದು ರಾಜ್ಯದಲ್ಲಿ ವಿವಿಧ ಸಮುದಾಯಗಳ ಜನಸಂಖ್ಯೆಯ ಅನುಪಾತವನ್ನು ಬದಲಿಸುವ ಹುನ್ನಾರ ಎಂದು ಆಪಾದಿಸಿ ಈ ಉಗ್ರಗಾಮಿ ಗುಂಪುಗಳು ಭಾವೋದ್ರೇಕದ ವಾತಾವರಣ ಸೃಷ್ಟಿಸಿದವು. ಜಮ್ಮುವಿನಿಂದ ಬರುವ ಹೆದ್ದಾರಿ ಕಾಶ್ಮೀರ ಕಣಿವೆಯ ಜೀವಾಳವಾಗಿದ್ದು ಅದನ್ನು ಹಿಂದೂಗಳು ಅಡ್ಡಗಟ್ಟಿದ್ದರಿಂದ ಭಾರತ ಮತ್ತು ಪಾಕಿಸ್ತಾನದ ನಡುವಿನ ಹತೋಟಿ ರೇಖೆಯ ಆಚೆ ಇರುವ ಮುಝಫರಾಬಾದ್‌ನತ್ತ ಜಾಥಾ ಆರಂಭಿಸಿದರು. ಇದು ದೇಶದ ಭದ್ರತೆ ಮತ್ತು ಸಾರ್ವಭೌಮತೆಯ ಮೇಲೆ ಗಂಭೀರ ಪರಿಣಾಮ ಬೀರುವ ಕ್ರಮವಷ್ಟೇ ಅಲ್ಲ, ಕೋಮುವಾದಿ ಶಕ್ತಿಗಳು ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಹೇಗೆ ಪರಸ್ಪರ ಪೋಷಣೆ ನೀಡುತ್ತಾ ಒಂದನ್ನೊಂದು ಬಲಗೊಳಿಸುತ್ತವೆ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಈ ಪ್ರಕ್ರಿಯೆಯಲ್ಲಿ ಬಲಿಯಾಗುವುದು ಅಮಾಯಕ ಜೀವಗಳು. ಜತೆಗೆ ಶತಮಾನಗಳಿಂದ ಶ್ರದ್ಧೆಯಿಂದ ಕಟ್ಟಿ ಬೆಳೆಸಿದ ಹಿಂದುಗಳು ಮತ್ತು ಮುಸಲ್ಮಾನರ ನಡುವಿನ ಬೆಸುಗೆಯೂ ಬಲಿಯಾಗುತ್ತದೆ. ಭಾರತದ ಜಾತ್ಯಾತೀತ ಹಂದರ ಮತ್ತೊಮ್ಮೆ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಭಾರತದ ಜಾತ್ಯಾತೀತ ಬುನಾದಿಯನ್ನು ರಕ್ಷಿಸುವುದಾಗಿ ಹೇಳಿಕೊಂಡೇ ಅಸ್ತಿತ್ವಕ್ಕೆ ಬಂದ ಯುಪಿಎ ಇದುವರೆಗೆ ಈ ಜ್ವಾಲೆಯನ್ನು ನಂದಿಸುವುದರಲ್ಲಿ ವಿಫಲವಾಗಿದೆ. ಈ ಪರಿಸ್ಥಿತಿಯನ್ನು ಹೀಗೇ ವಿನಾಶಕಾರಿ ಅರಾಜಕತೆಯತ್ತ ಸರಿಯಲು ಬಿಡುವಂತಿಲ್ಲ. ನಮ್ಮ ಪ್ರಾದೇಶಿಕ ಸಾರ್ವಭೌಮತೆ ಮತ್ತು ಸಾಮಾಜಿಕ ಸಾಮರಸ್ಯದ ಮೇಲೆ ಇದು ಗಂಭೀರ ದುಷ್ಪರಿಣಾಮ ಬೀರುತ್ತದೆ.

ಈ ಸನ್ನಿವೇಶ ದೇಶದ ಪ್ರಜ್ಞೆಯನ್ನೇ ಅಲುಗಾಡಿಸಿದೆ; ನಮ್ಮ ಜಾತ್ಯಾತೀತ ಬುನಾದಿ ಇಷ್ಟೊಂದು ನಾಜೂಕಾಗಿದೆಯೇ ಎಂಬ ಆತಂಕ ಮೂಡಿಸಿದೆ. ಭಾರತದ ಶ್ರೀಮಂತ ಬಹುತ್ವದ ಐಕ್ಯತೆ ಮತ್ತು ಸಮಗ್ರತೆಯನ್ನು ಉಳಿಸಿಕೊಳ್ಳುವ ಏಕೈಕ ದಾರಿಯೆಂದರೆ ಈ ವೈವಿಧ್ಯತೆಯಲ್ಲಿ, ಭಾಷಿಕ, ಧಾರ್ಮಿಕ, ಸಾಮಾಜಿಕ. ಜನಾಂಗೀಯ, ಜಾತಿ, ಸಾಂಸ್ಕೃತಿಕ ಮತ್ತು ಪರಂಪರೆಗಳ ಎಲ್ಲಾ ಆಯಾಮಗಳನ್ನು ಆವರಿಸಿರುವ ಈ ವೈವಿಧ್ಯತೆಯಲ್ಲಿ, ಹಾಸುಹೊಕ್ಕಾಗಿರುವ ಏಕತೆಯ ಬಂಧಗಳನ್ನು ಬಲಗೊಳಿಸುವುದು. ಈ ವಿವಿಧತೆಯ ಆಯಾಮಗಳಲ್ಲಿ ಯಾವುದರಲ್ಲಾದರೂ ಸಮರೂಪತೆಯನ್ನು ಹೇರುವ ಪ್ರಯತ್ನ ಒಂದು ಅಂತರಿಕ ಸಾಮಾಜಿಕ ಸ್ಫೋಟವನ್ನು ಉಂಟುಮಾಡಿ ನಮ್ಮ ಐಕ್ಯತೆ ಮತ್ತು ಸಮಗ್ರತೆಗೆ ವಿಪತ್ತು ತರುತ್ತದೆ. ಕೋಮುವಾದ ಧಾರ್ಮಿಕವಾಗಿ ಇಂತಹುದೇ ಒಂದು ಸಮರೂಪತೆಯನ್ನು ಹೇರಲು ಪ್ರಯತ್ನಿಸುತ್ತದೆ. ಆರೆಸ್ಸೆಸ್‌ನ ಅತ್ಯಂತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ "ಹಿಂದೂರಾಷ್ಟ್ರ"ದ ಯೋಜನೆ ಇಂತಹ ಒಂದು ಪ್ರಯತ್ನ. ಇದು ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯದ ಪರಿಕಲ್ಪನೆಗೆ ತದ್ವಿರುದ್ಧವಾದ ಸಿದ್ಧಾಂತ.

ಹಾಗೆಯೇ, ಭಾರತದಲ್ಲಿ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವ ಅಭಿನ್ನ, ಅವನ್ನು ಪರಸ್ಪರ ಪ್ರತ್ಯೇಕಿಸಲು ಸಾಧ್ಯವಿಲ್ಲ. ಅಂತಿಮವಾಗಿ ಯಾವುದೇ ಪ್ರಜಾಪ್ರಭುತ್ವ ತನ್ನ ಪ್ರತಿಯೊಂದು ಅಲ್ಪಸಂಖ್ಯಾತ ಸಮುದಾಯಕ್ಕೆ ಮೇಲೆ ಹೇಳಿದ ಎಲ್ಲಾ ಆಯಾಮಗಳಲ್ಲಿ ಎಷ್ಟರ ಮಟ್ಟಿಗೆ ರಕ್ಷಣೆ, ಭದ್ರತೆ ಮತ್ತು ಸಮಾನ ಅವಕಾಶ ಒದಗಿಸಿದೆ ಎಂಬುದೇ ಅದರ ಯಶಸ್ಸಿನ ಅಳತೆಗೋಲು. ಆದ್ದರಿಂದ ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಬಲಗೊಳಿಸದೆ ಆಧುನಿಕ ಭಾರತದ ಭವಿಷ್ಯ ಭದ್ರವಾಗುವುದಿಲ್ಲ.

ಇದರ ಅರ್ಥ, ಕೋಮುವಾದ, ಪ್ರತ್ಯೇಕತಾವಾದ, ಅಷ್ಟೇ ಏಕೆ, ಉಗ್ರ ವಿಚ್ಛಿದ್ರಕತೆಯ ಎಲ್ಲಾ ಸ್ವರೂಪಗಳ ವಿರುದ್ಧ ಒಂದು ದೃಢ, ಯಾವುದೇ ರಾಜಿಯಿಲ್ಲದ ಹೋರಾಟವನ್ನು ಅವಿಶ್ರಾಂತವಾಗಿ ಮುಂದೊಯ್ಯಬೇಕು. ಈ ಶಕ್ತಿಗಳು ಸೋಲದೆ ಭಾರತ ಗೆಲ್ಲುವುದು ಸಾಧ್ಯವಿಲ್ಲ. ಆಧುನಿಕ ಭಾರತದ ವಿಜಯದ ಈ ಸಮರದಲ್ಲಿ ಒಟ್ಟಾಗಿ ಅದನ್ನು ಬಲಿಷ್ಟಗೊಳಿಸೋಣ.

○

With Best Compliments

All units of

All India Insurance Employees Association

With Best Compliments

Y. Vijaymohan Reddy

PWD Contractor
K.R.Puram
Bangalore

ಶುಭಾಶಯಗಳೊಂದಿಗೆ

ಬಾಗೇಪಲ್ಲಿ ಎಪಿಎಂಸಿ

ಚಿಕ್ಕಬಳ್ಳಾಪುರ ಜಿಲ್ಲೆ

ಬಿ. ವೆಂಕಟಶಿವಾರೆಡ್ಡಿ	:	ಅಧ್ಯಕ್ಷರು
ಸಿ.ಡಿ.ಗಂಗೂಲಪ್ಪ	:	ನಿರ್ದೇಶಕರು
ಗಂಗೀರೆಡ್ಡಿ	:	ನಿರ್ದೇಶಕರು
ಲಕ್ಷ್ಮೀನಾರಾಯಣ	:	ನಿರ್ದೇಶಕರು
ಆರ್.ಚಂದ್ರಶೇಖರರೆಡ್ಡಿ	:	ನಿರ್ದೇಶಕರು
ಸರಸ್ವತಮ್ಮ	:	ನಿರ್ದೇಶಕರು
ಕೊಂಡಪ್ಪ	:	ಕಾರ್ಯದರ್ಶಿಗಳು

ಶುಭಾಶಯಗಳೊಂದಿಗೆ

ಸಿ
ಐ
ಟಿ
ಯು

ಕರ್ನಾಟಕ ರಾಜ್ಯ
ಅಂಗನವಾಡಿ ನೌಕರರ ಸಂಘ


(ಸಿಐಟಿಯು ಸಂಯೋಜಿತ)

ವಿಳಾಸ : ನಂ.181, 11ನೇ ಅಡ್ಡರಸ್ತೆ,
ಕಬ್ಬನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು-560 002


ಸಾಹಿತಿ
ಬಳಗದಿಂದ

ಜನಶಕ್ತಿ ಕನ್ನಡ ವಾರಪತ್ರಿಕೆಗೆ
ಶುಭಾಶಯಗಳು

ಶುಭಾಶಯಗಳೊಂದಿಗೆ



ಶುಭಾಶಯಗಳೊಂದಿಗೆ



15-8-2008

62ನೇ

ಸ್ವಾತಂತ್ರ್ಯೋತ್ಸವ ದಿನಾಚರಣೆ




ನಮ್ಮ ಸ್ವಾತಂತ್ರ್ಯದ ಮೌಲ್ಯಗಳನ್ನು ಎತ್ತಿ ಹಿಡಿಯೋಣ

ಅಹಿಂಸೆ, ಸಹೋದರತ್ವ, ಸೌಹಾರ್ದತೆ, ಸಮಾನ ಅವಕಾಶ.
ದುರ್ಬಲರು ಮತ್ತು ಶೋಷಿತರ ಕಲ್ಯಾಣಕ್ಕೆ ವಿಶೇಷ ಒತ್ತು.

ಭಾರತದ 62ನೇ ಸ್ವಾತಂತ್ರ್ಯ ದಿನಾಚರಣೆಯಂದು ನಾಡಿನ ಜನತೆಗೆ ಶುಭಾಶಯಗಳು.







ಜನಪರ ಕಲ್ಯಾಣ ಕಾರ್ಯಕ್ರಮಗಳು

ಕೃಷಿ

- 10 ಹೆಚ್‌ಪಿ ವರೆಗಿನ ಪಂಪ್‌ಸೆಟ್‌ಗಳಿಗೆ **ಉಚಿತ ವಿದ್ಯುತ್**
- 50 ಲಕ್ಷ ಒಣಭೂಮಿ ಕೃಷಿ ಅವಲಂಬಿತ ಸಣ್ಣ ರೈತರಿಗೆ 1000 ರೂಪಾಯಿ **ಸಹಾಯಧನ**
- **ಶೇ. 3ರ ಬಡ್ಡಿದರದಲ್ಲಿ** ಕೃಷಿ ಸಾಲ
- ಕೃಷಿ ಉತ್ಪನ್ನಗಳ **ಆವರ್ತನಿಧಿಗೆ** 500 ಕೋಟಿ ರೂ.
- **ಸಾವಯವ ಕೃಷಿಗೆ** ಉತ್ತೇಜನ

ಶಿಕ್ಷಣ

- ಅನುದಾನಿತ ಹಾಗೂ ಸರ್ಕಾರಿ ಶಾಲಾ 8ನೇ ತರಗತಿಯ ಮಕ್ಕಳಿಗೆ **ಉಚಿತ ಬೈಸಿಕಲ್**
- ಉನ್ನತ ವ್ಯಾಸಂಗಕ್ಕೆ ಶೇ. 6ರ ಬಡ್ಡಿದರದಲ್ಲಿ ಸಹಾಯಧನ
- ಪರಿಶಿಷ್ಟ ಜಾತಿ / ಪಂಗಡ, ಹಿಂದುಳಿದ ವರ್ಗಗಳ ವಸತಿ ನಿಲಯಗಳ ಊಟ-ವಸತಿ ವೆಚ್ಚದಲ್ಲಿ ಹೆಚ್ಚಳ
- ಬಾಗಲಕೋಟೆಯಲ್ಲಿ ತೋಟಗಾರಿಕೆ ಮತ್ತು ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆ

ಜನಕಲ್ಯಾಣ

- **ಭಾಗ್ಯಲಕ್ಷ್ಮಿ** ಯೋಜನೆಯ ಮೊತ್ತ 1 ಲಕ್ಷ ರೂ.ಗಳಿಗೆ ಏರಿಕೆ
- **ಸಂಧ್ಯಾ ಸುರಕ್ಷಾ** : ಹಿರಿಯರಿಗೆ 400 ರೂ.ಗಳ ಮಾಸಾಶನ
- **ಸ್ತ್ರೀ ಶಕ್ತಿ** ಗುಂಪುಗಳ ಬಲವರ್ಧನೆ : ಶೇ. 6ರ ಬಡ್ಡಿಯ ಸಹಾಯಧನ
- ಶೇ. 75 ರಷ್ಟು ಅಂಗವಿಕಲತೆ ಉಳ್ಳವರಿಗೆ 1000 ರೂ. ಮಾಸಾಶನ
- ಮಹಿಳೆಯರಿಗೆ **'ತಾಯಿಭಾಗ್ಯ'** ಯೋಜನೆ
- **'ಆರೋಗ್ಯ ಕವಚ'** ದಡಿ ತುರ್ತು ಆರೋಗ್ಯ ಸೇವೆ

ಬೆಂಗಳೂರು ಅಭಿವೃದ್ಧಿ

- ಬೆಂಗಳೂರು ಮೂಲ ಸೌಕರ್ಯ ಅಭಿವೃದ್ಧಿಗೆ 1800 ಕೋಟಿ ರೂ.
- 60 ಸಾವಿರ ನಿವೇಶನಗಳ ಕೆಂಪೇಗೌಡ ನೂತನ ಬಡಾವಣೆ
- 350 ಕೋಟಿ ರೂ. ವೆಚ್ಚದಲ್ಲಿ ಮೇಲು ರಸ್ತೆ - ಅಂಡರ್ ಪಾಸ್
- ಮೆಟ್ರೋ ರೈಲು ಯೋಜನೆಗೆ 700 ಕೋಟಿ ರೂ.

ಮೂಲ ಸೌಕರ್ಯ

- 7 ಮಹಾನಗರ ಪಾಲಿಕೆಗಳ ಅಭಿವೃದ್ಧಿಗೆ 700 ಕೋಟಿ ರೂ.
- ಹೆಚ್ಚುವರಿ 1000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ
- ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಮಾನಯಾನ ಸೌಲಭ್ಯ
- ರಾಜ್ಯದ ರೈಲ್ವೆ ಯೋಜನೆಗಳ ಅನುಷ್ಠಾನಕ್ಕೆ 253 ಕೋಟಿ ರೂ.
- ಗ್ರಾಮೀಣ ಮತ್ತು ಜಿಲ್ಲಾ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಒತ್ತು

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ವಾರ್ತೆ

"ಅಭಿವೃದ್ಧಿಯೇ ನಮ್ಮ ಮಂತ್ರ"


To Mangalore
Kasaragod
Kannur
Payyambalam Beach
St. Angelo's Fort
ARABIAN SEA
Muzhuppilangad Drive-in Beach
Dharmadam Island
Thalassery Fort
Mahe
Not to scale
To Wayanad
Calicut
Wake up to Malabar
Suddenly, Kerala's hideaway beaches in Malabar are no longer a secret. Muzhuppilangad, the State's only drive-in beach where travellers can speed right through the beach sands for over four kilometres is blazing a new holiday trail. The wind-in-your-hair drive through an unpaved path fringed by coconut palms is just what a beach buff would die for. The excellent views, the sun-soaked, pristine ambience and the adjacent Dharmadam Island add more fun to the package. To check out Muzhuppilangad Beach and a whole range of experiences that make Malabar a unique, exotic part of God's Own Country, log on to www.keralatourism.org/malabar. You'll wake up to a new world.
Experience Malabar
Tropical forests Tree houses Drive-in beach Historic forts
Spice trails Theme village Temple art forms Malabari cuisine and more
kerala
God's Own Country
www.keralatourism.org
Call 1-800-425-4747 Kerala Tourism Park View Thiruvananthapuram 695 033 Kerala India
Fax: +91 471 2322279 Email: info@keralatourism.org
STARK Tvm 3708